ಪುಸ್ತಕ ಪ್ರಪಂಚ

ಸಂಪುಟ ೪೪ ಫೆಬ್ರವರಿ ೧೯೬೪ ಸಂಚಿಕೆ ೬



ವಿಷಯ ಸೂಚಿಕೆ

೧. ಪಿ. ಲಂಕೇಶ್—ಡಾ॥ ಕೃಷ್ಣ ಹಾಸನ ೧

೨. ನೊಬೆಲ್ ಪ್ರಶಸ್ತಿ ವಿಜೇತೆ ಟೋನಿ ಮಾರಿಸನ್—ಒಂದು ಪರಿಚಯ
—ಸಿ. ನಾಗಣ್ಣ ೭

೩. ಭೂಕಂಪ—ಒಂದು ವೈಜ್ಞಾನಿಕ ವಿಶ್ಲೇಷಣೆ
—ಡಾ. ಟಿ. ವಿ. ಶಿವರುದ್ರಪ್ಪ ೧೭

೪. ನನ್ನ ತಂದೆ, ಮಗ ಮತ್ತು ನಾನು—ಗೀತಾ ಸೀತಾರಾಮ್ ೪೩

೫. 'ಗ್ಯಾಟ್' ಒಪ್ಪಂದ ಮತ್ತು ಭಾರತ—ಎಚ್ಚೆಸ್ಕೆ ೪೯

ಮುಖಚಿತ್ರ: ಪಿ. ಲಂಕೇಶ್

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು

ಸಂಪುಟ ೪೪ | ಫೆಬ್ರವರಿ ೧, ೧೯೯೪ | ಸಂಚಿಕೆ ೬

ಪಿ. ಲಂಕೇಶ್

'ಪ್ರತಿಯೊಂದು ಸೃಷ್ಟಿಸುವ ಕೆಲಸವೂ ಜೀವವನ್ನು ಧಾರೆಯೆರೆವ ಕೆಲಸ' ಎಂಬ ಗಂಭೀರ ತಿಳಿವಳಿಕೆಯಿಂದ ಸಾಹಿತ್ಯಸೃಷ್ಟಿಗೆ ಸಂಪೂರ್ಣವಾಗಿ ತಮ್ಮನ್ನು ತೆತ್ತುಕೊಂಡ ಲಂಕೇಶ್ ಆಧುನಿಕ ಕನ್ನಡ ಸಾಹಿತ್ಯದ ಮಹತ್ವದ ಲೇಖಕರಲ್ಲೊಬ್ಬರು. ಅವರದು ವಿಶಿಷ್ಟವಾದ ಸೃಜನಾತ್ಮಕ ಪ್ರತಿಭೆ. ಸಾಹಿತ್ಯ, ಪತ್ರಿಕೋದ್ಯಮ, ಚಲನಚಿತ್ರ—ಈ ಮೂರೂ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಲಂಕೇಶ್ ಕಲಾಲೋಕಕ್ಕೆ ಸಾಕಷ್ಟು ಗಟ್ಟಿಯಾದುದನ್ನೇ ಕೊಟ್ಟಿದ್ದಾರೆ. ಇವರು ೮ ಮಾರ್ಚ್ ೧೯೩೫ರಂದು ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿಯಲ್ಲಿ ಜನಿಸಿದರು. ಆರಂಭದ ವಿದ್ಯಾಭ್ಯಾಸವನ್ನು ಶಿವಮೊಗ್ಗೆಯಲ್ಲಿ ಪಡೆದು ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದಿ ಬಿ. ಎ. (ಆನರ್ಸ್) ಪದವಿಯನ್ನೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ. ಎ. ಪದವಿಯನ್ನೂ ಪಡೆದರು. ಅನಂತರ ಕೆಲಕಾಲ ಇವರು ಶಿವಮೊಗ್ಗದಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದು ೧೯೬೬ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಸೇರಿದರು. ಅನೇಕ ವರ್ಷಗಳ ಕಾಲ ಕೆಲಸಮಾಡಿ ಕಡೆಗೆ ಆ ಹುದ್ದೆಯನ್ನು ತೊರೆದು ಲಂಕೇಶ್ ಪತ್ರಿಕೆಯನ್ನು ಆರಂಭಿಸಿ (೧೯೮೦) ಅದರ ಸಂಪಾದಕರಾದರು. ಈ ಪತ್ರಿಕೆಯನ್ನು ಅಂದಿನಿಂದಲೂ ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ.

'ನನ್ನ ಎಲ್ಲ ಆನಂದ ಬರೆಯುವುದರಲ್ಲೇ' ಎನ್ನುವ ಲಂಕೇಶ್ ಅವರ ಓದು, ತಿಳಿವಳಿಕೆ, ಆಸಕ್ತಿ ವೈವಿಧ್ಯಮಯವಾದದ್ದು ; ಕುತೂಹಲಕಾರಿಯಾದದ್ದು ; ಕೆಲವೊಮ್ಮೆ ಓದುಗರಿಗೆ ಶಾಕ್ ಕೊಡುವಷ್ಟು ಅನನ್ಯವಾದದ್ದು. ಕೆರೆಯ

ನೀರನು ಕೆರೆಗೆ ಚೆಲ್ಲಿ (೧೯೬೩) ಎಂಬ ಕಥಾಸಂಕಲನವನ್ನು ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಯವಾದ ಲಂಕೇಶ್ ಅನಂತರ ಕಾದಂಬರಿ, ನಾಟಕ, ಕಾವ್ಯ, ವಿಮರ್ಶೆ, ಅನುವಾದ—ಈ ಎಲ್ಲ ಪ್ರಕಾರಗಳಲ್ಲಿ ಬರೆದು ಹೆಸರುಮಾಡಿದರು. ನಾನಲ್ಲ (೧೯೭೦), ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ (೧೯೭೩), ಕಲ್ಲು ಕರಗುವ ಸಮಯ (೧೯೯೦)—ಇವು ಕಥಾಸಂಕಲನಗಳು. ಬಿರುಕು (೧೯೬೭), ಮುಸ್ಸಂಜೆಯ ಕಥಾಪ್ರಸಂಗ (೧೯೭೮), ಅಕ್ಕ (೧೯೯೧)—ಇವು ಕಾದಂಬರಿಗಳು. ಬಿಚ್ಚು (೧೯೬೭), ತಲೆಮಾರು (೧೯೭೩)—ಇವು ಕವನಸಂಕಲನಗಳು. ಪ್ರಸ್ತುತ (೧೯೭೦), ಕಂಡದ್ದು ಕಂಡಹಾಗೆ (೧೯೭೫)—ಇವು ವಿಮರ್ಶಾ ಸಂಕಲನಗಳು. ಟಿ. ಪ್ರಸನ್ನನ ಗೃಹಸ್ಥಾಶ್ರಮ (೧೯೬೪), ತೆರೆಗಳು (೧೯೬೫), ಪೋಲೀಸರಿದ್ದಾರೆ, ಎಚ್ಚರಿಕೆ, ಗಿಳಿಯು ಪಂಜರದೊಳಿಲ್ಲ, ನನ್ನ ತಂಗಿಗೊಂದು ಗಂಡು ಕೊಡಿ, ಸಿದ್ಧತೆ, ಕ್ರಾಂತಿ ಬಂತು ಕ್ರಾಂತಿ, ಸಂಕ್ರಾಂತಿ (೧೯೮೨), ಗುಣಮುಖ (೧೯೯೩)—ಇವು ನಾಟಕಗಳು. ಬೋದಿಲೇರ್ ಕವಿಯ ಕವಿತೆಗಳನ್ನು ಪಾಪದ ಹೂಗಳು (೧೯೭೪) ಎಂಬ ಹೆಸರಿನಲ್ಲಿ ಅನುವಾದಿಸಿದ್ದಾರೆ. ಎರಡು ಗ್ರೀಕ್ ನಾಟಕಗಳನ್ನು—ದೊರೆ ಈಡಿಪಸ್ ಮತ್ತು ಅಂತಿಗೊನೆ—ಕನ್ನಡಕ್ಕೆ ಅನುವಾದಿಸಿದ್ದಾರೆ.

ಲಂಕೇಶ್ ಅವರು ಸಾಹಿತ್ಯ ರಚನೆಗೆ ತೊಡಗಿದಂತ ಸಂದರ್ಭದಲ್ಲಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ಹಾಗೂ ಪ್ರಗತಿಶೀಲ ಪ್ರಕಾರಗಳು ಒಂದು ಸಂಕ್ರಮಣ ಅವಸ್ಥೆಯನ್ನು ತಲುಪಿದ್ದವು. ನವ್ಯ ಸಾಹಿತ್ಯ ತನ್ನ ಸ್ಪಷ್ಟದನಿಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯಲ್ಲಿತ್ತು. ಇಂಥ ಹೊತ್ತಿನಲ್ಲಿ ಲಂಕೇಶರು ನವ್ಯ ಲೇಖಕರೆಂದೇ ಗುರುತಿಸಿಕೊಂಡರು. ನವ್ಯ ಸಾಹಿತ್ಯವನ್ನು ರೂಢಿಸಿದ, ಬೆಳೆಸಿದ ಬಹುಮುಖ್ಯ ಲೇಖಕರಲ್ಲಿ ಇವರೂ ಒಬ್ಬರಾದರು. ಆದರೆ ಆ ಕಾಲದ ನವ್ಯರಿಗಿಂತ ಭಿನ್ನವಾಗಿ, ವಿಶಿಷ್ಟವಾಗಿ ತಮ್ಮದೇ ಆದ ಅಭಿವ್ಯಕ್ತಿಯ ಛಾಪನ್ನು ಸಾಹಿತ್ಯದಲ್ಲಿ ಮೂಡಿಸಿದರು. ಒಂದು ಬಗೆಯ ಬಂಡಾಯ ಮನೋಭಾವದ ಒರಟುತನ ಇವರ ಎಲ್ಲ ಬರೆವಣಿಗೆಯ ಹಿಂದೆ ಕಂಡರೂ ಮಾನವೀಯತೆಯ ಒರತೆ ಅಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವುದನ್ನು ನಾವು ಕಾಣಬಹುದು. ಸಣ್ಣ ಕತೆಗಳ ಕ್ಷೇತ್ರವನ್ನೇ ತೆಗೆದುಕೊಂಡರೆ ಕೆಲವು ಅತ್ಯುತ್ತಮ ಕತೆಗಳನ್ನು ಇವರು ಕನ್ನಡಕ್ಕೆ ಕೊಟ್ಟಿದ್ದಾರೆ. ರೊಟ್ಟಿ, ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ, ಮಾರಲಾಗದ ನೆಲ, ವಾಮನ—ಮುಂತಾದ ಕತೆಗಳು ಕನ್ನಡದ ಶ್ರೇಷ್ಠ ಕತೆಗಳ ಸಾಲಿಗೆ ಸೇರುವ ಸತ್ವವನ್ನು ಪಡೆದುಕೊಂಡಿವೆ.

'ರೊಟ್ಟಿ' ಕತೆ ಮನುಷ್ಯನ ಮೂಲಭೂತ ಪ್ರವೃತ್ತಿಗಳಲ್ಲಿ ಒಂದಾದ ಹಸಿವಿಗೆ ಸಂಬಂಧಿಸಿದ್ದು. ಕತೆಯಲ್ಲಿ ಈ ಹಸಿವು ಸೃಷ್ಟಿಸುವ ರಾಕ್ಷಸಲೋಕ ನಮ್ಮನ್ನು ಅಲ್ಲಾಡಿಸಿಬಿಡುತ್ತದೆ. ಈ ಕತೆಯಲ್ಲಿ ಬರುವವರು ಮುದುಕಿ, ವ್ಯಕ್ತಿ, ಪೋಲಿಸ್, ಜನ. ಇಲ್ಲಿ ಮೇಲುನೋಟಕ್ಕೆ ಯಾರಿಗೂ ಯಾವ ಸಂಬಂಧವೂ ಇಲ್ಲ. ಆದರೆ 'ಹಸಿವು' ತನಗೆ ತಾನೇ ಎಲ್ಲ ಸಂಬಂಧಗಳನ್ನೂ ಸೃಷ್ಟಿಸಿಬಿಡುತ್ತದೆ. 'ನಾನಲ್ಲ' ಕಥಾಸಂಕಲನಕ್ಕೆ ಮುನ್ನುಡಿ ಬರೆಯುತ್ತ ಅಡಿಗರು 'ರೊಟ್ಟಿ' ಕತೆಯನ್ನು ಕುರಿತು ಹೇಳಿರುವ ಮಾತುಗಳು ತುಂಬ ಅರ್ಥಪೂರ್ಣವಾಗಿವೆ. "ಪೂರ್ವಗ್ರಹೀತವಾದೊಂದು ಸಿದ್ಧಾಂತಕ್ಕೆ ಕಟ್ಟುಬೀಳದೆ ಬದುಕನ್ನು ನೋಡುವ ಕಲೆಗಾರನ ಪೂರ್ಣದೃಷ್ಟಿಯ ನೋಟಕ್ಕೆ ಈ ಕತೆ ಅತ್ಯುತ್ತಮ ಉದಾಹರಣೆ....ಈ ಕತೆ ಕನ್ನಡ ಸಾಹಿತ್ಯದಲ್ಲಿಯೇ ಒಂದು ಅತ್ಯುತ್ತಮ ಸಣ್ಣ ಕತೆ ಎನ್ನಬಹುದು." ಈ ಕತೆ 'ಬ್ರೆಡ್' ಎಂಬ ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡಿದೆ. 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ'ಯಲ್ಲಿ ಹುಡುಗನೊಬ್ಬ ತನಗರಿವಿಲ್ಲದೇ ಬದುಕಿನ ವಾಸ್ತವಗಳಿಗೆ ಮನಸ್ಸು ತೆರೆಯುತ್ತಿರುವುದನ್ನೂ ಹೀಗೆ ತೆರೆಯುತ್ತಿರುವಂತೆ ಆತ ಅನುಭವಿಸುವ ನೋವು, ಯಾತನೆಗಳನ್ನೂ ಅತ್ಯಂತ ಸೂಕ್ಷ್ಮವಾಗಿ, ಸಮರ್ಥವಾಗಿ, ಚಿತ್ರವತ್ತಾಗಿ ಸೆರೆಹಿಡಿಯಲಾಗಿದೆ.

ಕವಿಯಾಗಿಯೂ ಲಂಕೇಶ್ ಗಮನ ಸೆಳೆದಿದ್ದಾರೆ. ಆದರೆ ಇವರ ಪದ್ಯ ಇವರ ಗದ್ಯದಂತೆ ನಮಗೆ ಹೆಚ್ಚು ಆಪ್ತವಾಗುವುದಿಲ್ಲ. 'ಅವ್ವ' ಇವರ ಅತ್ಯುತ್ತಮ ಕವನ. ಅಕ್ಕ-ತಮ್ಮ, ಬಿಚ್ಚು ಮುಂತಾದ ಕವಿತೆಗಳನ್ನು ಇಲ್ಲಿ ಹೆಸರಿಸಬಹುದು. 'ನೀಲು' ಎಂಬ ಹೆಸರಿನಲ್ಲಿಯೂ ಇವರು ಕವಿತೆಗಳನ್ನು ಬರೆದಿದ್ದಾರೆ; ಈಗಲೂ ಬರೆಯುತ್ತಿದ್ದಾರೆ. ಆದರೆ ಈ ಕವಿತೆಗಳೆಲ್ಲ 'ಲಹರಿ'ಗಳು, ಅಷ್ಟೇ. ನವ್ಯಕಾವ್ಯದ ಪ್ರಾತಿನಿಧಿಕ ಸಂಕಲನವೊಂದನ್ನು 'ಅಕ್ಷರ ಹೊಸ ಕಾವ್ಯ' ಎಂಬ ಹೆಸರಿನಲ್ಲಿ ಸಂಪಾದಿಸಿಕೊಟ್ಟಿದ್ದಾರೆ (೧೯೭೦). ಈ ಅಂಥಾಲಜಿಗೆ ಅವರು ಬರೆದಿರುವ ಮುನ್ನುಡಿ ನವ್ಯಕಾವ್ಯದ ವಿಶಿಷ್ಟತೆಯನ್ನು ದಾಖಲಿಸುವ ಒಂದು ಉತ್ತಮ ಪ್ರಯತ್ನವಾಗಿದೆ. ಇತ್ತೀಚೆಗೆ ಈ ಸಂಕಲನದ ಪರಿಷ್ಕೃತ ಆವೃತ್ತಿಯೂ ಪ್ರಕಟವಾಗಿದೆ.

ನಾಟಕ ಕ್ಷೇತ್ರಕ್ಕೆ ಬಂದರೆ ಟಿ. ಪ್ರಸನ್ನನ ಗೃಹಸ್ಥಾಶ್ರಮ, ತೆರೆಗಳು, ಸಂಕ್ರಾಂತಿ, ಕ್ರಾಂತಿ ಬಂತು ಕ್ರಾಂತಿ—ಈ ನಾಟಕಗಳು ಓದುಗನಿಗೆ ತುಂಬ ಆಪ್ತವಾಗುತ್ತವೆ. ಟಿ. ಪ್ರಸನ್ನನ ಗೃಹಸ್ಥಾಶ್ರಮದಲ್ಲಿ ವಿರಸದಾಂಪತ್ಯದ

ಚಿತ್ರವನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಇರುವ ಸ್ಥಿತಿಯಿಂದ
ಪಾರಾಗಲು, ಬಿಡುಗಡೆ ಹೊಂದಲು ನಡೆಸುವ ಪ್ರಯತ್ನವೇ ಈ ನಾಟಕದ
ಕೇಂದ್ರ. ಇಲ್ಲಿ ಬರುವ ಮಿತ್ರರಿಬ್ಬರ ಹುಸಿ ಬದುಕು, ಅವರಿಂದ ಉಂಟಾಗುವ
ದಾಂಪತ್ಯದ ಬಿರುಕು, ಮುಜಗರ ಉಂಟುಮಾಡುವ ಪರಿಸ್ಥಿತಿಯಿಂದ
ಪಾರಾಗಲು ಅವರು ನಡೆಸುವ ಪ್ರಯತ್ನವನ್ನೂ ಅವರ ವ್ಯಕ್ತಿತ್ವದ ಟೊಳ್ಳು
ತನವನ್ನೂ ಈ ನಾಟಕ ಹಾಸ್ಯ, ವ್ಯಂಗ್ಯ, ತಮಾಷೆ ಹಾಗೂ ವಿಡಂಬನೆಯ
ಮೂಲಕ ಅನಾವರಣಗೊಳಿಸುತ್ತದೆ. 'ಸಂಕ್ರಾಂತಿ' ಹನ್ನೆರಡನೆಯ ಶತಮಾನ
ದಲ್ಲಿ ನಡೆದ ಸಾಮಾಜಿಕ ಆಂದೋಲನವನ್ನೂ ಅದರ ಸಾಫಲ್ಯವೈಫಲ್ಯವನ್ನೂ
ಬಸವಣ್ಣನವರ ಬದುಕಿನ ಹಿನ್ನೆಲೆಯಲ್ಲಿ ಚಿತ್ರಿಸುವ ಇತಿಹಾಸಿಕ ನಾಟಕ.
ವರ್ಗಸಂಘರ್ಷದಿಂದ ಸಮಾಜದಲ್ಲಿ ಉಂಟಾಗುವ ಕ್ಷೋಭೆ, ಇದರಿಂದ ಸದಾ
ಲಾಭ ಪಡೆದುಕೊಳ್ಳುವ ವ್ಯವಸ್ಥೆ, ಪರಿಣಾಮವಾಗಿ ಬದುಕು ದುರಂತವಾಗು
ವುದರ ಚಿತ್ರಣವನ್ನು ಈ ನಾಟಕ ನೀಡುತ್ತದೆ.

ಲಂಕೇಶ್ ಹೇಗೆ ಸೃಜನಶೀಲ ಲೇಖಕರೋ ಹಾಗೆ ಅವರ ಅನುವಾದ ಕೂಡ
ಸೃಜನಶೀಲವಾದದ್ದು. ಎರಡು ಗ್ರೀಕ್ ನಾಟಕಗಳನ್ನು ತುಂಬ ಸಮರ್ಥವಾಗಿ
ಕನ್ನಡಕ್ಕೆ ತಂದಿದ್ದಾರೆ. ಗಂಭೀರ ನಾಟಕವೆಂದರೆ ತುಂಬ ಗಂಭೀರವಾದ ಭಾಷಾ
ಶೈಲಿಯಲ್ಲಿಯೇ ಅನುವಾದಗೊಳ್ಳಬೇಕೆಂಬ ಸಾಂಪ್ರದಾಯಿಕ ನಂಬಿಕೆಯನ್ನು
ಹೊಡೆದುಹಾಕಿ ಅತ್ಯಂತ ಸರಳ ಸುಂದರ ಗದ್ಯದಲ್ಲಿ ಅನುವಾದಿಸಿರುವುದು ಈ
ನಾಟಕಗಳ ಹೆಗ್ಗಳಿಕೆ. ಇಲ್ಲಿನ ಭಾಷೆ ಸರಳವೂ ಸುಲಲಿತವೂ ಆಗಿದ್ದು ಕಾವ್ಯಾಂಶ
ವನ್ನು ಪಡೆದುಕೊಂಡಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ದೊರೆ
ಈಡಿಪಸ್ ಹಾಗೂ ಅಂತಿಗೊನೆ ಹೊಸಗನ್ನಡದಲ್ಲಿ ಮರುಹುಟ್ಟುಪಡೆದು
ಕೊಂಡಿವೆ. ಹೀಗೆಯೇ ಬೋದಿಲೇರ್ ಕವಿಯ ಕಾವ್ಯವನ್ನು ಮೂಲದ ಎಲ್ಲ
ಜೀವಸತ್ವದೊಂದಿಗೆ ಕನ್ನಡಕ್ಕೆ ಧಾರೆ ಎರೆದಿರುವುದು ಲಂಕೇಶರ ಸೃಷ್ಟಿಶೀಲ
ಪ್ರತಿಭೆಗೆ ಇನ್ನೊಂದು ಸಾಕ್ಷಿ. ಫ್ರೆಂಚ್ ಕವಿ ಬೋದಿಲೇರ್ ನರಕವನ್ನು
ಬದುಕು ಸಮೃದ್ಧ ಕಾವ್ಯವನ್ನು ಜಗತ್ತಿಗೆ ನೀಡದವನು ; ಓದುಗನನ್ನು ಬೆಚ್ಚಿ
ಬೀಳಿಸುವಂತೆ ಬರೆಯದವನು ನಿಜವಾದ ಲೇಖಕನೇ ಅಲ್ಲ ಎಂಬ ನಂಬಿಕೆ
ಯುಳ್ಳವನು. ಓದುಗನನ್ನು ತಲ್ಲಣಗೊಳಿಸುವ, ಅವನನ್ನು ಬೆಚ್ಚಿಬೀಳಿಸುವ,
ಅವನಲ್ಲಿ ಬದುಕಿನ ಬಗ್ಗೆ ಗಾಢಾಸಕ್ತಿ ಮೂಡಿಸುವ ಬೆರಗು ಬೋದಿಲೇರ್‌ನ
ಕಾವ್ಯಕ್ಕಿದೆ. ಅಂಥ ಕಾವ್ಯ ಲಂಕೇಶ್‌ರಿಂದಾಗಿ ಕನ್ನಡಕ್ಕೆ ದೊರಕಿದೆ. ಬೋದಿಲೇರ್
ಕವಿಯ ಕಾವ್ಯವನ್ನು ಕುರಿತು ಆ ಸಂಕಲನಕ್ಕೆ ಲಂಕೇಶ್ ಬರೆದಿರುವ

ಮುನ್ನುಡಿ ಕೂಡ ಕಲೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ತುಂಬ ಬೆಲೆಯುಳ್ಳದ್ದು.

ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟ ಛಾಪನ್ನು ಮೂಡಿಸಿರುವಂತೆಯೇ ಚಲನಚಿತ್ರ ಹಾಗೂ ಪತ್ರಿಕೋದ್ಯಮರಂಗದಲ್ಲಿಯೂ ಲಂಕೇಶ್ ಅವರು ಪ್ರಥಮ ದರ್ಜೆಯ ಸಾಧನೆಮಾಡಿದ್ದಾರೆ. ಪಲ್ಲವಿ (೧೯೭೬), ಅನುರೂಪ, ಖಂಡವಿದಕೋ ಮಾಂಸವಿದಕೋ, ಎಲ್ಲಿಂದಲೋ ಬಂದವರು—ಎಂಬ ನಾಲ್ಕು ಕಲಾತ್ಮಕ ಚಿತ್ರಗಳನ್ನು ಲಂಕೇಶ್ ನಿರ್ದೇಶಿಸಿದ್ದಾರೆ. ಅತ್ಯುತ್ತಮ ನಿರ್ದೇಶನಕ್ಕಾಗಿ ಇವರಿಗೆ 'ಪಲ್ಲವಿ' ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ. ಪಲ್ಲವಿ, ಎಲ್ಲಿಂದಲೋ ಬಂದವರು—ಈ ಚಿತ್ರಗಳು ಚಿತ್ರರಸಿಕರ ಪ್ರಶಂಸೆಗೂ ಪಾತ್ರವಾಗಿವೆ. 'ಎಲ್ಲಿಂದಲೋ ಬಂದವರು' ಚಿತ್ರದ ಕಥೆ ಇಂಗ್ಲಿಷ್ ಲೇಖಕಿ ಕ್ಯಾಥರೀನ್ ಅನೆ ಪೋರ್ಟರಳ 'ನೂನ್ ವೈನ್' (Noon wine) ಕಾದಂಬರಿಯನ್ನು ಆಧರಿಸಿದ್ದು. ಆದರೆ ಹಾಗೆಂದು ಲಂಕೇಶ್ ಅವರು ಇದುವರೆಗೆ ಎಲ್ಲಿಯೂ ಹೇಳಿಕೊಂಡಿಲ್ಲ. ಈ ಕಥೆ ಕನ್ನಡದ ಮಣ್ಣಿನ ಗುಣವನ್ನು ಪಡೆದುಕೊಂಡು ಕನ್ನಡದ್ದೇ ಆಗಿರುವುದು ಬೇರೆ ಮಾತು. (ಇದೇ ಸಂದರ್ಭದಲ್ಲಿ ಯು. ಆರ್. ಅನಂತಮೂರ್ತಿ ಅವರ 'ಮೌನಿ' ಕಥೆಯನ್ನೂ ಬರ್ನಾರ್ಡ್ ಮಲಮೂಡನ 'ಮೌರ್ನರ್ಸ್' ಕಥೆಯನ್ನೂ ಸ್ಮರಿಸಬಹುದು).

'ಲಂಕೇಶ್ ಪತ್ರಿಕೆ'ಯ ಆರಂಭ ಲಂಕೇಶರ ಬದುಕಿನ ಒಂದು ಮಹತ್ವದ ಘಟ್ಟವೆನ್ನಬಹುದು. ಇವರ ಚಿಂತನೆಗೆ ಸಾಮಾಜಿಕ ಕಾಳಜಿಯೂ ಇನ್ನೂ ಹೆಚ್ಚು ಗಟ್ಟಿಯಾಗಿ ಬೆಸೆದುಕೊಂಡಿತು. ಹಾಗಾಗಿ ಇವರ ಬರವಣಿಗೆ ಕೂಡ ಇನ್ನಷ್ಟು ಚೂಪನ್ನೂ ಮೊನಚನ್ನೂ ವ್ಯಂಗ್ಯವನ್ನೂ ವಿಡಂಬನೆಯನ್ನೂ ಜೀವಂತಿಕೆಯನ್ನೂ ಪಡೆದುಕೊಂಡಿತೆನ್ನಬಹುದು. ಕನ್ನಡದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭದಲ್ಲಿಯೂ ಲಂಕೇಶ್ ಪತ್ರಿಕೆಯ ಪ್ರಕಟಣೆ ಒಂದು ಗಮನಾರ್ಹ ಸಂಗತಿಯಾಯಿತು. ಜಡ್ಡುಗಟ್ಟಿದ್ದ ಕನ್ನಡಪತ್ರಿಕೋದ್ಯಮವನ್ನೂ ಓದುಗರನ್ನೂ ಲಂಕೇಶ್ ಪತ್ರಿಕೆ ಬಡಿದೆಬ್ಬಿಸಿತು; ಹೊಸ ಸಂವೇದನೆಯನ್ನೂ ಚಿಂತನೆಯನ್ನೂ ಹುಟ್ಟುಹಾಕಿತು. ಅನೇಕ ಹೊಸ ಲೇಖಕರನ್ನು ಕನ್ನಡಕ್ಕೆ ಪರಿಚಯಿಸಿತು. ಭಾರತೀಯ ಪತ್ರಿಕೋದ್ಯಮ ರಂಗದಲ್ಲಿ ಈ ಬಗೆಯಲ್ಲಿ ಪ್ರಕಟವಾದ, ಪ್ರಸಿದ್ಧಿ ಪಡೆದ ಪತ್ರಿಕೆ ಭಾರತೀಯ ಭಾಷೆಗಳಲ್ಲಿ ಇನ್ನೊಂದಿಲ್ಲ ಎಂಬ ದಾಖಲೆಯನ್ನು ಲಂಕೇಶ್ ಪತ್ರಿಕೆ ಸ್ಥಾಪಿಸಿತು. ಈಗಲೂ ಲಂಕೇಶ್ ಪತ್ರಿಕೆಯ ಜೀವಾಳ—ಲಂಕೇಶರೇ. ಪ್ರತಿ ವಾರ ಅವರು ಬರೆಯುವ ಟೀಕೆ—ಟಿಪ್ಪಣಿ,

ಮರೆಯುವ ಮುನ್ನ – ಈ ಕಾಲಂಗಳು ಓದಿಗನಿಗೆ ರಸದೌತಣ; ಅವನ ಅರಿವನ್ನೂ ತಿಳಿವಳಿಕೆಯನ್ನೂ ವಿಸ್ತರಿಸುವ, ಆತನನ್ನು ಚಿಂತನೆಗೆ ತೊಡಗಿಸುವ ಜೀವದ್ರವ್ಯ ಈ ಕಾಲಂಗಳಲ್ಲಿರುತ್ತದೆ. ಲಂಕೇಶರ ಓದಿನ ಹರವು, ವೈವಿಧ್ಯ, ಅನುಭವ ಪಕ್ವತೆ, ವಿಷಯ ಗ್ರಹಿಕೆ, ಅದನ್ನು ದಾಖಲಿಸುವ ಅನನ್ಯತೆಯಿಂದಾಗಿ ಈ ಬರೆಹಗಳು ನಮ್ಮನ್ನು ಬಹಳಷ್ಟು ಕಾಡುತ್ತವೆ. ಒಮ್ಮೆ ಚೆಲುವೆ ನಟಿ ಮರ್ಲಿನ್ ಮನ್ರೋ ಬಗ್ಗೆ, ಇನ್ನೊಮ್ಮೆ ಕುದುರೆ ಜೂಜಿನ ಬಗ್ಗೆ, ಇದ್ದಕ್ಕಿದ್ದಂತೆ ನೆರೂದ ಬಗ್ಗೆ, ಮತ್ತೊಮ್ಮೆ ಯೇಟ್ಸ್ ಬಗ್ಗೆ, ಮಗದೊಮ್ಮೆ ಹೂವುಗಳ ಬಗ್ಗೆ—ಹೀಗೆ ಯಾವುದರ ಬಗ್ಗೆಯೇ ಬರೆಯಲಿ ನಮ್ಮನ್ನು ತಟ್ಟುವಂತೆ ಲಂಕೇಶ್ ಬರೆಯ ಬಲ್ಲರು. ಪತ್ರಿಕೋದ್ಯಮದ ಈ ಬರೆವಣಿಗೆಯೂ ಸೃಜನಶೀಲವಾಗಬಹುದು ಎಂಬುದಕ್ಕೆ ಇವರ 'ಟೀಕೆ–ಟಿಪ್ಪಣಿ' ಕಾಲಂ ಸಾಕ್ಷಿಯಾಗಿದೆ. ಈ ಬರೆಹಗಳು ಇತ್ತೀಚೆಗೆ ಪುಸ್ತಕ ರೂಪದಲ್ಲಿಯೂ ಸಂಕಲನಗೊಂಡಿವೆ.

ಲಂಕೇಶ್ ಕೆಲವೊಮ್ಮೆ ಒಬ್ಬ ವ್ಯಕ್ತಿಯಾಗಿ ವಿವಾದಾಸ್ಪದರು. ಒಮ್ಮೊಮ್ಮೆ ಇವರ ಮಾತು, ಬರೆಹ ಸಿನಿಕತನದ ಅಂಚಿಗೂ ಹೋಗಿಬಿಡುವುದುಂಟು. ಹೀಗೆ ರೂಕ್ಷವಾಗುವ ಆಕ್ರೋಶದ ಹಿಂದೆ ಮಾನವೀಯತೆಯ ಮಿಡಿತವೂ ಇರುವುದ ರಿಂದ ಇವರನ್ನು ಅನೇಕಸಲ ಒಪ್ಪಿಕೊಂಡುಬಿಡಬೇಕಾಗುತ್ತದೆ. ಕಿತ್ತಾಡುತ್ತ, ಜಗ್ಗಾಡುತ್ತ, ಜಗಳವಾಡುತ್ತ ಸೀರಿಯಸ್ಸಾಗಿ ಬರೆಯುವುದೇ ಲಂಕೇಶ್‌ರ ರೀತಿ. ಈಗ ಲಂಕೇಶರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿದೆ—ಅವರ ಸೃಜನಶೀಲ ಸಾಹಿತ್ಯಕ್ಕಾಗಿ (ಕಲ್ಲುಕರಗುವ ಸಮಯ ಕಥಾಸಂಕಲನಕ್ಕೆ). ಪ್ರಶಸ್ತಿಯಿಂದ ಯಾವ ನಿಜವಾದ ಲೇಖಕನೂ 'ದೊಡ್ಡ'ವನಾಗುವುದಿಲ್ಲ. ಆದರೆ ಪ್ರಶಸ್ತಿ ಹಾಗೂ ಗುರುತಿಸುವಿಕೆ ಆರೋಗ್ಯವಂತ ಸಮಾಜದ ಜೀವಂತಿಕೆಯ ಸಂಕೇತವೆನ್ನಬಹುದು. ಲಂಕೇಶ್ ಅವರಿಂದ ಕನ್ನಡ ಸಾಹಿತ್ಯ ಲೋಕ ನಿರೀಕ್ಷಿಸು ವುದು ಇನ್ನೂ ಇದೆ.

ಡಾ॥ ಕೃಷ್ಣ ಹಾಸನ

ಆಲಸ್ಯವು ವ್ಯಕ್ತಿಯ ಜೀವನ ಮರಣವಾಗಿದೆ

—ಜೆರಿಮಿ ಟೇಲರ್

ನೊಬೆಲ್ ಪ್ರಶಸ್ತಿ ವಿಜೇತೆ ಟೋನಿ ಮಾರಿಸನ್
ಒಂದು ಪರಿಚಯ

೧೯೯೩ನೇ ಸಾಲಿನ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿ ಗಳಿಸಿದ ಟೋನಿ ಮಾರಿಸನ್ ಅಮೆರಿಕದ ಒಹಾಯೊ ಪ್ರಾಂತ್ಯದ ಲೊರೇನ್‌ನಲ್ಲಿ ೧೯೩೧ ರಲ್ಲಿ ಹುಟ್ಟಿದರು. ಈ ಉನ್ನತವಾದ ಪ್ರಶಸ್ತಿಗೆ ಪಾತ್ರರಾದ ಇವರು ಅಮೆರಿಕದ ಪ್ರಪ್ರಥಮ ಕಪ್ಪು ಮಹಿಳೆ. ೧೯೭೦ ರಲ್ಲಿ ಇವರು ತಮ್ಮ ಮೊದಲನೆಯ ಕಾದಂಬರಿಯನ್ನು ಪ್ರಕಟಿಸಿದ ತರುವಾಯ ಕೇವಲ ೨೩ ವರ್ಷಗಳ ಸಂಕ್ಷಿಪ್ತ ಅವಧಿಯಲ್ಲಿ ನೊಬೆಲ್ ಪ್ರಶಸ್ತಿಯನ್ನು ಎಟುಕಿಸಿಕೊಂಡದ್ದು ಒಂದು ವಿಧದ ದಾಖಲೆಯೆಂದು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಇಷ್ಟಾಗಿಯೂ ಟೋನಿ ಮಾರಿಸನ್ ತಾವು ನಿಧಾನ ಗತಿಯಲ್ಲಿ ಬರೆಯುವ ಲೇಖಕಿಯೆಂದು ತಮ್ಮನ್ನು ತಾವು ಬಣ್ಣಿಸಿಕೊಳ್ಳುತ್ತಾರೆ.

೧೯೯೨ ರಲ್ಲಿ ವೆಸ್ಟ್ಇಂಡೀಸ್‌ನ ಡೆರಿಕ್‌ವಾಲ್ಕಾಟರು ನೊಬೆಲ್ ಪ್ರಶಸ್ತಿ ಗೆದ್ದಿದ್ದರು. ಅದರ ಹಿಂದಿನ ವರ್ಷ ದಕ್ಷಿಣ ಆಫ್ರಿಕಾದ ನೆಡೀಮ್ ಗಾರ್ಡಿಮರ್ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಡೆರಿಕ್‌ವಾಲ್ಕಾಟರ ನಂತರ ಟೋನಿ ಮಾರಿಸನ್‌ರವರು ಜಗತ್ತಿನ ಗಮನವನ್ನು ತಮ್ಮ ಕಡೆ ಸೆಳೆದು ಕೊಂಡಿರುವುದು ಒಂದು ಮಹತ್ವದ ಸಂಗತಿಯಾಗಿದೆ. ಇಬ್ಬರೂ ಆಫ್ರಿಕನ್ ಮೂಲದವರೆಂಬುದು ಕುತೂಹಲವುಂಟುಮಾಡುವ ವಿಷಯ. ಮಿಸ್‌ಮಾರಿಸನ್ ಅಮೆರಿಕದಲ್ಲೇ ಹುಟ್ಟಿ ಬೆಳೆದವರಾದರೂ ತಲೆತಲಾಂತರದ ಹಿಂದೆ ತಮ್ಮ ತಾಯ್ನೆಲವನ್ನು ಬಿಟ್ಟು ಬಂದು ಅಮೆರಿಕದಲ್ಲಿ ತೊತ್ತಾಗಿ ಬದುಕು ಪ್ರಾರಂಭಿಸಿದ ಹಿರೀಕರ ನೆನಪನ್ನು ಅನವರತವೂ ಜತನವಾಗಿ ಕಾಪಾಡಿಕೊಂಡಿದ್ದಾರೆ. ಆ ಸ್ಮರಣೆಯ ಫಲವಾಗಿಯೇ ಅವರ ಕೃತಿಗಳು ಅಷ್ಟು ಸಾಂದ್ರವಾಗಿ, ರೂಪು ತಳೆದಿರುವುದು ಎಂಬುದರಲ್ಲಿ ಎರಡು ಮಾತಿಲ್ಲ.

ಅಮೆರಿಕದ ಕಪ್ಪು ಸಾಹಿತ್ಯ ಮೂಲತಃ ಇಪ್ಪತ್ತನೆಯ ಶತಮಾನದ ಸಾಹಿತ್ಯ ಎನ್ನುವುದನ್ನು ನೆನೆದಾಗ ಇದು ಇನ್ನೂ ತಾರುಣ್ಯಾವಸ್ಥೆಯಲ್ಲಿರುವುದು ತಿಳಿಯುತ್ತದೆ. ಈ ಹಂತದಲ್ಲಿ ಟೋನಿ ಮಾರಿಸನ್‌ರಂಥ ಬರಹಗಾರರು ಅದಕ್ಕೆ ತಮ್ಮ ಚೇತನವನ್ನೂಡಿ ಸುಪುಷ್ಟವಾಗಿ ಬೆಳೆಸುತ್ತಿದ್ದಾರೆ.

ಅಮೆರಿಕದ ಕಪ್ಪು ಸಾಹಿತ್ಯದ ಉದ್ಭವಾವಸ್ಥೆಯನ್ನು ದಾಖಲುಗೊಳಿಸುವಾಗ ಸಹಜವಾಗಿಯೇ ಈ ಶತಮಾನದ ಆದಿಭಾಗದಲ್ಲಿ ಕಂಡು ಬರುವ "ಹಾರ್ಲೆಮ್ ಚಳುವಳಿ" ('Harlem Renaissance') ಯನ್ನು

ಉಲ್ಲೇಖಿಸಬೇಕಾಗುತ್ತದೆ. ನ್ಯೂಯಾರ್ಕ್ ನಗರದ ಒಂದು ಭಾಗವಾದ ಹಾರ್ಲೆಮ್‌ನಲ್ಲಿ ವಿಶೇಷವಾಗಿ ಕಪ್ಪು ಜನರೇ ವಾಸಮಾಡುವುದು. ಮೊದಲನೆಯ ಮಹಾಯುದ್ಧಕ್ಕೆ ಪೂರ್ವದಲ್ಲಿ ಲೇಖಕರು ಅಮೆರಿಕದ ಐಭೋಗದ ಬಗ್ಗೆ ಮೈಮರೆತು ಬರೆದಿದ್ದರು. ಬಂಡವಾಳಶಾಹಿ ಜಗತ್ತಿನ ಐಷಾರಾಮದ ಬದುಕು ಬಲು ಹಿತವಾಗಿ ಕಂಡ ಕಾರಣ ಅವರು ಇದೇ ಸತ್ಯವೆಂದು ಸಾರುವ ರೀತಿಯಲ್ಲಿ ಅತ್ಯುತ್ಸಾಹದಲ್ಲಿ ದಾಖಲಿಸಿದ್ದರು. ಮೊದಲನೆಯ ಜಾಗತಿಕ ಸಮರದ ನಂತರ ಬಂಡವಾಳಶಾಹಿ ಬದುಕಿನ ಪೊಳ್ಳುತನ ಮತ್ತು ಶೋಷಣೆಯನ್ನು ಬಯಲು ಮಾಡಲು ಬಿಳಿಯ ಲೇಖಕರೇ ಮುಂದಾದದ್ದು ಒಂದು ಕುತೂಹಲದ ಸಂಗತಿ. ಇವರಲ್ಲಿ ಸಿಂಕ್ಲೇರ್‌ಲೀವಿಸ್ ('ಮೇಯ್ನ್ ಸ್ಟ್ರೀಟ್ ಮತ್ತು ಬ್ಯಾಬಿಟ್'), ಥಿಯೊಡರ್ ಡ್ರೀಸರ್ ('ಅಮೆರಿಕದ ದುರಂತ'—'ದ ಅಮೆರಿಕನ್ ಟ್ರ್ಯಾಜಡಿ'), ಮುಖ್ಯರು. ಬಿಳಿಯ ಲೇಖಕರಿಗಿಂತಲೂ ತಮ್ಮ ನೋವುಗಳನ್ನು ಪರಿಣಾಮಕಾರಿಯಾಗಿ ದಾಖಲಿಸುವುದು ಅನಿವಾರ್ಯವೆಂದು ಅರಿವು ಮಾಡಿಕೊಂಡ ಕಪ್ಪು ಲೇಖಕರು ಹೊಸ ಬಗೆಯ ಒತ್ತಡ ಮತ್ತು ಜರೂರಿನಿಂದ ಲೇಖನ ವ್ಯವಸಾಯಕ್ಕೆ ಕೈಹಚ್ಚಿದರು. ಅದುವರೆಗೆ ಅದುಮಿಟ್ಟ ಅಗ್ನಿ ಬುಗಿಲೇಳಲು ಅವಕಾಶ ಪಡೆದುಕೊಂಡಿತೊ ಎಂಬಂತೆ ಕಪ್ಪು ಸಾಹಿತ್ಯ ಪ್ರಪಂಚದಲ್ಲಿ ಕಂಡರಿಯದ ಅನುಭವಗಳು ಅಭಿವ್ಯಕ್ತವಾಗತೊಡಗಿದವು.

ಸಮರ ಕಾಲದಲ್ಲಿ ಬಿಡುಗಡೆಯ ಭರವಸೆಯನ್ನು ಕೊಟ್ಟಿದ್ದ ಅಮೆರಿಕದ ಅಧ್ಯಕ್ಷರು ಸಮರೋತ್ತರದಲ್ಲಿ ಮಾತು ಉಳಿಸಿಕೊಳ್ಳದೆ ಹಿಂದೇಟು ಹೊಡೆದದ್ದು ಕಪ್ಪು ಅಮೆರಿಕನ್ನನನ್ನು ಅಧೀರನನ್ನಾಗಿಸಿತು. ತಲೆತಲಾಂತರದ ಗುಲಾಮಗಿರಿಗೆ ವಿದಾಯ ಹೇಳುವ ಸಂತೋಷದಲ್ಲಿದ್ದವನು ಮತ್ತೆ ಸಂಕೋಲೆಯ ಸೆರೆಯಲ್ಲಿ ನರಳುವಂತಾಯಿತು. ತೊತ್ತಾಗಿ ದುಡಿಯುವುದೇ ನಿತ್ಯ ಸತ್ಯ, ಯಾವ ವಿಶ್ರಾಂತಿಯೂ ಇಲ್ಲಿ ದೊರಕದೆಂದು ಅವನಿಗೆ ಖಾತ್ರಿಯಾಯಿತು; ಮತ್ತು ಆ ನಿರಾಶೆಯಿಂದ "ನವ ನೀಗ್ರೋ ಚಳುವಳಿ"ಗೆ ನಾಂದಿಯಾಯಿತು. ಈ ಚಳುವಳಿಯನ್ನೇ "ಹಾರ್ಲೆಮ್ ಚಳುವಳಿ" ಎಂದೂ ಕರೆಯುವುದುಂಟು.

ಅಮೆರಿಕದ ಸಂದರ್ಭದಲ್ಲಿ ಟೋನಿ ಮಾರಿಸನ್‌ರಂಥ ಕಪ್ಪು ಲೇಖಕಿ ಏಕಾಏಕಿ ಮೈದಾಳುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಿಕೊಳ್ಳಲು "ಹಾರ್ಲೆಮ್ ಚಳುವಳಿ"ಯ ಹಿನ್ನೆಲೆಯನ್ನು ಅಗತ್ಯವಾಗಿ ಗಮನಿಸಬೇಕು. ಸಮರ ಸನ್ನಿವೇಶದಲ್ಲಿ ಸರದಾರರು ಸೂಚಿಸಿದ ಆದೇಶಗಳನ್ನು ಗೋಣು ಬಗ್ಗಿಸಿಕೊಂಡು

ಪರಿಪಾಲಿಸುತ್ತಿದ್ದ ಕಪ್ಪು ಸೈನಿಕರು ತಮ್ಮ ಬಿಡುಗಡೆಯ ಮಾತು ಬರಿಯ ಭ್ರಮೆಯೆಂದು ಮನದಟ್ಟಾದಾಗ ಅವರಿಗೆ ಕಹಿ ಅನುಭವವಾಯಿತು, ಅವರು ಒರಟಾದರು, ತಾಳ್ಮೆಗೆಟ್ಟರು—ಇನ್ನು ಮುಂದೆ ಬೇರೆ ರೀತಿಯ ಪಟ್ಟು ಹಾಕಿ ಬಿಳಿಯರನ್ನು ಬಗ್ಗಿಸಬೇಕೆಂದು ವಿಶ್ವಾಸ ಬೆಳೆಸಿದರು. ಆ ಸಂದರ್ಭದಲ್ಲೇ ಅವರು ತಮ್ಮ ದೀರ್ಘಕಾಲದ ಮೌನವನ್ನು ಮೆಟ್ಟಿ ಬಗೆಬಗೆಯಾಗಿ ಮಾತನಾಡಲು ಕಲಿತರು: ತತ್ಪರಿಣಾಮವಾಗಿ ಗದ್ಯ, ಪದ್ಯ, ಕಥೆಗಳು ಪುಂಖಾನುಪುಂಖವಾಗಿ ರೂಪುಗೊಂಡವು. ತುಳಿಯುವವರ ಕಾಲು ಹಿಡಿದು ಕೆಳಗೆ ಒಗೆದು ಏಕೆ ಹೀಗೆ ಮಾಡುವಿರಿ? ನೀವು ಮನುಷ್ಯರೋ ಮೃಗಗಳೋ ಎಂದು ಕೇಳುವ ಕಾಲಕ್ಕೆ ತಣ್ಣಗಿನ ತಾಳ್ಮೆ ಎಷ್ಟೋ ಬಾರಿ ಸಾಧ್ಯವಾಗುವುದಿಲ್ಲ. ಆದರೆ ಕಪ್ಪು ಕವಿಗಳು ಮತ್ತು ಬರಹಗಾರರು ಒಳಗೆ ಕಿಚ್ಚು ಮತ್ತು ದ್ವೇಷ ಹೊಗೆಯಾಡುತ್ತಿದ್ದರೂ ತಾವು ನುಡಿಯುವ ನುಡಿಯಲ್ಲಿ ಕಲಾತ್ಮಕತೆ ಇರಬೇಕೆಂದು ಮೊದಲೇ ಕಂಡುಕೊಂಡವರು. ಅಮೆರಿಕದ ಪರಿಸರದಲ್ಲಿ ಪ್ರಚಲಿತವಿದ್ದ ಸಾಹಿತ್ಯ ಮಾದರಿಗಳನ್ನೇ ಬಳಸಿಕೊಂಡು ಆ ಎರಕಕ್ಕೆ ತನ್ನ ದುಗುಡದ ದ್ರವಲೋಹವನ್ನು ಸುರಿದು ಗಟ್ಟಿಗಳಾಗಿಸಿಕೊಂಡದ್ದು ಅಮೆರಿಕದ ಕಪ್ಪು ಸಾಹಿತಿಯ ಹಿರಿಮೆಯೆಂದೇ ಹೇಳಬೇಕು. ತಮಗಾಗುತ್ತಿರುವ ಅನ್ಯಾಯದ ಅರಿವು ಮತ್ತು ಆ ಅನ್ಯಾಯವನ್ನು ಕಲಾತ್ಮಕವಾಗಿ ಸ್ವೀಕಾರಾರ್ಹವಾದ ನಮೂನೆಯಲ್ಲಿ ಕಂಡರಿಸುವ ರೀತಿಯನ್ನು ಬಹಳ ಬೇಗ ಅವರು ರೂಢಿಸಿಕೊಂಡರು. ತತ್ಪರಿಣಾಮವಾಗಿ ಸಮರ್ಥ ಲೇಖಕರ ಒಂದು ಪಡೆಯೇ ನಿರ್ಮಾಣವಾಗಿ "ಹಾರ್ಲೆಮ್ ಚಳುವಳಿ" ಮಹತ್ವ ಪಡೆಯಿತು.

"ಹಾರ್ಲೆಮ್ ಚಳುವಳಿ"ಯ ಲೇಖಕರೆಲ್ಲ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯ ವಿರುದ್ಧ ಒಕ್ಕೊರಲಿನಲ್ಲಿ ಕೂಗಿದ ಕಾರಣ ಅವರು ಒಂದು ಜನಾಂಗ-ಪ್ರಜ್ಞೆಯ ಗುಂಪಾಗಿ ಗೋಚರಿಸುತ್ತಾರೆ. ಇದರಿಂದ ಅವರಿಗೆ ಒಂದು ಧನಾತ್ಮಕವಾದ ಅಸ್ತಿತ್ವ ದೊರೆಯಿತು. ಜೊತೆಗೆ ಗದ್ಯ, ಕಾವ್ಯ ಮತ್ತು ಹಾಡುಗಳ ಮೂಲಕ ವರ್ಣಭೇದ ಮತ್ತು ವಿಚಾರಣೆರಹಿತ ಮರಣದಂಡನೆ ಮುಂತಾದ ಅನಿಷ್ಟಗಳ ವಿರುದ್ಧ ಅವರು ಇಡಿಯಾಗಿ ಪ್ರತಿಭಟಿಸುವುದಕ್ಕಾಯಿತು. ಹೆಚ್ಚಿನ ಭತ್ಯ, ಕೆಲಸದ ಸಮಯದಲ್ಲಿ ಕಡಿತ ಮತ್ತು ಉದ್ಯೋಗದ ಸ್ಥಳಗಳಲ್ಲಿ ಹೆಚ್ಚಿನ ಸೌಕರ್ಯ—ಈ ವಿಷಯಗಳೂ ಅವರ ಬೇಡಿಕೆಗಳಲ್ಲಿ ಪ್ರಧಾನವಾಗಿದ್ದವು. ಆದ್ದರಿಂದ "ಹಾರ್ಲೆಮ್ ಚಳುವಳಿ"ಯ ಬರಹಗಾರರು ಅಮೆರಿಕದ ಸಂವಿಧಾನ ಸರ್ಕಾರವನ್ನು ಬುಡಮೇಲು ಮಾಡುವ ರಾಜಕೀಯ ಕ್ರಿಯೆಯನ್ನು ಗುರಿ

ಯಾಗಿ ಹೊಂದಿರದೆ ವ್ಯವಸ್ಥೆಯ ಅದಕ್ಷತೆಯ ವಿರುದ್ಧವಷ್ಟೇ ಅವರು ತಮ್ಮ ದನಿಯೆತ್ತಿದರು.

ವೆಸ್ಟ್ ಇಂಡೀಸ್‌ನ ಜಮೈಕಾದಿಂದ ಬಂದ ಕ್ಲಾಡ್ ಮೆಕೆ, ವಿಮರ್ಶಕರು ಅಭಿಪ್ರಾಯ ಪಡುವಂತೆ, ಈ "ಹಾರ್ಲೆಮ್ ಚಳುವಳಿ"ಯ ನೇತಾರ. ಮೆಕೆ ೧೯೧೨ರಲ್ಲಿ ಅಮೆರಿಕೆಗೆ ಬಂದಾಗ ಅವನಿಗೆ ೨೧ರ ಹರೆಯ. ಆ ವೇಳೆಗಾಗಲೇ ಅವನು ಕವಿಯಾಗಿ ಪ್ರಸಿದ್ಧನಾಗಿದ್ದ. ಅನೇಕ ಪತ್ರಿಕೆಗಳಲ್ಲಿ "ಚಳುವಳಿ"ಯ ಮೂಲೋದ್ದೇಶವನ್ನು ಆಧಾರವಾಗಿಟ್ಟುಕೊಂಡ ಕವಿತೆಗಳು ಪ್ರಕಟವಾದವು. ಆದರೆ ನಿಜವಾಗಿ ಮೆಕೆ ಹೆಚ್ಚಿನ ರೀತಿಯಲ್ಲಿ ಎಲ್ಲರ ಗಮನ ಸೆಳೆದದ್ದು ೧೯೨೨ರಲ್ಲಿ ಅವನು ಪ್ರಕಟಿಸಿದ "ಹಾರ್ಲೆಮ್ ನೆರಳುಗಳು" ಎಂಬ ಸಂಕಲನದ ಮೂಲಕ. ಈ ಕವನ ಸಂಕಲನದ ನಂತರ ಕ್ಲಾಡ್ ಮೆಕೆ ಮುಂದೆ ನಿರಂತರವಾಗಿ ಗದ್ಯ ಬರೆಯ ತೊಡಗಿದ. ಏನೇ ಆಗಲಿ "ಹಾರ್ಲೆಮ್ ನೆರಳುಗಳು" ಹೊಸ ಸಾಹಿತ್ಯಕ ಚಳುವಳಿಯನ್ನು ಉದ್ಘಾಟಿಸುವ ಕೃತಿಯಾಯಿತು.

ಮೆಕೆ ಅವರ ಮಾರ್ಗದಲ್ಲಿ ನಡೆದ ಕವಿ ಲ್ಯಾಂಗ್‌ಸ್ಟನ್ ಹ್ಯೂಸ್‌ನನ್ನು "ಹಾರ್ಲೆಮ್‌ನ ಶೇಕ್ಸ್‌ಪಿಯರ್" ಎಂದೇ ಜನರು ಕರೆಯುತ್ತಿದ್ದರು. ಅಷ್ಟು ವಿಪುಲವೂ ವೈವಿಧ್ಯಮಯವೂ ಆದ ಸಾಹಿತ್ಯವನ್ನು ಹ್ಯೂಸ್ ಸೃಷ್ಟಿ ಮಾಡಿದ. ಅಮೆರಿಕದ ಕಪ್ಪು ಜನರು ನಡೆದು ಬಂದು ದಾರಿಯನ್ನು ಅರ್ಥ ಮಾಡಿ ಕೊಳ್ಳಲು ಕ್ಲಾಡ್ ಮೆಕೆಯವರ ಆತ್ಮಚರಿತ್ರೆ 'ಎ ಲಾಂಗ್ ವೇ ಫ್ರಮ್ ಹೋಮ್'ನಷ್ಟೇ ಮಹತ್ವದ ಪುಸ್ತಕ 'ದ ಬಿಗ್ ಸೀ—ಇದು ಹ್ಯೂಸ್‌ರ ಆತ್ಮಚರಿತ್ರೆ.

"ಹಾರ್ಲೆಮ್ ಚಳುವಳಿ"ಯಿಂದ ಪ್ರಾರಂಭಿಸಿ ವರ್ತಮಾನದವರೆಗೆ ಅಮೆರಿಕದ ಕಪ್ಪು ಜನರ ಇತಿಹಾಸ ಮತ್ತು ಸಾಹಿತ್ಯರಾಶಿಯನ್ನು ತಿಳಿಸುವ ಪುಸ್ತಕ ಗಳನ್ನು ಪಟ್ಟಿಮಾಡಿದರೆ ಅಂದಾಜು ಒಂದು ಸಹಸ್ರವನ್ನು ಮೀರಬಹುದು. ಅಮೆರಿಕದ ಕಪ್ಪು ಸಾಹಿತ್ಯ ಚರಿತ್ರೆಯ ವ್ಯಾಪ್ತಿ ಈ ಲೇಖನಕ್ಕಿಲ್ಲದಿರುವುದ ರಿಂದ ಟೋನಿ ಮಾರಿಸನ್‌ರವರನ್ನು ಸೃಷ್ಟಿ ಮಾಡಿದ ಸನ್ನಿವೇಶದ ಹಿನ್ನೆಲೆ ಯನ್ನು ಅರ್ಥಮಾಡಿಕೊಳ್ಳುವಲ್ಲಿ "ಹಾರ್ಲೆಮ್...."ನ ಪ್ರಸ್ತಾಪ ಮಾಡ ಬೇಕಾಯಿತು. ಈ ಶತಮಾನದ ಆ ವಿಭಾಗದ ಬರಹಗಾರರಿಗಿದ್ದ ಗುರಿ ಮತ್ತು ದಾರಿಗಳಿಗಿಂತ ಮಿಸ್ ಮಾರಿಸನ್‌ರ ದೃಷ್ಟಿ ಭಿನ್ನವಾಗಿರುವುದಕ್ಕೆ, ಕಾರಣ ಅನ್ಯರು ಸುಗಮಗೊಳಿಸಿದ್ದ ಹಾದಿಯಲ್ಲಿ ಇವರು ಇನ್ನೂ ಸಂಕೀರ್ಣವಾದ ರೀತಿಯಲ್ಲಿ ಹೆಜ್ಜೆ ಇಡುವುದಕ್ಕೆ ಕಾರಣವಾದುದು.

ಮಾರಿಸನ್‌ರಿಗಿಂತ ಮೊದಲು ಬರೆದವರು ತಮ್ಮ ಕಾದಂಬರಿಗಳಲ್ಲಿ ಸಾಧಾರಣವಾದ ಅಮೇರಿಕದ ಪ್ರಜೆಗಳ ಮೆರವಣಿಗೆ ಮಾಡಿಸಿದರೆ ಇವರ ಕಾದಂಬರಿ ಜಗತ್ತಿನಲ್ಲಿ ಬೆಕ್ಕಸ ಬೆರಗನ್ನುಂಟುಮಾಡುವ ಪಾತ್ರಗಳು ಎದುರಾಗುತ್ತವೆ. ಇವರು ಇದುವರೆಗೆ ಬರೆದಿರುವುದು ಕೇವಲ ಆರು ಕಾದಂಬರಿಗಳಾದರೂ ಒಂದೊಂದರಲ್ಲಿ ಒಂದೊಂದು ಬಗೆಯ ವಿಷಯವನ್ನೂ, ಭಯವನ್ನೂ ಹುಟ್ಟಿಸುವ ಪಾತ್ರಗಳಿವೆ. 'ದ ಬ್ಲೂಯೆಸ್ಟ್ ಐ' (೧೯೭೦), 'ಸುಲ' (೧೯೭೪), 'ಸಾಂಗ್ ಆಫ್ ಸಾಲೊಮನ್' (೧೯೭೭), 'ಟಾರ್ ಬೇಬಿ' (೧೯೮೧), 'ಬಿಲವೆಡ್' (೧೯೮೭) ಹಾಗೂ 'ಜಾಜ್' (೧೯೯೨). ಈ ಕಾದಂಬರಿಗಳ ಜೊತೆಗೆ ಮಿಸ್ ಮಾರಿಸನ್ 'ಡ್ರೀಮಿಂಗ್ ಎಮೆಟ್' ಎಂಬ ನಾಟಕವನ್ನು 'ಪ್ಲೇಯಿಂಗ್ ಇನ್ ದ ಡಾರ್ಕ್:' 'ವೈಟ್‌ನೆಸ್ ಅಂಡ್ ದ ಲಿಟರರಿ ಟ್ರೆಡಿಷನ್' ಎಂಬ ವಿಶ್ಲೇಷಣಾತ್ಮಕ ಗ್ರಂಥವನ್ನು ರಚಿಸಿದ್ದಾರೆ. ೧೯೭೬ ರಿಂದ ೧೯೭೭ ರವರೆಗೆ ಅಮೆರಿಕದ ಯೇಲ್ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕಿಯಾಗಿದ್ದರು. ೧೯೮೯ ರಿಂದೀಚೆಗೆ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ.

'ಬಿಲವೆಡ್', 'ದ ಬ್ಲೂಯೆಸ್ಟ್ ಐ', 'ಸುಲ', ' ಟಾರ್ ಬೇಬಿ' ಮತ್ತು 'ಜಾಜ್' ಕಾದಂಬರಿಗಳಲ್ಲಿ ಕಪ್ಪು ಅಮೇರಿಕದ ಗತಕಾಲವನ್ನು ದಾಖಲಿಸುವಾಗ ಕರಿಯರು ಅನುಭವಿಸಿದ ಚಿತ್ರಹಿಂಸೆಯನ್ನು ಚಿತ್ರಿಸುತ್ತಾ ಟೋನಿ ಮಾರಿಸನ್ ಈ ಹೊತ್ತಗೆಗಳು ನೊಂದವರ ಮಹಾಕಾವ್ಯವಾಗಿ ಪರಿವರ್ತನೆಗೊಳ್ಳುವಂತೆ ಮಾಡಿದ್ದಾರೆ.

ಮೊದಲನೆಯ ಕಾದಂಬರಿಯಾದ "ದ ಬ್ಲೂಯೆಸ್ಟ್ ಐ" ಪೆಕೋಲಾ ಬ್ರೀಡ್‌ಲವ್ ಎಂಬ ಕಪ್ಪು ಹುಡುಗಿಯ ಸುತ್ತ ಹೆಣೆದಿರುವ ಕಥೆ. "ಇವಳ ತಂದೆಯೇ ಇವಳನ್ನು ಬಲಾತ್ಕರಿಸಿ ಹುಡುಗಿಯೊಂದು ದೊಡ್ಡವರ ಪ್ರಪಂಚಕ್ಕೆ ತಪ್ಪು ಹೆಜ್ಜೆಯಿಂದ ಕಾಲಿಡುವ ಸನ್ನಿವೇಶದ ಹೃದಯವಿದ್ರಾವಕ ಕಥೆ. ತಂದೆ ಮಗಳನ್ನು ಬಲಾತ್ಕರಿಸಿದ ದುರಂತವನ್ನು ನಮ್ಮ ಕಣ್ಣಮುಂದೆ ತೆರೆದು ತೋರಿಸುತ್ತಲೇ ಮಾರಿಸನ್ ಈ ಪರಿಸ್ಥಿತಿಗೆ ಇವರನ್ನು ಒಡ್ಡಿದ ಹಿನ್ನೆಲೆಯ ಕಡೆ ಓದುಗರ ಮನಸ್ಸನ್ನು ಸೆಳೆಯುತ್ತಾರೆ."

ಕಪ್ಪುತನವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ದಾಂಪತ್ಯದಲ್ಲಿ ದೀರ್ಘಕಾಲದ ಒಡಂಬಡಿಕೆ ಸಾಧ್ಯವಿಲ್ಲವೆನ್ನುವ ಸಂಕೀರ್ಣತೆಯನ್ನು ದಾಖಲುಗೊಳಿಸುವ ಕಾದಂಬರಿ 'ಟಾರ್ ಬೇಬಿ', ಜಾಡಿನ್ ಮತ್ತು ಸನ್ ಇವರೀ

ದಂಪತಿಗಳಾಗ ಬಯಸುವ ಪ್ರೇಮಿಗಳು. ಜಾಡೀನ್ ಕಪ್ಪು ಹುಡುಗಿಯಾದರೂ ಸ್ವಲ್ಪ ಶ್ವೇತವರ್ಣೆಯೆಂದು ಕರೆಯಬಹುದಾದಷ್ಟು ಬೆಳ್ಳಗಿರುವವಳು. ತನ್ನ ಮನಸ್ಸು ಮತ್ತು ವರ್ತನೆಯಲ್ಲಿ ಬಿಳಿಯರನ್ನು ಹೋಲುವವಳು. ಮೇಲಾಗಿ ಆವಳು ವಿದ್ಯೆ ಕಲಿತದ್ದು ಪ್ಯಾರಿಸ್‌ನ ಹೆಸರಾಂತ ಸೋರ್ಬಾನ್ ವಿಶ್ವವಿದ್ಯಾ ನಿಲಯದಲ್ಲಿ. ವ್ಯಾಸಂಗದ ನಂತರ ಕೈಗೊಂಡದ್ದು "ರೂಪದರ್ಶಿ" ವೃತ್ತಿ. ಅವಳು "ಅಂತರರಾಷ್ಟ್ರೀಯ ಮಾಡಲ್" ಕೂಡ. ಎಲ್ಲ ಅರ್ಥದಲ್ಲೂ ಕಪ್ಪು ಮನುಷ್ಯ ನಾದ ಸನ್ ಜಾಡೀನ್‌ಳ ಮಾರ್ಗವನ್ನು ಸ್ವೀಕರಿಸಲಾರದೆ ಚಡಪಡಿಸುತ್ತಾನೆ. "ಕಪ್ಪು ಪ್ರಜ್ಞೆಯ" ಬಗ್ಗೆ ತನಗಿರುವ ಸ್ವಾಭಿಮಾನ ಅವಳಿಗಿಲ್ಲದುದು ಆವನಿಗೆ ಚಿತ್ರಹಿಂಸೆಯಾಗುತ್ತದೆ. ಬಿಳಿಯತನದ ಬದುಕು ತಮಗಲ್ಲ, ತಪ್ಪೊಪ್ಪಿಗೆಯೇ ತಮ್ಮ ನಿರಂತರ ಗುರಿ ಮತ್ತು ಸಾಧನೆಯಾಗಬೇಕೆನ್ನುವ ಛಲ ಆವನದು.

'ಜಾಜ್' ಕಾದಂಬರಿಯನ್ನು "ಹಾರ್ಲೆಮ್ ಚಳುವಳಿ"ಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕು. 'ದ ಬ್ಲೂಯೆಸ್ಟ್ ಐ' ಕಾದಂಬರಿಯ ಮುಖ್ಯ ಪಾತ್ರವಾದ ಹುಡುಗಿಯೊಬ್ಬಳು ತನಗೆ ದಟ್ಟ ನೀಲಿಯ ಕಣ್ಣುಗಳು ಬಂದರೆ ತಾನು ಸುಂದರಿಯಾಗುವೆನೆಂದು ಅದಕ್ಕಾಗಿ ಅನ್ವೇಷಣೆ ಮಾಡುತ್ತಾ ದುಃಖತಪ್ತೆ ಯಾಗುವ ಕಥೆ. ತನ್ನ ಹುಟ್ಟಿನ ನಿಜವನ್ನು ಅರಿಯಲಾರದೆ ಬಿಳಿಯರ ನೀಲಿ ಕಣ್ಣಿನಂಥ ಕಣ್ಣುಗಳು ತನಗೂ ಪ್ರಾಪ್ತವಾಗಬೇಕೆಂದು ಬಣ್ಣಿಸಲಾರದ ತಾಪ ದಲ್ಲಿ ಬೇಯುತ್ತಾಳೆ; ಈ ಪ್ರಕ್ರಿಯೆಯಲ್ಲಿ ಮತಿಭ್ರಷ್ಟಳಾಗುತ್ತಾಳೆ. 'ಸುಲ' ಕಾದಂಬರಿಯ ಕೇಂದ್ರ ಪಾತ್ರ ಸುಲ ಎಂಬ ಹೆಣ್ಣುಮಗಳು. ಶಿಥಿಲ ನಡತೆಯ ಈ ಹೆಣ್ಣುಮಗಳು ಅತ್ಯಂತ ವಿಸ್ಮಯಕರವಾದ ರೀತಿಯಲ್ಲಿ ತನ್ನ ಸುತ್ತಮುತ್ತಲ ಜನರ ಹೃದಯಗಳಲ್ಲಿ ಸದ್ಭಾವನೆಯನ್ನು ಬಿತ್ತುತ್ತಾಳೆ. 'ಬಿಲವೆಡ್' ಕಾದಂಬರಿಗೆ ೧೯೮೭ರಲ್ಲಿ ಪ್ರತಿಷ್ಠಿತ "ಪುಲಿಟ್ಸರ್ ಪುರಸ್ಕಾರ" ದೊರೆಯಿತು. ಸೆರೆಯಿಂದ ಪರಾರಿಯಾದ ಒಬ್ಬ ಗುಲಾಮ ಹೆಂಗಸಿನ ಸತ್ಯಕಥೆಯನ್ನು ಆಧರಿಸಿ ರಚಿತವಾದ ಕಾದಂಬರಿ ಇದು. ಗುಲಾಮಗಿರಿಗೆ ಮತ್ತೆ ತನ್ನ ಮಕ್ಕಳು ಹಿಂದಿರುಗುವುದ ಕ್ಕಿಂತ ಅವರನ್ನು ಸಾಯಿಸುವುದು ಮೇಲು ಎಂದು ಅವರನ್ನು ಕೊಲ್ಲಲು ಪ್ರಯತ್ನಿಸಿದ ಪ್ರಸಂಗ ಈ ಕಾದಂಬರಿಗೆ ಪ್ರೇರಣೆಯನ್ನು ನೀಡಿದೆ. ಮಾತೃ ಮಮತೆಯ ಗೈರು ಹಾಜರಿಯನ್ನು ದಾಖಲು ಮಾಡಲಿಷ್ಟೇ ಮಾರಿಸನ್ ಈ ಕಾದಂಬರಿಯಲ್ಲಿ ಪ್ರಯತ್ನಿಸಿಲ್ಲ, ಆದರೆ ಸೇಥ್ (ತಾಯಿ)ಳ ಪಾತ್ರ ರಚನೆಯ ಮೂಲಕ ಗುಲಾಮಿ ಅನುಭವವನ್ನು ಮಾನವೀಯ ನೆಲೆಯಲ್ಲಿ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ.

'ಸಾಂಗ್ ಆಫ್ ಸಾಲೋಮನ್' ಕಾದಂಬರಿಯ ಕೇಂದ್ರ ಪಾತ್ರ ಮಿಲ್ಕ್‌ಮನ್ ಹೊನ್ನಿನಾಸೆಯಿಂದ ಸಾಹಸಯಾತ್ರೆ ಪ್ರಾರಂಭಿಸಿ ಕಡೆಗೆ ಗತಕಾಲದಲ್ಲಿ ಕಳೆದುಹೋದ ಕುಟುಂಬದ ಸಿರಿಯನ್ನು ಪತ್ತೆ ಮಾಡುವುದಕ್ಕೆ ಬದಲಾಗಿ ವರ್ಜನಿಯಾದ ಗುಹೆಯಲ್ಲಿ ಸಿಕ್ಕಿಕೊಳ್ಳುತ್ತಾನೆ. ತನ್ನ ಮುತ್ತಜ್ಜನಾದ ಸಾಲೋಮನ್‌ನ ಬಗ್ಗೆ ಅವನಿಗೆ ಆ ಗುಹೆಯಲ್ಲಿ ಅನೇಕ ಐತಿಹ್ಯಗಳು, ದಂತಕಥೆಗಳು ಲಭ್ಯವಾಗುತ್ತವೆ. ತನ್ನ ಮುತ್ತಜ್ಜ ಹಾರಬಲ್ಲವನಾಗಿದ್ದನೆಂದು ಒಂದು ದಂತಕಥೆ ಅವನಿಗೆ ತಿಳಿಸುತ್ತದೆ. ಆ ಹಾರಬಲ್ಲ ಮುತ್ತಜ್ಜನ ನೆನಪಿನಿಂದ ನವ ಚೈತನ್ಯವನ್ನು ಪಡೆಯುವ ಮಿಲ್ಕ್‌ಮನ್ ತನ್ನ ಅಸ್ತಿತ್ವದ ಬಗ್ಗೆ ಗಂಭೀರವಾಗಿ ಆಲೋಚಿಸಲು ತೊಡಗುತ್ತಾನೆ. ಆ ಸಂದರ್ಭದಲ್ಲಿ ಅವನ ಬಾಯಿಯಿಂದ ಹೊರಡುವ ಉದ್ಗಾರ ಮನನೀಯ: "'ನನ್ನ ಮುತ್ತಜ್ಜ ಹಾರಬಲ್ಲವನಾಗಿದ್ದ, ಕೇಳಿಸ್ತಿದೆಯಾ? ಅವನಿಗೆ ಯಾವ ವಿಮಾನಗಿಮಾನದ ಅಗತ್ಯವಿರಲಿಲ್ಲ. ಹಂಗೇ ಹಾರಿಬಿಟ್ಟ. ಈ ಜಂಜಾಟದಲ್ಲಿ ಅವನಿಗೆ ರೋಸಿ ಹೋಗಿತ್ತು. ಈ ಹತ್ತಿ ರಾಶಿ, ಬೇಲ್‌ಗಳು! ಸಿಕ್ಕಸಿಕ್ಕವನು ಕೊಡುತ್ತಿದ್ದ ಆದೇಶಗಳು.... ಇವೆಲ್ಲದಕ್ಕೂ ಧಿಕ್ಕಾರ ಹೇಳಿ ಒಂದು ದಿನ ಮುತ್ತಜ್ಜ ಹಾರಿಯೇ ಬಿಟ್ಟ', ತನಗೂ ಹಾಗೆ ಹಾರುವುದು ಸಾಧ್ಯವೇನೊ ಎನ್ನುವ ಹಾಗೆ ಮಿಲ್ಕ್‌ಮನ್ ಮುಷ್ಟಿಯಿಂದ ನೀರನ್ನು ಗುದ್ದಿ ಮೇಲಕ್ಕೆ ಜಿಗಿದ."

ಟೋನಿ ಮಾರಿಸನ್‌ರ ಕಾದಂಬರಿ ಪ್ರಪಂಚದಲ್ಲಿ ಮೊದಲೇ ಸೂಚಿಸಿದ ಹಾಗೆ ಚಿತ್ರಹಿಂಸೆಯ ಘಟನೆಗಳು ಜರುಗುತ್ತವೆ. ಓಡಿ ಹೋಗುವ ಗುಲಾಮ ಹೆಂಗಸು ತನ್ನ ಹೆಣ್ಣುಗೂಸಿನ ಗಂಟಲನ್ನು ಕೈಗರಗಸದಿಂದ ಕೊಯ್ದುಬಿಡುತ್ತಾಳೆ; ಅಲಂಕಾರ ಸಾಮಗ್ರಿಗಳನ್ನು ಮಾರುವ ಒಬ್ಬ ಸೇಲ್ಸ್‌ಮನ್ ತನ್ನ ಪ್ರಿಯತಮೆಯನ್ನು ಬೇಟೆಯಾಡಿ ಗುಂಡು ಹೊಡೆದು ಅವಳನ್ನು ಸಾಯಿಸುತ್ತಾನೆ; ಮುದುಕಿಯೊಬ್ಬಳು ಅಂಡಲೆಯುವ ಪುಂಡನೆಂಬ ಕಾರಣಕ್ಕಾಗಿ ತನ್ನ ಮಗನನ್ನೇ ಸುಟ್ಟುಬಿಡುತ್ತಾಳೆ. ಇವೆಲ್ಲಾ ಹದ್ದುಮೀರಿದ ಕಲ್ಪನೆಯಲ್ಲಿ ಸಂಭವಿಸುವಂಥ ಸಾವುಗಳಲ್ಲ, ಚರಿತ್ರೆಯಲ್ಲಿ ಘಟಿಸಿಹೋಗಿರುವಂಥ ಸಾವುಗಳು; ದಶಕಗಳಿಂದ ಕಾವುಕೂತ ಕೌಟುಂಬಿಕ ನಿರಾಶೆಯ ಪರಿಣಾಮಗಳು ಹಾಗೂ ಗುಲಾಮಗಿರಿ ಮತ್ತು ಮೋಸಕ್ಕೆ ಗುರಿಯಾದವರ ಅಳಿಸಲಾರದ ಜನಾಂಗೀಯ ಸ್ಮರಣೆಯ ಫಲಗಳು.

"ಮುಗ್ಧ ಮನುಷ್ಯನೆಂದರೆ! ದೇವರ ಮುಂದೆ ಅವನು ಪಾಪಿಗೆ ಸಮಾನ", ಈ ಮಾತುಗಳನ್ನು ಮಾರಿಸನ್ 'ಟಾರ್ ಬೇಬಿ' ಕಾದಂಬರಿಯಲ್ಲಿ ಬರೆಯು

ತ್ತಾರೆ. “ಮುಗ್ಧತೆ ಅಮಾನುಷ ಮತ್ತು ಅಯೋಗ್ಯವೂ ಕೂಡ. ತನ್ನ ಜನರ ಪಾಪವನ್ನು ಹೀರಿಕೊಳ್ಳದೆ ಅಲಾಯಿದವಾಗಿ ನಿಲ್ಲುವ ಮನುಷ್ಯ ಮನುಷ್ಯನೇ ಅಲ್ಲ. ಅವನ ಮುಗ್ಧತೆಯ ದುರ್ನಾತದಿಂದ ಕಿನ್ನರರು ಹಿಡಿದ ತುತ್ತೂರಿ ಕರಗಿ ಅವರೆಲ್ಲ ಸ್ವರ್ಗದ ಬಳ್ಳಿಯಿಂದ ಬಸವಳಿದು ಬಿದ್ದರೂ ಲಕ್ಷಿಸಬಾರದು.”

ತಮ್ಮ ಆರು ಕಾದಂಬರಿಗಳ ವೈಶಾಲ್ಯದಲ್ಲಿ ಟೋನಿ ಮಾರಿಸನ್ ಅಮೆರಿಕದ ಚರಿತ್ರೆಯ ೨೦೦ ವರ್ಷಗಳನ್ನು ತಬ್ಬುತ್ತಾರೆ. ತಮ್ಮದೇ ಆದ ಪುರಾಣದ ಮೂಲಕ ಗುಲಾಮಗಿರಿಯ ಅಮಾನುಷ ಮುಖಗಳನ್ನು ಅನಾವರಣ ಮಾಡುತ್ತಾ ಬಿಳಿ ಅಮೆರಿಕದ ಸಾಹಿತ್ಯದ ಮಾರ್ಗವನ್ನು ಅನುಸರಿಸದೆ ಅತ್ಯಂತ ಸ್ವೋಪಜ್ಞವಾದ ರೀತಿಯಲ್ಲಿ ಅಮೆರಿಕದ ಮಹಾಕಾವ್ಯವನ್ನು ವಿನೂತನವಾಗಿ ರಚಿಸಿದ್ದಾರೆ ಎನ್ನಬಹುದು. ಅಮೆರಿಕದ ಕಪ್ಪು ಜನರ ಚರಿತ್ರೆಯನ್ನೇ ನೇರವಾಗಿ ತೆಗೆದುಕೊಂಡು ಆ ಕಥೆಯನ್ನು ಕಾಲಾತೀತವಾದ ಪೌರಾಣಿಕ ವಲಯದ ಔನ್ನತ್ಯಕ್ಕೆ ಚಿಮ್ಮಿಸಿರುವುದು ಕಡಿಮೆ ಸಾಧನೆಯೇನಲ್ಲ.

‘ಅಮೆರಿಕದ ಕಪ್ಪು ಮಹಿಳೆಯರು: ಒಂದು ಚಾರಿತ್ರಿಕ ವಿಶ್ವಕೋಶ’ (೧೯೯೩) ಎಂಬ ಗ್ರಂಥದಲ್ಲಿ ಬರೆಯುತ್ತಾ ಕ್ಯಾರೊಲಿನ್ ಡೆನಾರ್ಡ್ “ಟೋನಿ ಮಾರಿಸನ್ ನಮ್ಮ ಕಾಲದ ಅತ್ಯಂತ ಪ್ರತಿಭಾವಂತ ಲೇಖಕಿ” ಎಂದು ಬಣ್ಣಿಸಿದ್ದಾರೆ. ಸ್ವೀಡಿಷ್ ಅಕಾಡೆಮಿ ತನ್ನ ನೊಬೆಲ್ ಪಾರಿತೋಷಕದ ಉಲ್ಲೇಖದಲ್ಲಿ “ಮಾರಿಸನ್‌ರ ಬರವಣಿಗೆಯಲ್ಲಿ ಕಾವ್ಯದ ಕಾಂತಿಯಿದೆ” ಎಂದು ಹೊಗಳಿದೆ. ಲೆಕ್ಲೇರ್ ಎಂಬುವವರಿಗೆ ಕೊಟ್ಟ ಸಂದರ್ಶನದಲ್ಲಿ ಮಾರಿಸನ್ ತಮ್ಮ ಕಾದಂಬರಿಗಳ ಉದ್ದೇಶದ ಬಗ್ಗೆ ಹೇಳಿದ್ದಾರೆ: “ನನ್ನ ಕಾದಂಬರಿಗಳು ಏನು ಮಾಡಬೇಕೆಂಬುವದರ ಬಗ್ಗೆ ನಾನು ದೀರ್ಘವಾಗಿ ಮತ್ತು ಗಹನವಾಗಿ ಆಲೋಚಿಸುತ್ತೇನೆ. ಅವು ಮಸುಳಿಸಿ ಹೋದ ಪಾತ್ರಗಳನ್ನು ಥಳಥಳಿಸಿ ಕಾಣಿಸಬೇಕು, ಗತಕಾಲದಲ್ಲಿ ಆಗಿ ಹೋಗಿದ್ದರೂ ಈಗ ಮುಖ್ಯವಾಗಿ ಕಾಣಿಸುವಂಥ ಅಂಶಗಳತ್ತ ಗಮನ ಸೆಳೆಯಬೇಕು; ಉಪಯುಕ್ತವಲ್ಲದ ವಸ್ತುಗಳನ್ನೂ ನೆನಪಿಸಬೇಕು, ಒಟ್ಟಿನಲ್ಲಿ ಅವು ಕಾದಂಬರಿಗಳು ಚೇತನ ಊಡಬೇಕು.”

“ತಮ್ಮೆಲ್ಲ ಬರವಣಿಗೆಯಲ್ಲಿ”, ಡೆನಾರ್ಡ್ ಅಭಿಪ್ರಾಯ ಪಡುತ್ತಾರೆ. “ಟೋನಿ ಮಾರಿಸನ್ ಒಂದು ವಿಶಿಷ್ಟವಾದ, ಸ್ಪಷ್ಟಗೋಚರಿಸುವ ದೃಷ್ಟಿಕೋನವನ್ನು ಕಂಡುಕೊಳ್ಳುತ್ತಾರೆ; ಇದರ ಮುಖಾಂತರವಾಗಿ ಸಮಕಾಲೀನ ಜಗತ್ತಿನಲ್ಲಿ ಅಳಿಯದೆ ಉಳಿಯುವುದಕ್ಕೆ ಅನುಕೂಲವಾಗುವಂಥ ಸಂರಚನೆಯನ್ನು ಸಿದ್ಧಗೊಳಿಸುತ್ತಾರೆ.”

ನಿಜಜೀವನದಲ್ಲಿ ಟೋನಿ ಮಾರಿಸನ್ ಕಿಸಕ್‌ಪುಸಕ್ಕಂತ ನಗುವವರಲ್ಲ; ನಕ್ಕರೆ ಮನೆ ಹಾರಿಹೋಗುವ ಹಾಗೆ ನಗುತ್ತಾರೆ. ಗಂಭೀರವಾದ ವಿಚಾರದ ಬಗ್ಗೆ ಮಾತನಾಡುವಾಗಲೂ ಗಹಗಹಿಸಿ ನಗುವುದು ಅವರ ಸ್ವಭಾವ. ಇದರಿಂದ ಅವರು ಬಹಳ ಮುನ್ನುಗ್ಗುವ, ಅತ್ಯುತ್ಸಾಹದ ಆಶಾವಾದಿ ಎಂದು ಏನಾದರೂ ಸೂಚಿತವಾಗುವುದೆ? ಅದಕ್ಕುತ್ತರವಾಗಿ, "ಇಲ್ಲ, ನಾನು ಯಾವಾಗಲೂ ಜಿಗುಪ್ಸೆಯಿಂದ ಕೂಡಿದ ವ್ಯಕ್ತಿ" ಎಂದಂದು ಮತ್ತೆ ನಗುತ್ತಾರೆ. ತಾವು ಹಾಸ್ಯಪ್ರಜ್ಞೆಯನ್ನು ಬೆಳೆಸಿಕೊಂಡ ಹಿನ್ನೆಲೆಯನ್ನು ವಿವರಿಸುತ್ತಾರೆ. ಅದೇನು ಹರ್ಷ ತರುವಂಥ ಕಥೆಯೇನಲ್ಲ.

ಒಹಾಯೋನ ಲೊರೇನ್ ಪಟ್ಟಣದಲ್ಲಿ ಮಾರಿಸನ್ ೧೯೩೧ರಲ್ಲಿ ಹುಟ್ಟಿದರು. ಉಕ್ಕು ತಯಾರಿಸುವ ಪುಟ್ಟ ಪಟ್ಟಣ ಅದು. ಹಡಗು ಕಟ್ಟುವ ಕಾರ್ಖಾನೆ ಮತ್ತು ಕೈಗಾರಿಕಾ ಕ್ರೇನ್‌ಗಳನ್ನು ತಯಾರು ಮಾಡುವ ಕಾರ್ಖಾನೆಯನ್ನೊಳಗೊಂಡ ಊರು. ಮಾರಿಸನ್‌ಗೆ ಎರಡು ವರ್ಷ ವಯಸ್ಸು. ಒಂದು ದಿನ ಅವರಿದ್ದ ಮನೆಗೆ ಬೆಂಕಿ ಬಿದ್ದಿತು. ತಿಂಗಳಿಗೆ ನಾಲ್ಕು ಡಾಲರ್ ಬಾಡಿಗೆ ಕೊಡಬೇಕಾಗಿತ್ತು ಆ ಮನೆಗೆ. ಸಮಯಕ್ಕೆ ಸರಿಯಾಗಿ ಬಾಡಿಗೆ ಕಟ್ಟಿರಲಿಲ್ಲ. ಇಷ್ಟೇ ಸಾಕಾಗಿ ಮನೆಯ ಮಾಲೀಕ ಇವರೆಲ್ಲ—ತಂದೆ, ತಾಯಿ ಮತ್ತು ಮಾರಿಸನ್—ಒಳಗಿರುವಂತೆಯೇ ಮನೆಗೆ ಬೆಂಕಿ ಹಚ್ಚಿದನಂತೆ. "ಜಗತ್ತಿನಲ್ಲಿ ನಡೆಯುತ್ತದೆಂದು ಊಹಿಸಲಾರದ ಈ ಕೇಡಿನ ದರ್ಶನವೇ ನನ್ನ ಹಾಸ್ಯಪ್ರಜ್ಞೆಯ ಉಗಮಸ್ಥಾನ" ಎಂದು ಮಾರಿಸನ್ ಹೇಳುತ್ತಾರೆ. "ಇದನ್ನೇನಾದರೂ ನೀವು ಅಂತಸ್ಥ ಮಾಡಿಕೊಂಡ ಪಕ್ಷದಲ್ಲಿ ನಿಜವಾಗಿ ನೀವು ಜಿಗುಪ್ಸೆಗೆ ಜಾರಬೇಕಾಗುತ್ತದೆ, ಏಕೆಂದರೆ ಬಹುಜನರ ಪಾಲಿಗೆ ಬಾಳೆಂದರೆ ಇದೇ ಅಲ್ಲವೆ? ತಿಂಗಳಿಗೆ ನಾಲ್ಕು ಡಾಲರ್ ಕೊಡಲಿಲ್ಲ ಎಂಬ ಕಾರಣಕ್ಕೆ ನಿಮ್ಮನ್ನು ಒಬ್ಬ ಜೀವಸಹಿತ ಸುಡಬಹುದು ಎಂದ ಮೇಲೆ? ಆದ್ದರಿಂದ ನಾವು ಮಾಡಬೇಕಾಗಿರುವುದೇನೆಂದರೆ—ಈ ಕ್ರೌರ್ಯ, ಬರ್ಬರತೆಯ ಹೆಸರಿನಲ್ಲಿ, ಈ ಅಸಂಗತತೆಯ ಸಮ್ಮುಖದಲ್ಲಿ ನಕ್ಕುಬಿಡುವುದು. ಹಾಗೆ ಮಾಡುವುದರಿಂದ ನಮ್ಮನ್ನು ನಾವು ಮತ್ತೆ ಪಡೆಯಲು ಸಾಧ್ಯ. ಹಾಗೆಂದರೇನೆಂದು ಅರ್ಥವಾಯ್ತಲ್ಲ? ಈ ರೀತಿಯ ಘಟನೆಯಿಂದ ನಮ್ಮಿಂದ ನಾವೇ ದೂರವಾಗುವ ಅಪಾಯವಿದೆ. ನಗುವಿನ ಲಾಭ ಇದೇ ಆಗಿದೆ. ನಗುವಿನ ಮುಖಾಂತರವಾಗಿ ಆ ದೂರವಾದ ಬದುಕನ್ನು ಮತ್ತೆ ತೆಕ್ಕೆಗೆ ತೆಗೆದುಕೊಂಡಂತಾಗುತ್ತದೆ. ನಮ್ಮ ನಿಷ್ಠೆಯನ್ನು ಮರಳಿ ಧರಿಸಿದಂತಾಗುತ್ತದೆ."

"ಕೇವಲ ಇಪ್ಪತ್ತಮೂರು ವರ್ಷದ ಯಾತ್ರೆಯಲ್ಲಿ (೧೯೭೦–೧೯೯೩) ಎಷ್ಟು ಎತ್ತರ ಏರಿದ್ದೀರಿ?" ಎಂದು ಯಾರಾದರೂ ಕೇಳಿದರೆ ಮಾರಿಸನ್ 'ನಾನು ಬಸವನ ಹುಳುವಿನ ಹಾಗೆ ಮಂದಗತಿಯವಳು' ಎಂದು ಮಾರ್ಮಿಕವಾಗಿ ನುಡಿಯುತ್ತಾರೆ. "ಸರ ಸರ ಅಂತ ಬರೆಯುವುದು ನನ್ನಿಂದಾಗದು. ಮೇಲಾಗಿ 'ಕಾದಂಬರಿ ಕಾಲ' ಅಂತ ಒಂದು ಸಮಯ ಘಟಕವಿರುತ್ತದೆ. ಒಂದು ಕಾದಂಬರಿ ನಿರ್ಮಾಣವಾಗಬೇಕಾದರೆ ಎಷ್ಟು ಕಾಲ ಬೇಕೋ ಅಷ್ಟು ಕಾಲ ಹಿಡಿಸುತ್ತದೆ. ಮೂರು ತಿಂಗಳು ಹಿಡಿದರೆ ಮೂರು ತಿಂಗಳು. ಮೂರು ವರ್ಷವಾದರೆ ಮೂರು ವರ್ಷ. ಋತುಗಳಿಗಾಗಲೀ, ಗುಡುವಿಗಾಗಲೀ ಇದು ಸೊಪ್ಪು ಹಾಕುವ ಕ್ರಿಯೆಯಲ್ಲ. ಬೇಸಗೆಯಾದ್ದರಿಂದ ನಾನೀಗ ಬರೆಯಬಹುದೆಂದು ನೀವು ಸಿದ್ಧವಾಗಿ ಕುಳಿತಿರೆಂದುಕೊಳ್ಳಿ. ಬಲವಂತವಾಗಿ ಲೇಖಣಿ ನೂಕುತ್ತಿರಬೇಕೇ ವಿನಃ ಯಾವುದೂ ನೆಟ್ಟಗೆ ಸಾಗದಿರಬಹುದು ಅಥವಾ ಪುಸ್ತಕದ ಒಳವಿನ್ಯಾಸಕ್ಕೆ ವಿರುದ್ಧವಾಗಿ ಬರೆಯುತ್ತಿರಬಹುದು ಇಲ್ಲವೇ ಮೂರ್ಖತನದಿಂದ ಪುಟ ತುಂಬಿಸಿಬಿಡಬಹುದು. ಗ್ರಂಥ ಮೈದಾಳುವ ಘಳಿಗೆಗಾಗಿ ನಾನು ಕಾಯಲು ಸಿದ್ಧ."

ನೊಬೆಲ್ ಪ್ರಶಸ್ತಿ ಬಂದ ನಂತರ ಸಹಜವಾಗಿಯೇ ಟೋನಿ ಮಾರಿಸನ್ ಬಹಳ ಓಡಾಟದಲ್ಲಿರುತ್ತಾರೆ. ಇದರಿಂದ ಅವರಿಗೆ ಹರ್ಷೋಲ್ಲಾಸವಾದರೂ ಆಗಬಹುದು. 'ಜಾಜ್' ಕಾದಂಬರಿ ಪ್ರಕಟವಾದ ಸಂದರ್ಭದಲ್ಲಿ ಅವರು "ಭವಿಷ್ಯತ್ತಿನಲ್ಲಿ ಎಲ್ಲದರ ಬಗ್ಗೆ ನನಗೆ ಜಿಗುಪ್ಸೆ ಬಂದಿದೆ" ಎಂದು ಹೇಳಿದ್ದರು. ಸುದೈವದಿಂದ ಈಗ ಅವರ ಧೋರಣೆ ಬದಲಾಗಿದೆ. ಇತ್ತೀಚೆಗೆ ಅವರು ನೀಡಿರುವ ಹೇಳಿಕೆಯೊಂದನ್ನು ಉಲ್ಲೇಖಿಸಿ ಈ ಲೇಖನವನ್ನು ಮುಕ್ತಾಯಗೊಳಿಸಬಹುದು;

"ಯಾವನಾದರೂ ಒಬ್ಬ ವ್ಯಕ್ತಿ 'ಇಲ್ಲ' ಅಥವಾ 'ಹೌದು' ಎಂದು ಹೇಳುವುದರ ಮೂಲಕ ವಸ್ತುಸ್ಥಿತಿ ಉತ್ತಮದ, ಕಡೆಗೆ ವಾಲಬಹುದು. 'ನಾನು ಹಾಗೆ ಮಾಡುವುದಿಲ್ಲ' ಅಂತಲೋ, 'ಅದರ ಬಗ್ಗೆ ನಾವಿಬ್ಬರೂ ಕುಳಿತು ಚರ್ಚೆ ಮಾಡೋಣ' ಅಂತಲೋ ಅಥವಾ 'ನಿನ್ನನ್ನ ಮುಟ್ಟುತೀನಿ' ಎಂತಲೋ ಹೇಳಿದರೆ ಸಾಕು. ಮನುಷ್ಯ ಮಾತ್ರದವರು ಹಾಗೆ ಮಾಡದಿದ್ದ ಪಕ್ಷದಲ್ಲಿ ವಿಕಾಸ ಪಥದಲ್ಲಿ ಮೇಲೇರಲಾರದೆ ತಳಗಡೆಯೇ ಉಳಿವ ಇತರೆ ಜೀವಿಗಳಿಗಿಂತ ನಾವು ಭಿನ್ನರೆನಿಸಿಕೊಳ್ಳಲಾರೆವು."

ಸಿ. ನಾಗಣ್ಣ

ಭೂಕಂಪ—ಒಂದು ವೈಜ್ಞಾನಿಕ ವಿಶ್ಲೇಷಣೆ

[ಇಲ್ಲಿಯವರೆಗೆ—ಭೂಕಂಪ ಏಕೆ? ಹೇಗೆ? ಕಾರಣಗಳು, ಅವುಗಳ ಹಂಚಿಕೆ, ಭೂಕಂಪ ಮಾಪನಗಳು; ಕಂಪನದ ತೀವ್ರತೆ ಮತ್ತು ಶಕ್ತಿಪ್ರಮಾಣದ ಅಳತೆಗೋಲು; ಇವನ್ನು ಹಿಂದಿನ ಸಂಚಿಕೆಯಲ್ಲಿ ವಿವರಿಸಲಾಗಿತ್ತು. ಮುಂದುವರೆದಿದೆ.]

ಭೂಕಂಪಗಳ ಪರಿಣಾಮ:

ಭೂಅಂತರಾಳದಲ್ಲಿ ಹುದುಗಿರುವ ಅಧಿಕ ಶಕ್ತಿಯು ದಿಢೀರನೆ ಚಲಿಸುವುದರಿಂದ, ಆಕಸ್ಮಿಕ ಅಪಘಾತವಾದಂತೆ—'ಭೂಕಂಪನವಾಗಿ' ಕೆಲವೇ ಕ್ಷಣಗಳಲ್ಲಿ ಅಲೆ, ಅಲೆಯಾಗಿ ಬಂದ ಕಂಪನಗಳು 'ಸರ್ವನಾಶ'ವನ್ನುಂಟುಮಾಡುತ್ತವೆ. ವ್ಯವಸ್ಥಿತ ಜನಜೀವನ ಅಸ್ತವ್ಯಸ್ತವಾಗಿ ಊರಿಗೆ ಊರೇ ಹಾಳಾಗಿ–ಹಾಳೂರಾಗಿ, ಸ್ಮಶಾನಮೌನ ಆವರಿಸುತ್ತದೆ. ಹರಿಯುವ ನದಿಗಳು ದಿಕ್ಕನ್ನೇ ಬದಲಿಸಿ ಹಿಂದಕ್ಕೆ ಹರಿಯುವುವು. ಭೂಮಿಯ ಕಂಪನ, ಕುಸಿತ ಹಾಗೂ ಛಿದ್ರವಾದ ಬಿರುಕುಗಳು ಉಂಟಾಗುವುವು. ಭೂಮೇಲ್ಮೈಜಲ ಹಾಗೂ ಅಂತರ್ಜಲಗಳಲ್ಲಿ ಅತೀವ ಬದಲಾವಣೆಗಳು, ಸಮುದ್ರದ ಅಲೆ ಮತ್ತು ಹಿಮನದಿಗಳಿಂದ ಕ್ಷೋಭೆ, ಬೆಂಕಿ ಆವರಿಸುವುದು, ಜೀವನೋಪಯೋಗಿ ವಸ್ತುಗಳು ದೊರೆಯದಿರುವುದು, ರಸ್ತೆಗಳ ಸರಿತ, ಜನರ ಸಾವು, ನೋವು, ದಿಗ್ಭ್ರಮೆ, ಇವೇ ಮುಂತಾದ ಪರಿಣಾಮಗಳನ್ನು ಕಾಣುವೆವು. ಭೂಕಂಪದಿಂದ ಭೂಮಿಯು ಸಮತಲವಾಗಿ, ಲಂಬವಾಗಿ ಇಲ್ಲವೆ ಓರೆಯಾಗಿ ಮೇಲೊತ್ತರಿಸಬಹುದು ಅಥವಾ ಕುಸಿಯಲೂ ಬಹುದು. ಮಣ್ಣಿನ ಪದರುಗಳು ಕುಸಿಯುವುದು ಇಲ್ಲವೆ ಜಾರುವುದು ಹಾಗೂ ರಣರಣಿಸುವುದು. ಮ್ಯಾಲೆಟ್‌ನ ಒಂದು ಅಂದಾಜಿನ ಪ್ರಕಾರ ೪೦೦೦ ವರ್ಷಗಳಲ್ಲಿ ಭೂಕಂಪದಿಂದಾದ ಸಾವುಗಳ ಸಂಖ್ಯೆ ೨ ಕೋಟಿಗೂ ಮೀರಿದೆ ಹಾಗೂ ಆಸ್ತಿಪಾಸ್ತಿಗಳ ನಷ್ಟವಾದರೂ ಕೋಟಿ-ಕೋಟ್ಯಾಂತರ ರೂಪಾಯಿಗಳು ಎಂದು.

ಈ ಕೆಳಕಂಡ ಕೆಲವು ಉದಾಹರಣೆಗಳಿಂದ ಮತ್ತು ಐತಿಹಾಸಿಕ ಭೀಕರ ಭೂಕಂಪಗಳ ಪಟ್ಟಿಯಿಂದ ಭೂಕಂಪದಿಂದಾಗುವ ಪರಿಣಾಮಗಳ ದುರಂತವನ್ನು ತಿಳಿಯಬಹುದಾಗಿದೆ. ಕ್ಯಾಲಿಫೋರ್ನಿಯಾದ ಸ್ಯಾನ್‌ಆಂಡ್ರಿಯಾಸ್ ಫಾಲ್ಟ (ಸ್ತರಭಂಗ)ನ ಜಾರುವಿಕೆಯು ವರ್ಷಂಪ್ರತಿ ೦.೨೫ ಸೆಂಟಿಮೀಟರ್; ಹಾಗೆಯೇ ಯಾಕುಟಾಟ್ ಕೊಲ್ಲಿಯಲ್ಲಿ ೧೮೯೯ರ ಅಲಾಸ್ಕಾ ಭೂಕಂಪದಿಂದ ಲಂಬರೀತಿಯ

ಕುಸಿತವು ೧೪ ಮೀಟರು ಅಥವಾ ೪೭ ಅಡಿಗಳಾಗಿತ್ತು. ಸರೋವರವು ಬತ್ತಿ ಹೋದ ನಂತರ ಅದಕ್ಕೆ ಭರ್ತಿಹಾಕಿ ನಿರ್ಮಿಸಿದ ನಗರ ಮೆಕ್ಸಿಕೊ. ಭೂಕಂಪದ ಪರಿಣಾಮದಿಂದಾಗಿ ಈಗ ಅದು ಕುಸಿಯುತ್ತಿರುವ ನಗರ (೨೦ ಅಡಿ ಕುಸಿತ). ಕ್ಯಾಲಿಫೋರ್ನಿಯಾದಲ್ಲಾದ ಭೂಕಂಪಗಳಿಂದ (೧೯೨೮ ರಿಂದ ೧೯೭೦ರ ವರೆಗೆ) ಮೆಂಡೋಟಾನಗರದ ದಕ್ಷಿಣಭಾಗವು ೫ ರಿಂದ ೯ ಮೀಟರ್‌ಗಳಷ್ಟು ಕುಸಿದಿದೆ. ಈ ತೆರನಾದ ಕುಸಿತಗಳೇ ಕಟ್ಟಡಗಳ ವಿನಾಶಕ್ಕೆ ಕಾರಣ.

ಭೂಕಂಪದಿಂದ ಮೇಲುಬ್ಬುವಿಕೆಯ ಪರಿಣಾಮವನ್ನೂ ಕಾಣಬಹುದು: ೧೯೫೪ ರಲ್ಲಿ ನೆವಾಡದಲ್ಲಿ ಸಂಭವಿಸಿದ ಭೂಕಂಪದಿಂದ, ಆ ನಗರವು-೯ ಅಡಿ ಮೇಲೊತ್ತರಿಸಿದೆ; ಲಾಸ್ ಏಂಜಲೀಸ್ ನಗರದಲ್ಲಿ ೧೯೬೦ ರಿಂದೀಚೆಗೆ ೧೩,೦೦೦ ಚದರ ಕಿಲೋ ಮೀಟರ್ ಪ್ರದೇಶವು ಮೇಲುಬ್ಬಿದೆ. ಜಪಾನ್ ದೇಶದ ಸೈಗಾತ ಕರಾವಳಿಯನ್ನು, ೧೯೬೪ರ ಭೂಕಂಪವು ೧೦ ಅಡಿಗಳಷ್ಟು ಮೇಲೆತ್ತಿದೆ. ಕೆಲವೊಮ್ಮೆ ಬಾಯಿತೆರೆದ ಭೂಬಿರುಕುಗಳು (ಮೂರು ಅಡಿ ಅಗಲದ) ಇಲ್ಲವೆ (ಸ್ತರಭಂಗಗಳ ಹತ್ತಿರ) ಭೂಮಿ ಛಿದ್ರವಾಗುವುದು ಸರ್ವಸಾಧಾರಣ.

ಶಿಲಾ ಸೀಳಿಕೆ ಮತ್ತು ಸ್ತರಭಂಗಗಳಿಂದ ರಸ್ತೆಗಳು ಮೇಲಕ್ಕೊ ಇಲ್ಲವೆ ಕೆಳಕ್ಕೊ ಒತ್ತರಿಸುವುವು, ಹಾಗೂ ಹಾದಿಯ ದಿಕ್ಕನ್ನೇ ಬದಲಾಯಿಸುವುದು. ಬಾವಿಗಳಲ್ಲಿ ನೀರು ಉಕ್ಕಿ ಹರಿಯುವುದು ಇಲ್ಲವೆ ಬತ್ತಿ ಬರಿದಾಗುವುದು. ನೀರು ಸಾಗಣೆಯ ಪೈಪುಗಳು, ಅನಿಲ ಮತ್ತು ಎಣ್ಣೆ ವಾಹಕ ಪೈಪುಗಳು ಕಡಿದು ಹೋಗಿ ಕೆಲವು ಸಲ ಬೆಂಕಿ ಹತ್ತಿಕೊಳ್ಳುವುದು.

ಒಟ್ಟಿನಲ್ಲಿ ಭೂಕಂಪದಿಂದ ಹೊರಹೊಮ್ಮುವ ಅಪಾರ ದೈತ್ಯ ಶಕ್ತಿಯು ಮನುಷ್ಯನ ದೇಹದ ಮೇಲೆ ಒಂದು ಸಣ್ಣ ಗೀಚನ್ನಾಗಲಿ ಅಥವಾ ಗಾಯವನ್ನೊ ಮಾಡಲಾರದು. ಆದರೆ ಕಟ್ಟಡಗಳ ಕಲ್ಲು, ಇಟ್ಟಿಗೆ, ಗಾಜು, ಗಾರೆ ಮತ್ತು ಮರಮುಟ್ಟುಗಳು ಉರುಳಿ ಬೀಳುವುದರಿಂದ ಮನುಷ್ಯನನ್ನು ಕೊಲ್ಲುತ್ತವೆ.

ಕ್ಯಾಲಿಫೋರ್ನಿಯನ್ನರು, ಚೀನಿಯರು ಮತ್ತು ಜಪಾನೀಯರು, ಹಿಮಾಲಯ ತಪ್ಪಲು ಪ್ರದೇಶದ ಜನರು ಭೂಕಂಪದ ಪ್ರತ್ಯಕ್ಷ ಅನುಭವ ಹೊಂದುತ್ತಲೇ ಇರುತ್ತಾರೆ. ವೃತ್ತ ಪತ್ರಿಕೆ ಮತ್ತು ಪ್ರಸಾರ ಮಾಧ್ಯಮಗಳು ಅಂತಹ ಭಯಾನಕ ಭೂಕಂಪಗಳ ಪರಿಣಾಮವನ್ನು ನಮಗೆ ತಿಳಿಸುತ್ತವೆ.

ಭೂಕಂಪದ ಪರಿಣಾಮವನ್ನು ಹಲವಾರು ಕಾರಣಗಳು ನಿಯಂತ್ರಿಸುತ್ತವೆ. ಭೂಕಂಪವಾದ ವೇಳೆ, ಸ್ಥಳ, ಜನನಿಬಿಡತೆ, ವಾಯುಗುಣ ಮತ್ತು ಭೌಗೋಳಿಕ ಲಕ್ಷಣಗಳನ್ನು ಅನುಸರಿಸಿ ಪರಿಣಾಮವು ಹೆಚ್ಚು ಇಲ್ಲ ಕಡಿಮೆಯಾಗಿರುತ್ತದೆ.

ಕಟ್ಟಡಗಳ ನಿರ್ಮಾಣ ತಂತ್ರ ಮತ್ತು ಸಾಮಗ್ರಿಯೂ ಭೂಕಂಪದ ಹಾನಿಯ ಮೇಲೆ ಪ್ರಬಲ ಹತೋಟಿಯನ್ನು ಹೊಂದಿದೆ. ಕಂಪನವನ್ನೂ ತಡೆಯ ಬಲ್ಲ ಕಟ್ಟಡ ಸಾಮಗ್ರಿಗಳು, ಉರುಳಿ ಬೀಳದೆ, ಹಾನಿಕಾರಕವಾಗದೆ ಸಂಪೂರ್ಣ ಸುರಕ್ಷತೆಯನ್ನು ಒದಗಿಸುತ್ತವೆ.

ಹಿಂದಿನ ಮೂರು ಶತಮಾನಗಳಲ್ಲಿ ಸಂಭವಿಸಿದ ಭೂಕಂಪಗಳಿಂದ ಸತ್ತವರ ಸಂಖ್ಯೆಯನ್ನು ಪರಿಗಣಿಸಿದರೆ ಭಾರತ ಮತ್ತು ಪಾಕಿಸ್ತಾನಗಳಿಂದ ಒಟ್ಟು ೪,೨೦,೦೦೦ ಜನರು ಮೃತರಾದರೆ, ಅದೇ ಮೂರು ಶತಮಾನಗಳಲ್ಲಾದ ಭೂಕಂಪಗಳಿಂದ ಉತ್ತರ ಅಮೇರಿಕದಲ್ಲಿ ಕೇವಲ ೧,೭೦೦ ಜನರು ಮೃತ ಹೊಂದಿದರು. ಮೇಲಿನ ಉದಾಹರಣೆಯಿಂದ ಭೂಕಂಪದ ಹಾನಿಯು ಸ್ಥಳ, ಜನನಿಬಿಡತೆ ಹಾಗೂ ಕಟ್ಟಡದ ಕಂಪನ ನಿರೋಧಕ ಶಕ್ತಿ ಮತ್ತು ಸುರಕ್ಷತಾ ಕ್ರಮಗಳನ್ನು ಅವಲಂಬಿಸಿದೆ ಎಂಬುದನ್ನು ತೋರಿಸುತ್ತದೆ.

ಚಾರಿತ್ರಿಕ ಭೂಕಂಪಗಳು :

ಪ್ರಪಂಚದ ವಿವಿಧ ಸ್ಥಳಗಳಲ್ಲಿ ಸಂಭವಿಸಿದ ಎಲ್ಲಾ ಭೂಕಂಪಗಳನ್ನು ಅಮೇರಿಕದ ಭೂಸರ್ವೇಕ್ಷಣಾ ಸಂಸ್ಥೆ, ಅಮೇರಿಕದ ಪವನಶಾಸ್ತ್ರ ಮತ್ತು ಹವಾವಳಿ ಅಧ್ಯಯನ ಸಂಸ್ಥೆಗಳು ಹಾಗೂ ಭಾರತದ ಭೂಕಂಪಗಳ ಬಗ್ಗೆ ಆರ್.ಡಿ. ಓಲ್ಡ್‌ಹ್ಯಾಂರವರ ಮೂಲ ದಾಖಲೆ ಗ್ರಂಥ, ಇತ್ಯಾದಿಗಳಿಂದ ಸಂಗ್ರಹಿಸಿದ ಪಟ್ಟಿಯನ್ನು ಈ ಕೆಳಗೆ ಕೊಡಲಾಗಿದೆ. ಪಟ್ಟಿಯನ್ನು ತಯಾರಿಸುವಲ್ಲಿ ಎಲ್ಲ ವಿಧದ ಭೂಕಂಪಗಳ ಪ್ರಕಾರಗಳನ್ನು ಅವರಲ್ಲೂ ಬಹು ಮುಖ್ಯವೆನಿಸುವನ್ನು ಮಾತ್ರ ಈ ಪಟ್ಟಿಯಲ್ಲಿ ಸೇರಿಸಲಾಗಿದೆ.

ಐತಿಹಾಸಿಕ ಭೀಕರ ಭೂಕಂಪಗಳ ಪಟ್ಟಿ

ವರ್ಷ	ಸ್ಥಳ	ಶಕ್ತಿಪ್ರಮಾಣ	ತೀವ್ರತೆ	ಸಾವಿನ ಸಂಖ್ಯೆ
೮೫೬	ಕೊರಿಂತ್ (ಗ್ರೀಸ್)	—	—	೪೫,೦೦೦ ಜನರು
೧೦೩೮	ಶ್ಯಾಂಸಿ (ಚೈನ)	—	—	೨೩,೦೦೦
೧೫೫೬	ಶ್ಯಾಂಸಿ (ಚೈನ)	—	—	೮,೩೦,೦೦೦
೧೭೩೭	ಬಂಗಾಳ (ಭಾರತ)	—	XII	೩,೦೦,೦೦೦
೧೭೫೫	ಲಿಸ್ಬನ್ (ಪೋರ್ಚುಗಲ್)	M ೮.೭	XII	೭೦,೦೦೦+

೧೮೧೯	ಕಚ್ (ಭಾರತ)	—	XII	೨,೦೦೦
೧೮೮೫ ೧೯೫೧	ಜಪಾನ್—ಒಟ್ಟು ೪೧೯೫ ಭೂಕಂಪಗಳು			
೧೮೯೭	ಅಸ್ಸಾಂ (ಭಾರತ)	M ೮.೭	XII	೧,೫೦೦
೧೯೦೫	ಕಾಂಗ್ರ (ಭಾರತ)	M ೮.೬	XII	೧೯,೦೦೦
೧೯೦೬	ಸ್ಯಾನ್‌ಫ್ರಾನ್ಸಿಸ್ಕೊ (ಕ್ಯಾಲಿಫೋರ್ನಿಯಾ)	M ೮.೩	XI	೮೦೦–
೧೯೦೮	ಮೆಸ್ಸಿನಾ (ಸಿಸಿಲಿ)	M ೭.೫	XI	೧,೬೦,೦೦೦
೧೯೨೩	ಮೆಸ್ಸಿನಾ (ಸಿಸಿಲಿ)	M ೭.೫	XI	೧,೦೦,೦೦೦
*೧೯೨೩	ಸಗಾಮಿ (ಜಪಾನ್)	M ೭.೬	XI	೨,೫೦,೦೦೦
೧೯೩೪	ಬಿಹಾರ (ಭಾರತ)	M ೮.೪	XI	೧೧,೦೦೦
೧೯೫೦	ಅಸ್ಸಾಂ (ಭಾರತ)	M ೮.೭	XII	೧,೬೦೦
೧೯೬೦	ಅಗದೀರ್ (ಮೊರಾಕ್ಕೊ)	M ೫.೭	VII	೧೪,೦೦೦
೧೯೬೧	ಚಿಲಿ (ದ. ಅಮೆರಿಕ)	M ೮.೫	VII	೧೪,೦೦೦+
೧೯೬೨	ಇರಾನ್	M ೭.೩	X	೧೨,೦೦೦
೧೯೬೩	ಸ್ಕೋಪ್ಜೆ (ಯುಗೊಸ್ಲಾವಿಯ)	—	೧ ಲಕ್ಷ ಜನರು ವಸತಿಹೀನರಾದರು	
೧೯೬೪	ಅಲಾಸ್ಕ	M ೮.೬	XI	೧೩೧
೧೯೭೦	ಪೆರು (ದ. ಅಮೆರಿಕ)	M ೭.೮	XI	೬೭,೦೦೦
೧೯೭೬	ಟಾಂಗ್‌ಶಾನ್ (ಚೈನ)	M ೭.೮	೭.೫ ಲಕ್ಷ ಜನರ ಸಾವು	
*೧೯೮೫	ಟೋಕಿಯೋ (ಜಪಾನ್)	M ೬.೨	VII	*೧ ಸಾವೂ ಇಲ್ಲ
೧೯೮೯	ಆರ್ಮೇನಿಯ (ರಷ್ಯ)	M ೮.೭	XII	೧,೦೦,೦೦೦
೧೯೯೦	ಗಿಲಾನ್ (ಇರಾನ್)	M ೭.೭	XI	೮೦,೦೦೦
೧೯೯೩	ಲಾತೂರ್, ಖಿಲ್ಲಾರಿ (ಭಾರತ)	M ೬.೫	VII	೧೦,೦೦೦ ಸಾವು ಹಾಗೂ ೨೦,೦೦೦ ಜನರು ಗಾಯಗೊಂಡರು

— ಭೂಕಂಪದಿಂದಾಗಿ ಅನಿಲ ವಾಹಕ ಕೊಳವೆಗಳು ಮುರಿದು, ಘರ್ಷಣೆಯಲ್ಲಿ ಬೆಂಕಿ ಆವರಿಸಿ, ಬೆಂದು ಸಾವನ್ನಪ್ಪಿದರು.

+ ಸಮುದ್ರದಡಿಯಲ್ಲಿ ಭೂಕಂಪ ಸಂಭವಿಸಿ "ಟ್ಸುನಾಮಿ" ಸಮುದ್ರದ ದೈತ್ಯ ಅಲೆಗಳು ಅಪ್ಪಳಿಸಿದ್ದರಿಂದ ಸಾವು.

* ಈ ಎರಡು ಭೂಕಂಪಗಳ ಹಾನಿಯನ್ನು ಹೋಲಿಸಿ ನೋಡಿ!

ಐತಿಹಾಸಿಕ ಭೀಕರ ಭೂಕಂಪಗಳ ಪಟ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಕೆಳಕಂಡ ಆಶ್ಚರ್ಯಕರ ಸಂಗತಿಗಳನ್ನು ತಿಳಿಯಬಹುದು. ಮೊದಲನೆಯದಾಗಿ ಭೂಕಂಪದ ಶಕ್ತಿ ಪ್ರಮಾಣ ಇಲ್ಲವೆ ತೀವ್ರತೆಗೂ ಹಾಗೂ ಜೀವಹಾನಿಗೂ ಯಾವ ಸಂಬಂಧವೂ ಇಲ್ಲ ಎಂಬುದು. ಕಾರಣ ಭೂಕಂಪವಾಗುವ ಸ್ಥಳ ಮತ್ತು ಸಮಯವೂ ಒಂದು ಮುಖ್ಯವಾದ ಅಂಶ. ನಿರ್ಜನ ಪ್ರದೇಶ ಅಥವಾ ಸಮುದ್ರದ ಆಳಪ್ರದೇಶಗಳಲ್ಲಿ ಭೂಕಂಪವಾದರೆ ಜೀವಹಾನಿ ಇರಲಾರದು. ಭೂಕಂಪ ಸಂಭವಿಸಿಯೂ ಕಟ್ಟಡಗಳು ಉರುಳದಿದ್ದರೆ ಜೀವಹಾನಿಯ ಪ್ರಶ್ನೆಯೇ ಇರುವುದಿಲ್ಲ. ಉದಾಹರಣೆಗೆ ಮೇಲಿನ ಪಟ್ಟಿಯಿಂದ ಜಪಾನ್ ದೇಶದ ಒಂದೇ ಸ್ಥಳದಲ್ಲಿ ಸಂಭವಿಸಿದ ೧೯೨೩ ಮತ್ತು ೧೯೭೫ರ ಎರಡು ಭೂಕಂಪಗಳಿಂದಾದ ಜೀವಹಾನಿಯನ್ನು ಹೋಲಿಸಿದರೆ, ೧೯೨೩ರ ಭೂಕಂಪದಿಂದ ೨.೫ ಲಕ್ಷ ಮಂದಿ ಮೃತರಾದರೂ, ಅಳಿದುಳಿದವರು ಎದೆಗುಂದದೆ ಅದೇ ಸ್ಥಳದಲ್ಲಿ (ಟೋಕಿಯೊ) ಭೂಕಂಪ ನಿರೋಧಕ ಕಟ್ಟಡಗಳನ್ನು ಕಟ್ಟಿದರು. ಆದರೆ ೧೯೭೫ರಲ್ಲಿ ಅದೇ ಸ್ಥಳದಲ್ಲಿ ಭೂಕಂಪ ಸಂಭವಿಸಿತಾದರೂ ಒಂದೇ ಒಂದು ಸಾವೂ ಆಗಲಿಲ್ಲ.

ಭೂಕಂಪ ಮುನ್ಸೂಚನೆ—ಭವಿಷ್ಯಸುದ್ದಿ

ಭೂಕಂಪಗಳಿಂದಾಗುವ ಅಪಾರ ಹಾನಿಯನ್ನು ತಪ್ಪಿಸಲು ಪ್ರಪಂಚದಾದ್ಯಂತ ವಿಜ್ಞಾನಿಗಳು ವಿಶ್ವಪ್ರಯತ್ನ ಮಾಡುತ್ತಲೇ ಇದ್ದಾರೆ. ಪ್ರಕೃತಿಯು ನಮಗೊಡ್ಡಿರುವ ಸವಾಲನ್ನು ಹೇಗೆ ಎದುರಿಸಬೇಕೆಂದು ಇಲ್ಲವೆ ನಿವಾರಿಸಲು ಸತತ ಪ್ರಯೋಗಗಳು ನಡೆಯುತ್ತಲಿವೆ.

ಇತ್ತೀಚಿನ ವರ್ಷಗಳಲ್ಲಿ ಭೂಕಂಪಗಳ ಬಗ್ಗೆ ದೀರ್ಘಾವಧಿ ಇಲ್ಲವೆ ಅಲ್ಪಾವಧಿ ಮುನ್ಸೂಚನಾ ಭವಿಷ್ಯ ನುಡಿಯಲು ಸಾಕಷ್ಟು ಪ್ರಯತ್ನಗಳು ನಡೆದಿವೆ. ಈ ಸಮಸ್ಯೆಯನ್ನು ಬಗೆಹರಿಸಲು ಭೂವಿಜ್ಞಾನಿಗಳು, ತಾಂತ್ರಿಕಜ್ಞರು ಹಾಗೂ ಕಾಲಜ್ಞಾನಿಗಳು (ಜ್ಯೋತಿಶ್ಶಾಸ್ತ್ರಜ್ಞ) ಒಟ್ಟುಗೂಡಿ ನಿಖರವಾದ ಮುನ್ಸೂಚನೆ ಇಲ್ಲವೆ ಭೂಕಂಪದ ವಿಪತ್ತನ್ನಾದರೂ ಕಡಿಮೆ ಮಾಡಲು ಶ್ರಮವಹಿಸುತ್ತಿದ್ದಾರೆ.

ಪದೇ ಪದೇ ಭೂಕಂಪದ ವಿಪತ್ತಿಗೆ ಒಳಗಾಗಿರುವ ದೇಶಗಳಾದ ಜಪಾನ್, ರಷ್ಯಾ, ಚೈನಾ ಮತ್ತು ಅಮೆರಿಕಗಳಲ್ಲಿ 'ಮುನ್ಸೂಚನೆ' ಬಗ್ಗೆ ಮಹತ್ವದ ಸಂಶೋಧನೆಗಳು, ಪ್ರಯೋಗಗಳು ನಡೆಯುತ್ತಲಿವೆ. ಆ ಸಂಶೋಧನೆಗಳ ಸಾರಾಂಶವನ್ನು ಸಂಕ್ಷಿಪ್ತವಾಗಿ ತಿಳಿಯೋಣ.

ಅಮೆರಿಕದ ಕ್ಯಾಲಿಫೋರ್ನಿಯ, ನೆವಾಡ ಮತ್ತು ಅಲಾಸ್ಕ ಪ್ರದೇಶಗಳು ಬಹುತೇಕ ಭೂಕಂಪವಲಯದಲ್ಲಿವೆ. ಕಾರಣ ಆ ಪ್ರದೇಶಗಳಲ್ಲಿ ಸ್ಯಾನ್ ಆಂಡ್ರಿಯಾಸ್ ಫಾಲ್ಟ್ ಹಾದುಹೋಗುತ್ತದೆ. ಈ ಸ್ತರಭಂಗದ ಸುತ್ತ ಮುತ್ತಲೂ ಅತ್ಯಾಧುನಿಕ ಕಂಪನಮಾಪಕಗಳನ್ನು ಭೂಮೇಲ್ಮೈಯಲ್ಲಿ ಹಾಗೂ ೩೦ ಮೀಟರ್‌ನಿಂದ ೩೦೦೦ ಮೀಟರ್ ಆಳದ ಬೈರಿಗೆ ಬಾವಿಗಳಲ್ಲಿ ಅಳವಡಿಸಿ, ಅವುಗಳಿಂದ ಬರುವ ಎಲ್ಲಾ ಮಾಹಿತಿಗಳನ್ನೂ ಗಣಕಯಂತ್ರಗಳ ಸಹಾಯದಿಂದ ವಿಶ್ಲೇಷಿಸಿ, ಸೂಚನೆಗಳನ್ನು ಪ್ರಕಟಿಸುತ್ತಾರೆ. ಆಗಲಿರುವ ದುರಂತವನ್ನು ತಪ್ಪಿಸಲು ಸದಾ ಸನ್ನದ್ಧರಾಗಿರುತ್ತಾರೆ.

ಮೆಕ್ಸಿಕೋದ ನ್ಯಾಶನಲ್ ವಿಶ್ವವಿದ್ಯಾಲಯದಲ್ಲಿ "ಭೂಕಂಪ ಕಾರ್ಖಾನೆ" ಯನ್ನೇ ತೆರೆದಿದ್ದಾರೆ. ಅವರ ಮುಖ್ಯ ಉದ್ದೇಶವಾದರೂ ಮುನ್ಸೂಚನೆ ಸಾಧ್ಯವಾಗದಿದ್ದಲ್ಲಿ; ಭೀಕರ ಭೂಕಂಪವೇ ಆದರೂ, ಆಸ್ತಿಪಾಸ್ತಿ ಇಲ್ಲವೆ ಜೀವಕ್ಕೂ ಯಾವ ಹಾನಿಯೂ ಆಗದಂತೆ, ಭೂಕಂಪಕ್ಕೆ ಬದಲಿ ವ್ಯವಸ್ಥೆಯಾದ ಕಂಪನ ನಿರೋಧಕ ಮತ್ತು ಪ್ರತಿರೋಧಕಗಳನ್ನು ಬಳಸಿ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಭೂಕಂಪ ಕಾರ್ಖಾನೆಯ ಬಹುಮುಖ್ಯ ಕೊಡುಗೆಯೆಂದರೆ; ಪ್ರಯೋಗಾಲಯದಲ್ಲಿ ಭೂಕಂಪವನ್ನು ಸೃಷ್ಟಿಸಿ ಅದರ ತೀವ್ರತೆ ಮತ್ತು ತೀಕ್ಷ್ಣತೆಗಳನ್ನು ಏರುಪೇರು ಮಾಡುವುದು. ಹಾಗೂ ಹೆಚ್ಚು ತೀವ್ರತೆಯನ್ನು (ಭೀಕರ ಭೂಕಂಪ M ೬.೫ ರಿಂದ ೮.೭ ವರೆವಿಗಿನ) ಕ್ಷೇಮಕರ ಮಟ್ಟಕ್ಕೆ ೧ ರಿಂದ ೩ ಅಥವಾ ೪ ಕ್ಕೆ ಇಳಿಸುವುದು. ಅಮೆರಿಕದಲ್ಲಿ ಎರಡು ಅಧಿಕೃತ ಕೇಂದ್ರಗಳು ಭೂಕಂಪ ಮುನ್ಸೂಚನೆಗಾಗಿ ಶ್ರಮಿಸುತ್ತಲಿವೆ. (ಒಂದು ರಕ್ಷಣಾ ವಿಭಾಗಕ್ಕೆ ಹೊಂದಿಕೊಂಡಂತೆ, ಮತ್ತೊಂದು ಪರಿಸರವಿಜ್ಞಾನಕ್ಕೆ ಒಳಪಟ್ಟಂತೆ) ಆರ್ಥಿಕ ವಾಗಿ ಮತ್ತು ವೈಜ್ಞಾನಿಕವಾಗಿಯೂ ಸುಸ್ಥಿತಿಯಲ್ಲಿರುವ ಅಮೆರಿಕದಂತಹ ದೇಶಕ್ಕೆ ಭೂಕಂಪ ಮುನ್ಸೂಚನೆಯ ಬಗ್ಗೆ ಇನ್ನೂ ಖಚಿತವಾದ ಪರಿಹಾರೋ ಪಾಯ ದೊರೆತಿಲ್ಲವಾದರೂ, ಭೂಕಂಪದ ಪರಿಣಾಮವನ್ನು ಕಡಿಮೆಗೊಳಿಸಲು ಶಕ್ತರಾಗಿದ್ದಾರೆ.

ಜಪಾನ್ ಸರಕಾರವು, ಯುನೆಸ್ಕೊ ಸಹಕಾರದೊಂದಿಗೆ ೧೯೬೦ರಲ್ಲಿ ಭೂಕಂಪದ ಅಂತರರಾಷ್ಟ್ರೀಯ ಅಧ್ಯಯನ ಸಂಸ್ಥೆಯನ್ನು ಆರಂಭಿಸಿ, ಆಶಾ ದಾಯಕ ಸುರಕ್ಷತಾ ಯೋಜನೆಯನ್ನು ರೂಪಿಸಿದೆ. ಟೋಕಿಯೋ ವಿಶ್ವವಿದ್ಯಾ ಲಯದಲ್ಲಿ ಭೂಕಂಪದ ಬಗ್ಗೆ ಒಂದು ಮಹತ್ತರ ಪ್ರಯೋಗವನ್ನು ಮಾಡಿ ನೂರಕ್ಕೆ ನೂರರಷ್ಟು ಸುರಕ್ಷತೆಯನ್ನು ಒದಗಿಸಿದ್ದಾರೆ. ಅದಾದರೂ ಅತಿಸಾಯ

ಅಥವಾ ಬುನಾದಿ ಮತ್ತು ಕಂಪಿಸುವ ಭೂಮಿಯೂ ಒಟ್ಟಿಗೇ ಚಲಿಸುವುದು, ಇದರಿಂದಾಗಿ ಕಟ್ಟಡಕ್ಕೆ ಕನಿಷ್ಠ ಕಂಪನವಾಗುವುದು ಎಂದು. ಇದೇ ತತ್ತ್ವವನ್ನು ಅಳವಡಿಸಿ ೮ ಇಂಚಿನ ಬಾಲ್‌ಬೇರಿಂಗ್ ಮೇಲೆ ೩೦ ಅಂತಸ್ತಿನ ಕಟ್ಟಡ ನಿರ್ಮಿಸಿದ್ದಾರೆ. ಅಂತಹ ಕಟ್ಟಡವು ಯಾವುದೇ ತೆರನಾದ ಭೂಕಂಪವನ್ನೂ ಸಹಿಸಬಲ್ಲದ್ದಾಗಿದೆ. ಭೀಕರ ಭೂಕಂಪವೇ ಆದರೂ ಕಟ್ಟಡಕ್ಕೆ ಮಾತ್ರ ಕನಿಷ್ಠ ಕಂಪನ (ನೋಡಿ ಚಾರಿತ್ರಿಕ ಭೀಕರ ಭೂಕಂಪಗಳ ಪಟ್ಟಿ *೧೯೮೫ ಟೋಕಿಯೋ ಭೂಕಂಪ).

ಇದೇ ತತ್ತ್ವದ ಆಧಾರದ ಮೇಲೆ ಮಾಂಟ್ರಿಯಲ್ (ಕೆನಡ) ಪ್ರದೇಶದಲ್ಲಿ ೪೨ ಅಂತಸ್ತಿನ ಗಗನಚುಂಬಿ ಕಟ್ಟಡವನ್ನು X ಆಕಾರದ ಅಡಿಪಾಯದ ಮೇಲೆ ಕಟ್ಟಿರುತ್ತಾರೆ. ಈ ಕಟ್ಟಡವು ಪ್ರಚಂಡ ಮಾರುತವನ್ನೇ ಅಲ್ಲದೆ ಭೀಕರ ಭೂಕಂಪವನ್ನೂ ಸಹಿಸಬಲ್ಲದು.

ರಷ್ಯಾದ ಭೂಕಂಪ ವಿಜ್ಞಾನಿಗಳ ಪ್ರಕಾರ ಭೂಕಂಪವಾಗುವುದಕ್ಕೆ ಒಂದೆರಡು ವರ್ಷಗಳ ಕಾಲ ಮುಂಚೆಯೇ P ಮತ್ತು S ಅಲೆಗಳ ವಿರೂಪ ಒತ್ತಡ (ಶಿಯರ್‌ಸ್ಟ್ರೆಸ್) ಮತ್ತು ಅವುಗಳ (V_p/V_s) ವೇಗದಲ್ಲೂ ಗಮನಾರ್ಹ ಬದಲಾವಣೆಯನ್ನು ಪತ್ತೆಹಚ್ಚಿದಾಗ, ಮುನ್ಸೂಚನೆ ಸಾಧ್ಯ ಎಂದಿದ್ದಾರೆ. ಈ ಸೂತ್ರವನ್ನು ಅನುಸರಿಸಿ ಗಾರ್ಮದಲ್ಲಿ ಭೂಕಂಪವಾಗುವ ಮುನ್ಸೂಚನೆಯನ್ನು ಕೊಟ್ಟಿದ್ದರು. ಇದೇರೀತಿ ನ್ಯೂಯಾರ್ಕಿನ, ಅಡಿರಾನ್‌ಡಾಕ್ ಮತ್ತು ಕ್ಯಾಲಿಫೋರ್ನಿಯಾದ ಸ್ಯಾನ್‌ಫರ್ನಾಂಡೊಗಳ ಭೂಕಂಪ ಮುನ್ಸೂಚನೆಯು ಸಾಧ್ಯವಾಯಿತು.

ಚೀನಾ ಮತ್ತು ರಷ್ಯಾ ಭೂಕಂಪ ವಿಜ್ಞಾನಿಗಳ ಮಹತ್ತ್ವದ ಕೊಡುಗೆ ಎಂದರೆ, ಭೂಕಂಪಗಳ ಪೂರ್ವಸೂಚಕ "ರಡಾನ್". ಇದೊಂದು ಅನಿಲ. ಇವರ ಅಲ್ಪ ಕಣಗಳು ಭೂಮಿಯ ಆಳದಿಂದ ಬಂದು, ಬಾವಿಯ ನೀರಿನೊಂದಿಗೆ ಬೆರೆತು, ರಡಾನ್ ಅಂಶವು ಹೆಚ್ಚಾಗುವುದೇ ಭೂಕಂಪದ ಮುನ್ಸೂಚಕ ಎಂದು. ಬಾವಿಯ ನೀರಿನ ರಡಾನ್ ಅಂಶದ ಹೆಚ್ಚಳವನ್ನು ಗಮನಿಸಿ ಚೀನಾದ ಲಿಯೋನಿಂಗ್‌ನಲ್ಲಿ ಸಂಭವಿಸಿದ M ೭.೩ರ ಭಯಾನಕ ಭೂಕಂಪ ಸಂಭವಿಸುವ ಮೂರು ದಿನಗಳ ಮುಂಚೆಯೇ ಮುನ್ಸೂಚನೆ ಕೊಟ್ಟು, ಲಕ್ಷಾಂತರ ಜನರ ಸಂರಕ್ಷಣೆಯು ಸಾಧ್ಯವಾಯಿತು. ಹಾಗೆಯೇ ತಾಷ್ಕೆಂಟ್‌ನಲ್ಲಿ ೧೯೬೬ರಲ್ಲಿ ಸಂಭವಿಸಬೇಕಾಗಿದ್ದ M ೫.೩ ತೀವ್ರತೆಯ ಭೂಕಂಪ ಮತ್ತು ಅದೇ ಪ್ರದೇಶದಲ್ಲಿ ಮತ್ತೊಮ್ಮೆ ೧೯೬೭ (M ೪)ರ ಭೂಕಂಪಗಳ ಮುನ್ಸೂಚನೆಯನ್ನು ರಡಾನ್ ಅಂಶದ

ಹೆಚ್ಚಳದಿಂದಲೇ ಸೂಚಿಸಿದ್ದರು. ರಡಾನ್ ಅಂಶದ ಜೊತೆಗೆ ಇತರ ನಿಯತಾಂಕಗಳನ್ನು (ಪೆರಾಮೀಟರ್ಸ್) ಅಂದರೆ ಶಿಲಾ ಹಿಗ್ಗುವಿಕೆ, ದ್ರವದ ಹೆಚ್ಚು ಒತ್ತಡ, ಗುರುತ್ವಾಕರ್ಷಣೆಯಲ್ಲಾಗುವ ನಿಮ್ನ ಅಸಮತೆ, P ಮತ್ತು S ಅಲೆಗಳ ವೇಗ ಬದಲಾವಣೆಗಳು ಭೂಕಂಪದ ಮುನ್ಸೂಚಕಗಳು.

ಇತ್ತೀಚಿಗೆ ಭಾರತದಲ್ಲೂ ಭೂಕಂಪ ಮುನ್ಸೂಚನೆಗಳ ಬಗ್ಗೆ ಅಧ್ಯಯನ ಆರಂಭವಾಗಿದೆ. ಭಾರತದ ಭೂವಿಜ್ಞಾನ ಸರ್ವೇಕ್ಷಣಾ ಸಂಸ್ಥೆಯು ೧೯೭೦ರಲ್ಲಿ ನಮ್ಮ ದೇಶದ ಭೂಕಂಪ ವಲಯಗಳನ್ನು ಗುರುತಿಸಿತ್ತು. ಆದರೆ, ಈ ನಕ್ಷೆಯನ್ನು ಪುನರ್‌ಪರಿಶೀಲಿಸಬೇಕಾಗಿದೆ. ಕಾರಣ ದಕ್ಷಿಣ ಭಾರತದಲ್ಲಿ ಭೂಕಂಪ ವಲಯಗಳನ್ನು ಗುರುತಿಸಿರಲಿಲ್ಲ ಮತ್ತು ೧೯೭೦ರ ಕೊಯ್ನಾ ಹಾಗೂ ೧೯೯೩ ಲಾತೂರ್-ಖಿಲ್ಲಾರಿ ಭೂಕಂಪಗಳ ನಂತರ, ಭೂವಿಜ್ಞಾನಿಗಳ "ಪರ್ಯಾಯ ದ್ವೀಪವು ಭೂಕಂಪ ರಹಿತ ಹಾಗೂ ಸುರಕ್ಷತಾ ಭೂಮಿ" ಎಂಬ ಲೆಕ್ಕಾಚಾರವನ್ನು ತಲೆಕೆಳಗುಮಾಡಿದೆ. ಆದುದರಿಂದ ನಮ್ಮ ದೇಶದ ಭೂಕಂಪ ವಲಯಗಳನ್ನು ವಿನೂತನ ಸರ್ವೇಕ್ಷಣೆ ನಡೆಸಿ ಹೊಸ ನಕ್ಷೆಯನ್ನು ಸಿದ್ಧಪಡಿಸಲು ಸರ್ವೇಕ್ಷಣಾ ಸಂಸ್ಥೆಯವರು ಆಧುನಿಕ ಉಪಕರಣಗಳಿಂದ ಕಾರ್ಯೋನ್ಮುಖರಾಗಿದ್ದಾರೆ. ಈಗ ಸರ್ವೇಕ್ಷಣ ತಂಡವು ಪರಿಷ್ಕೃತ ನಕ್ಷೆ ಮತ್ತು ಭೂಕಂಪ ಮುನ್ಸೂಚನೆಗಳ ಬಗ್ಗೆ ಹೆಚ್ಚು ಆಸ್ಥೆ ಕೊಟ್ಟು, ಪ್ರಕೃತಿಯ ಭೀಕರ ವಿಪತ್ತನ್ನು ತಪ್ಪಿಸಲು ಸನ್ನದ್ಧವಾಗುತ್ತಿದೆ.

ಲಾತೂರು ಮತ್ತು ಖಿಲ್ಲಾರಿಗಳಲ್ಲಾದ ಸೆಪ್ಟೆಂಬರ್ ೩೦ರ ಭೂಕಂಪದ ಮುನ್ಸೂಚನೆಯನ್ನು ಕೃಷ್ಣಬ್ರಹ್ಮಂ ಮತ್ತು ನೇಗಿಯವರು ೧೯೭೩ರಲ್ಲೇ ಗುರುತ್ವಾಕರ್ಷಣ ಸರ್ವೇಕ್ಷಣೆ ನಡೆಸುವಾಗ, ಆ ಪ್ರದೇಶಗಳಲ್ಲಿ ಭೂ ಅಂತರಾಳದಲ್ಲಿ ಹುದುಗಿರುವ ಕೊಯ್ನಾ ಮತ್ತು ಕುರ್ಡುವಾಡಿ ಸ್ತರಭಂಗಗಳನ್ನು ಗುರುತಿಸುವುದರೊಂದಿಗೆ ಮುನ್ಸೂಚನೆಯನ್ನೂ ಕೊಟ್ಟಿದ್ದರು.

೧೯೮೮ರಲ್ಲಿ ರಾಜಗುರು ಮತ್ತು ಬಾದಾಮ್ ಹಳೆಯ ಮೆಕ್ಕಲು ನಿಕ್ಷೇಪ (ಓಲ್ಡರ್ ಅಲ್ಯೂವಿಯಂ ಡೆಪಾಸಿಟ್ಸ್) ಮಹಾರಾಷ್ಟ್ರದಲ್ಲಿರುವುದನ್ನು ಅವರು ಪ್ರಕಟಿಸಿದ್ದರು. ಅಲ್ಲಿಯ ಭೂಭಾಗವು ತಾರುಣ್ಯತೆಯನ್ನು ಪಡೆಯಿತು ಎಂಬಂಶವನ್ನು ಗಮನಿಸಿದ್ದರು. ಆದರೆ ನಾವು, ಅದು ಭೂಕಂಪ ಮುನ್ಸೂಚನೆಗೆ ಮುಖ್ಯ ಸಾಕ್ಷಿ ಎಂಬುದನ್ನು ಮರೆತೆವು.

ಭಾರತ ಮತ್ತು ಬರ್ಮಾ ಗಡಿಯಲ್ಲಿ ಆಗಬಹುದಾದ ಭೂಕಂಪ ಮುನ್ಸೂಚನೆಯನ್ನು ಡಾ|| ಗುಪ್ತ ಮತ್ತು ಸಿಂಗ್ (೧೯೮೬) ಅವರು, ಭಯಂಕರ ನೈಜ

ಭೂಕಂಪವು ೧೯೭೬–೧೯೮೦ರೊಳಗೆ ಆಗುವುದೆಂಬ ಖಚಿತ ಭವಿಷ್ಯನುಡಿಯನ್ನು ಹೇಳಿದ್ದರು. ಆದರೆ ಆ ಗಡಿ ಪ್ರದೇಶದಲ್ಲಿ ನಿಜಕ್ಕೂ ೧೯೭೮ರಲ್ಲಿ ಭಯಾನಕ ಭೂಕಂಪವು ಸಂಭವಿಸಿತು. ಅವರು ಹೇಳಿದ್ದ ನಾಲ್ಕು ವರ್ಷಗಳ ಅಂತರದ ಬದಲು ಎರಡು ವರ್ಷಗಳಲ್ಲಿ ಭೂಕಂಪವಾಯಿತು.

ಮತ್ತೊಂದು ಉತ್ತಮ ನಿದರ್ಶನವೆಂದರೆ, ಬಾಬಾ ಅಣು ಸಂಶೋಧನಾ ಕೇಂದ್ರದ ಡಾ|| ಕೋಲ್‌ವಾಸ್ಕರ್ ಮತ್ತಿತರರು ೧೯೭೨ರಲ್ಲಿ ಮಹಾರಾಷ್ಟ್ರದ, ಸಹಾಪುರ್‌ನ ಭಟ್‌ಸಾನಗರ್ ಡ್ಯಾಂ ಸುತ್ತಮುತ್ತ ನಡೆಸಿದ ಸೂಕ್ಷ್ಮ ಕಂಪನಗಳ ಅಧ್ಯಯನದಿಂದ ಅದರಲ್ಲೂ ಭಟ್‌ಸಾನಗರ್ ಡ್ಯಾಂ ತುಂಬುವುದಕ್ಕೆ ಮುಂಚೆ ಮತ್ತು ತುಂಬಿ ತುಳುಕುವಾಗ ಸೂಕ್ಷ್ಮಕಂಪನಗಳಲ್ಲಾಗುವ ಬದಲಾವಣೆಗಳನ್ನು ಅತ್ಯಾಧುನಿಕ ಭೂಕಂಪ ಮಾಪನಗಳ ಜಾಲದಿಂದ ದಾಖಲಿಸಿದರು. ಈ ಪ್ರಯೋಗದಿಂದ ಜಲಾಶಯವು ತುಂಬಿತುಳುಕುವಂತಾದಾಗ 'ಜಲಾಶಯ ಜನ್ಯ' ಭೂಕಂಪಗಳು ಉಂಟಾಗುತ್ತವೆ ಎಂಬುದನ್ನು ದೃಢಪಡಿಸಿದ್ದಾರೆ.

ಆದುದರಿಂದ ಮುನ್ಸೂಚನೆ ಬಗ್ಗೆ ಸಂಶೋಧನೆ ನಡೆಸುತ್ತಿರುವವರಿಗೆ ಭೂಕಂಪವು ಬಿಡಿಸಲಾಗದಕಗ್ಗಂಟಾಗಿದೆ. ಏಕೆಂದರೆ ಮುನ್ಸೂಚನೆ (ಭವಿಷ್ಯನುಡಿ) ಸುಳ್ಳಾದರೆ ಎಲ್ಲರೂ ಛೀಮಾರಿ ಹಾಕುತ್ತಾರೆ. ಆದರೆ ಅವರ ಹಿಂದಿನ ಪರಿಶ್ರಮ ಈಗ ಮುನ್ಸೂಚನೆಗೆ ಪರ್ಯಾಯವಾಗುವಂತಿದೆ. ಆದಾಗ್ಯೂ ಪರ್ಯಾಯ ಮಾರ್ಗಗಳು—ಅಂದರೆ ಒತ್ತಡವು ಭೂಕಂಪವಾಗಿ ಪ್ರಸಾರವಾಗುವುದಕ್ಕೆ ಮುಂಚೆಯೆ ಆ ಸ್ಥಳದಲ್ಲಿ ಅಷ್ಟೇ ಒತ್ತಡ ಹೇರಿ ಭೂಕಂಪದಿಂದ ಪಾರಾಗುವುದು. ಈ ಯೋಜನೆಯಂತೆ ಮರಳುಗಾಡು ಇಲ್ಲವೆ ಎಣ್ಣೆಬಾವಿಗಳ ಸುತ್ತ ಅಂದರೆ ಆ ನಿರ್ಜನ ಪ್ರದೇಶಗಳಲ್ಲಿ ಅಣುಬಾಂಬನ್ನು ಸಿಡಿಸಿ ಭೂಕಂಪವನ್ನು ತಡೆಗಟ್ಟಿದ್ದಾರೆ. ಆದರೆ ಇದನ್ನು ಜನನಿಬಿಡ ನಗರಗಳು, ಡ್ಯಾಂಗಳು, ರೇವುಗಳು ಮತ್ತಿತರ ಮುಖ್ಯ ಕೇಂದ್ರಗಳ ಮೇಲೆ ಪ್ರಯೋಗಿಸುವಂತಿಲ್ಲ. ಕಾರಣ, ಖಾಯಿಲೆಯನ್ನು ಗುಣಪಡಿಸಬೇಕಾದ ಔಷಧಿಯೇ ಯಮಸದೃಶವಾದಂತೆ. ಆದುದರಿಂದ ಶತಮಾನ ಗಳಿಂದಲೂ ಮುನ್ಸೂಚನೆಯ ಬಗ್ಗೆ ಸಂಶೋಧನೆಗಳು ನಡೆಯುತ್ತಿದ್ದರೂ ನಿಖರವಾದ ಫಲಿತಾಂಶಗಳು ದೊರೆತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಮುನ್ಸೂಚನೆಯ ಬಗ್ಗೆ ಆಶಾದಾಯಕ ಫಲಿತಾಂಶಗಳನ್ನು ನಿರೀಕ್ಷಿಸಬಹುದಾಗಿದೆ.

ಖ್ಯಾತ ತತ್ತ್ವಜ್ಞಾನಿ ಕಾಂಟನು, ಲಿಸ್ಬನ್ ಭೂಕಂಪ (೧೭೫೫)ವನ್ನು ಕುರಿತು, ಅದು ಪ್ರಕೃತಿಯ ನೈಸರ್ಗಿಕ ಕ್ರಿಯೆ ಎಂದಿದ್ದಾನೆ. ಆ ಭೂಕಂಪ

ದಿಂದಾದ ಹಾನಿಯನ್ನು ಪ್ರತ್ಯಕ್ಷವಾಗಿ ನೋಡಿದ ಕಾಂಟನು ಸರ್ವಕಾಲೀನವಾದ ಸಲಹೆಯನ್ನಿತ್ತಿದ್ದಾನೆ. "ನಾವು, ಭೂಕಂಪಗಳು ಎಲ್ಲಿ ಆಗುತ್ತವೆ ಎಂಬುದನ್ನು ಮೊದಲು ಪತ್ತೆಹಚ್ಚಿ, ಅಂತಹ ಸ್ಥಳಗಳಲ್ಲಿ ಆದಷ್ಟೂ ನಗರ ನಿರ್ಮಾಣ ಮಾಡದಿರುವಂತೆ ಎಚ್ಚರ ವಹಿಸಿರಿ ಎಂದು". ಈ ಸಲಹೆ ಇಂದಿಗೂ ಸಮಂಜಸ. ಆದರೆ ಜನಸಂಖ್ಯಾ ಸ್ಫೋಟ ಮತ್ತು ಮಿತಿಮೀರಿ ಹಬ್ಬುತ್ತಿರುವ ನಗರಗಳು, ಎಲ್ಲೆಂದರಲ್ಲಿ ಬೆಳೆದು ನಿಂತಿವೆ. ಉದಾಹರಣೆಗೆ, ಭೂಕಂಪವಲಯದಲ್ಲೆ ಹೆಚ್ಚು ಜನನಿಬಿಡ ಪ್ರದೇಶಗಳಿವೆ; ಕ್ಯಾಲಿಫೋರ್ನಿಯ, ಮೆಕ್ಸಿಕೊ, ಲಿಯೋನಿಂಗ್, ಮುಂಬೈನಗರ, ಕಲ್ಕತ್ತ ಇತ್ಯಾದಿಗಳು.

ಇದಕ್ಕೆ ಪರಿಹಾರವೆಂಬಂತೆ, ವಿಶ್ವವಿಖ್ಯಾತ ಭೂಕಂಪ ವಿಜ್ಞಾನಿ ಡಾ|| ಕಾರ್ಲ್ ಕಿಸ್ಲಿಂಗರ್ ಅವರು ಭೂಕಂಪದ ಬಗ್ಗೆ ಅನುಭವದ ಮಾತನ್ನು ಹೇಳಿದ್ದಾರೆ. "ನಿಜಾಂಶವೆಂದರೆ, ಭೂಕಂಪವಾದಾಗ ಕಂಪಿಸುವ ಭೂಮಿಯಿಂದ ಹೊರ ಬರುವ ಶಕ್ತಿಗೆ ಮನುಷ್ಯನನ್ನು ಕೊಲ್ಲುವ ಶಕ್ತಿ ಇರುವುದಿಲ್ಲ. ಅದಿರಲಿ, ಮನುಷ್ಯನ ಮೈಮೇಲೆ ಒಂದು ಗೀಚನ್ನೂ ಮಾಡಲಾರದಾಗಿದೆ. ಕಟ್ಟಡಗಳು ಮತ್ತು ಇತರ ರಚನೆಗಳು ಕುಸಿದುಬೀಳುವುದರಿಂದ, ಅಂತಹ ರಾಶಿಗಳ ಕೆಳಗೆ ಸಿಕ್ಕಿಕೊಳ್ಳುವುದು ಜೀವಹಾನಿಗೆ ಮುಖ್ಯಕಾರಣ. ಕಟ್ಟಡಗಳು ನಾಶವಾಗದೆ ಹಾಗೆಯೆ ಇದ್ದರೆ ಮನುಷ್ಯರು ಜೀವಂತವಾಗಿದ್ದು ತಮ್ಮ ದೈನಂದಿನ ಕಾರ್ಯಗಳನ್ನು ಶೀಘ್ರವಾಗಿ ಮಾಡುವಂತಾಗುತ್ತಾರೆ. ಇದಕ್ಕೆ ಅಪವಾದ ವೆಂಬಂತೆ, ಅಪಾಯಕಾರಿ ಸಮುದ್ರದ ಅಲೆ (ಟ್ಸುನಾಮಿ)ಗಳುಂಟಾಗಬಹುದು; ಇಲ್ಲವೆ ವ್ಯಾಪಕ ಪ್ರಮಾಣದ ಬೆಂಕಿಯನ್ನನುಸರಿಸಿದ ಕಂಪನಗಳು."

ಭಾರತದ ಭೂಕಂಪ ವಲಯಗಳು :

ಭೌಗೋಳಿಕ ಮೇಲ್ಮೈಲಕ್ಷಣಗಳನ್ನು ಅನುಸರಿಸಿ ಭಾರತವನ್ನು ಮೂರು ಮುಖ್ಯ ಪ್ರಾಂತ್ಯ ಅಥವಾ ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ, ಅವುಗಳಾವರೂ:

೧) ಹಿಮಾಲಯ ಪರ್ವತ ಪ್ರದೇಶ

೨) ಸಿಂಧು–ಗಂಗಾನದಿಯ ಮೆಕ್ಕಲು ಮಣ್ಣಿನ ಪ್ರದೇಶ : ಇದು ಇತ್ತೀಚಿನ ಮೆಕ್ಕಲು ಮಣ್ಣು ಹಾಗೂ ಮರಳಿನ ಭರಿಸುವಿಕೆಯಿಂದಾದ, ನದೀ ಬಯಲುಗಳ ಮೈದಾನ ಪ್ರದೇಶ.

೩) ಭಾರತದ–ಪರ್ಯಾಯ ದ್ವೀಪ ಪ್ರದೇಶ

ಅತಿಪುರಾತನ ಶಿಲೆಗಳನ್ನು ಹೊಂದಿರುವ ಹಾಗೂ ಆ ಶಿಲೆಗಳ ಮೇಲೆ ಕಿರಿಯ ಶಿಲೆಗಳಿರುವ ಪ್ರದೇಶ.

ಭಾರತದ ಭೂ ಇತಿಹಾಸವನ್ನು ಅವಲೋಕಿಸಿದಾಗ, ಈ ಖಂಡವು ಅತ್ಯಂತ ಪುರಾತನವಾದ (೪೫.೦ ಕೋಟಿ ವರ್ಷ) ಆರ್ಷೇಯ ಶಿಲಾಸಮುದಾಯವನ್ನೇ ಅಲ್ಲದೆ, ಇತ್ತೀಚಿನ (೧೦ ಸಾವಿರ ವರ್ಷ) ಶಿಲೆಗಳನ್ನೂ ಹೊಂದಿದೆ ಎಂಬುದನ್ನು ತಿಳಿಯಬಹುದು.

ಮೇಲೆ ವಿವರಿಸಿದ ಮೂರು ಭೌಗೋಳಿಕ ಪ್ರಾಂತ್ಯಗಳಲ್ಲಿ ಎಲ್ಲವುಕ್ಕಿಂತಲೂ ಅತ್ಯಂತ ದುರ್ಬಲವಾದ ಮತ್ತು ಹೆಚ್ಚು ಭೂಕಂಪ ಪೀಡಿತ ಪ್ರಾಂತ್ಯವೆಂದರೆ—ಹಿಮಾಲಯ ಪರ್ವತ ಪ್ರದೇಶ. ಈಗ ಒಂದೊಂದು ಪ್ರದೇಶದ ಭೂಚರಿತ್ರೆ ಮತ್ತು ಅದರ ಭೂಕಂಪದ ಇತಿಹಾಸವನ್ನು ತಿಳಿಯೋಣ. ವಿವರಣೆಯ ಅನುಕೂಲಕ್ಕಾಗಿ ಮೇಲೆ ಹೇಳಿದ ಮೂರು ಪ್ರದೇಶಗಳಲ್ಲಿ ೧ ಮತ್ತು ೨ನೆಯ ಪ್ರಾಂತ್ಯಗಳನ್ನು ಒಟ್ಟಿಗೆ ವಿವರಿಸಿ; ೩ನೆಯ ವಿಭಾಗ—ಭಾರತದ ಪರ್ಯಾಯ ದ್ವೀಪದ, ಭೂಕಂಪ ಇತಿಹಾಸವನ್ನು—ಲಾತೂರ್, ಬಿಲ್ಲಾರಿ ಮತ್ತು ಕರ್ನಾಟಕದ ಭೂಕಂಪಗಳನ್ನು ಕುರಿತು ಮುಂದಿನ ಪುಟಗಳಲ್ಲಿ ವಿಶ್ಲೇಷಿಸಲಾಗುತ್ತದೆ.

ಹಿಮಾಲಯ ಪರ್ವತ ಪ್ರದೇಶ ಹಾಗೂ ಸಿಂಧು–ಗಂಗಾ ನದಿಬಯಲು

ನಮ್ಮ ದೇಶದ ಉತ್ತರಭಾಗಕ್ಕೆ, ಹಿಮಾಲಯವು ನಾಲ್ಕು ಪರ್ವತ ಶ್ರೇಣಿಗಳನ್ನೊಳಗೊಂಡು ೧೬೦೦ ಕಿ.ಮೀ. ಉದ್ದಕ್ಕೂ, ಪೂರ್ವ–ಪಶ್ಚಿಮವಾಗಿ ಹಬ್ಬಿದೆ. ಹಿಮಾಲಯಕ್ಕೆ ಸಮನಾಂತರವಾಗಿ, ದಕ್ಷಿಣಕ್ಕೆ ಉಬ್ಬಿದಂತೆ ಇರುವ ಮಹಾಕಂದಕ (ಫ್ಲೋರ್ ಡೀಪ್)ವು, ಇಂದಿಗೆ ಸುಮಾರು ಏಳು ಕೋಟಿ ವರ್ಷಗಳಷ್ಟು ಹಿಂದೆ, ಏಷ್ಯಾ ಮತ್ತು ಭಾರತ ಪರ್ಯಾಯದ್ವೀಪದ ಎರಡೂ ಫಲಕಗಳು ಅಭಿಮುಖವಾಗಿ ಢಿಕ್ಕಿ ಹೊಡೆದುದರಿಂದ ಹಿಮಾಲಯದ ಉದ್ಭವ ಹಾಗೂ ಸೇರುವೆಯ ಏಣೆಸಲ್ಲಿ ಬೃಹತ್ ಕಂದಕದ ಉಗಮವಾಯಿತು. ಸೇರುವೆ ಅಂಚುಗಳ ಕಟೆಯು ದುರ್ಬಲವಾಗಿದ್ದುದರಿಂದ ಹಾಗೂ ಒತ್ತಡಕ್ಕೆ ಸಿಲುಕಿಕೊಂಡಿದ್ದರಿಂದ ೧೬೦೦ ಕಿ.ಮೀ. ಉದ್ದದ ಹಿಮಾಲಯ ಸ್ತರಭಂಗವೂ ಉದಯಿಸಿತು. (ಹೆಚ್ಚಿನ ವಿವರಣೆಗೆ ಹಿಂದಿನ ಸಂಚಿಕೆ ನೋಡಿ, ಪರ್ವತೋದಯ ಮತ್ತು

ಭೂಕಂಪ ಹಣೆಪಟ್ಟಿಯಡಿಯಲ್ಲಿ). ಈ ಎರಡು ಫಲಕಗಳ ಅಭಿಮುಖ ಢಿಕ್ಕಿ ಇಲ್ಲವೆ ತಾಗುವಿಕೆಯಿಂದ (ಕನರ್ವಜೆಂಟ್/ಕೊಲಿಷನ್ ಪ್ಲೇಟ್ಸ್) ಹಿಮಾಲಯದ ಉದ್ದಕ್ಕೂ ಸ್ತರಭಂಗವೇರ್ಪಟ್ಟಿತು. ಇವನ್ನೆ ಪ್ರಮುಖ ಸೀಮಾ/ಚಾಚು ಸ್ತರಭಂಗ ಎಂದು ಕರೆಯುತ್ತೇವೆ (ಮೈನ್ ಬೌಂಡ್ರಿ ಫಾಲ್ಟ್/ಥ್ರಸ್ಟ್—M.B.T.)ಈ ಸ್ತರಭಂಗದ ಇಬ್ಬದಿಗಳು ಅತಿದುರ್ಬಲ ಹಾಗೂ ಸಮತೋಲನ ವನ್ನು ಹೊಂದಲು ಸೆಣಸಾಡುತ್ತಿರುವ ನೂಕುನುಗ್ಗಲು ಫಲಕಗಳಾಗಿವೆ. ಆದುದರಿಂದ ಉಭಯ ಫಲಕಗಳಲ್ಲೂ ಶಿಲಾಮಡಿಕೆ ಮತ್ತು ಸ್ತರಭಂಗಗಳು ಸರ್ವೆಸಾಮಾನ್ಯ. ಈ ಕಾರಣದಿಂದಾಗಿ ಹಿಮಾಲಯ ಪರ್ವತ ಪ್ರದೇಶವು ಭೂಕಂಪಗಳ ಆವಾಸಸ್ಥಾನ. ಹಿಮಾಲಯದ ಉಗಮ ಕಾಲದ ಘಟನಾವಳಿ ಯಿಂದ ಆ ಪರ್ವತವು ಎಷ್ಟು ಎತ್ತರವಿದಿಯೋ ಅಷ್ಟೇ ದುರ್ಬಲವಾಗಿದೆ ಎಂದು ವ್ಯಕ್ತವಾಗುತ್ತದೆ. ಭರತಖಂಡದಲ್ಲಿ ಸಂಭವಿಸುವ ಶೇಕಡ ೯೫ರಷ್ಟು ಭೂಕಂಪ ಗಳೆಲ್ಲವೂ ಈ ವಲಯಕ್ಕೆ ಸೀಮಿತವಾಗಿವೆ. (ವಾಲ್ಡಿಯೂ, ೧೯೭೩, ೧೯೯೩, ಗ್ಯಾನ್ಸೆರ್ ೧೯೭೭, ಉಮೇಶ್ ಚಂದ್ರ ೧೯೭೮, ೯೨, ನಕಾತ, ೧೯೮೨, ೮೯).

ಹಿಮಾಲಯ ಸೀಮಾ ಸ್ತರಭಂಗವು, ಅದರ ಕಂದಕದಲ್ಲೆ ಸಾಗುತ್ತದೆ. ಹಿಮಾಲಯದಲ್ಲಿ ಹುಟ್ಟಿ ಹರಿಯುವ ಜೀವನದಿಗಳಾದ ಸಿಂಧು, ಗಂಗಾ, ಯಮುನಾ ಮತ್ತು ಬ್ರಹ್ಮಪುತ್ರ ಹಾಗೂ ಆ ನದಿಗಳ ನೂರಾರು ಉಪನದಿ ಗಳು ತಮ್ಮೊಡನೆ ಸಾಗಿಸಿ ತಂದ ಮರಳು ಮೆಕ್ಕಲು ಮಣ್ಣನ್ನು ಕಂದಕಕ್ಕೆ ತುಂಬುತ್ತಲೇ ಇವೆ. (ಶಿವಾಲಿಕ್ ಶಿಲಾಸ್ತೋಮಗಳು); ಹಾಗೆಯೆ ಮೆಕ್ಕಲು ಮಣ್ಣನ್ನು ಹರಡಿ, ಸಿಂಧು–ಗಂಗಾ ನದಿ ಬಯಲು ಪ್ರದೇಶವಾಯಿತು. ಈ ಪ್ರದೇಶವು, ನದಿಗಳು ಭರಿಸಿದ ಮೆಕ್ಕಲಿನಿಂದಾಗಿರುವುದರಿಂದ, ಅಲ್ಲದೆ ಮುಖ್ಯ ಸೀಮಾ ಸ್ತರಭಂಗಕ್ಕೆ ಲಂಬವಾಗಿ ಹಲವಾರು ಸ್ತರಭಂಗಗಳೂ, ಉಬ್ಬುಗಳು, ತಗ್ಗುಗಳೂ ಈ ಬಯಲಿನ ಆಳದಲ್ಲಿ ಹುದುಗಿವೆ. ಆದುದರಿಂದ ಹಿಮಾಲಯ ಪ್ರದೇಶದಂತೆಯೆ ಇದೂ ಸಹ ದುರ್ಬಲ ವಲಯ. ಸಿಂಧು–ಗಂಗಾ ನದಿಯ ಮೆಕ್ಕಲು ಮಣ್ಣಿನ ಸಂಘಟಿತ ಮಂದತೆಯು ೧೭ ರಿಂದ ೧೮ ಸಾವಿರ ಅಡಿಗಳು. ಆದುದರಿಂದ ಈ ಬಯಲಿನಲ್ಲಿ, ದಕ್ಷಿಣ ಭಾರತದಲ್ಲಿ ದೊರೆಯುವಂತಹ ಶಿಲೆ ಯನ್ನು ಪಡೆಯ ಬೇಕಾದರೆ, ಮೆಕ್ಕಲು ಮಣ್ಣಿನ ಮೇಲ್ಮೈಯಿಂದ ಸಾವಿರಾರು ಅಡಿ ಆಳ ಅಗೆಯ ಬೇಕಾಗುತ್ತದೆ.

ಮೇಲೆ ವಿವರಿಸಿದ ವಲಯಗಳಲ್ಲಿ (೧ ಮತ್ತು ೨) ಸಂಭವಿಸಿದ, ಐತಿಹಾಸಿಕ ಭೂಕಂಪಗಳನ್ನು ಕುರಿತು, ವಿವರಣಾತ್ಮಕ ಹಾಗೂ ವಿಮರ್ಶಾತ್ಮಕ ಪ್ರಬಂಧ

ವನ್ನು ಓಲ್ಡ್‌ಹ್ಯಾಂ (೧೮೮೩, ೧೮೯೯)ರವರು ಪ್ರಕಟಿಸಿದ್ದಾರೆ. ಅವರ ಈ ಗ್ರಂಥವು ಇಂದಿಗೂ ಭಾರತದ ಚರಿತ್ರಾರ್ಹ ಭೂಕಂಪಗಳನ್ನು ತಿಳಿಯಲು, ಅದರಲ್ಲೂ; ದೆಹಲಿಯ ೧೭೨೦; ಕಲ್ಕತ್ತ ೧೭೩೭; ಬಂಗಾಳ ಮತ್ತು ಅರ್ಕಾನ್ ಕರಾವಳಿ ೧೭೬೨; ಕಚ್ ೧೮೧೯; ಕಾಶ್ಮೀರ ೧೮೮೫; ಮತ್ತು ಅಸ್ಸಾಂ ೧೮೯೭ರ ಭೂಕಂಪಗಳ ಬಗ್ಗೆ ಆಧಾರಯುತ ಮತ್ತು ಸಂಶೋಧನಾತ್ಮಕ ಬರಹಗಳಾಗಿವೆ. ಹಿಮಾಲಯದ ಭೂಕಂಪಗಳನ್ನು ಕುರಿತಂತೆ, ಮಿಡ್ಲ್‌ಮಿಸ್, ಪೆಸ್ಕ ಮತ್ತು ವಾಡಿಯಾರವರು ಹಲವಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಭರತಖಂಡವು ಕರಾರುವಾಕ್ಕಾದ ಸಮತೋಲನವನ್ನು ಕಾಪಾಡಿಕೊಳ್ಳಬೇಕಾದರೆ ಪ್ರೊ. ವಾಡಿಯಾ (೧೯೫೯); ಅವರ ಪ್ರಕಾರ ನಮ್ಮ ದೇಶದ ಉದ್ದಗಲಕ್ಕೂ (ಎಲ್ಲಾ ಭಾಗಗಳು ಸೇರಿದಂತೆ) ೬೦೦ ಅಡಿ ದಪ್ಪದ ಮರಳಿನ ಭರ್ತಿ ಹಾಕಿಸಬೇಕಾಗುತ್ತದೆ ಎಂದು ಸೂಚಿಸಿದ್ದಾರೆ. ಅಂದರೆ, ಭರತಖಂಡವು ಸಾಂದ್ರತಾ ನ್ಯೂನತೆ (ಡಿಫೆಕ್ಟಿವ್ ಡೆನ್ಸಿಟಿ)ಯಿಂದ ಕೊರಗುತ್ತಿದೆ ಎಂಬುದನ್ನು ಚಿತ್ರಿಸಲು ಮೇಲಿನ (ಅ)ಸಾಧ್ಯತೆಯಿಂದ ಚಿತ್ರಿಸಿದ್ದಾರೆ.

ಹಿಮಾಲಯದ ಭೂ ವಿಜ್ಞಾನ ಕುರಿತಂತೆ ಹಲವಾರು ಉತ್ತಮ ಕೊಡುಗೆಗಳನ್ನು ಕೊಟ್ಟಿರುವ ಪ್ರೊ॥ ವಾಲ್ಡಿಯಾ ಅವರು ಪ್ರಸಂಶನೀಯ ಕಾರ್ಯವನ್ನು ಇಂದಿಗೂ ಮಾಡುತ್ತಿದ್ದಾರೆ. ಅವರ ೧೯೭೧ ಮತ್ತು ೧೯೭೬ರ ಪ್ರಬಂಧಗಳಲ್ಲಿ ಹಿಮಾಲಯ ಪ್ರದೇಶವು ಎಷ್ಟೊಂದು ಒತ್ತಡದಲ್ಲಿದೆ ಎಂಬುದನ್ನು ಚಿತ್ರಿಸಿದ್ದಾರೆ. ಪ್ರೊ॥ ವಾಲ್ಡಿಯಾ ಅವರು ಈ ವರ್ಷದ (೧೯೮೩), ಅಕ್ಟೋಬರ್ ತಿಂಗಳಿನಲ್ಲಿ ಒಂದು ಮಹತ್ತರವಾದ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದಾರೆ; ಅದು "ಹಿಮಾಲಯದ ಪ್ರಬಲ–ಚಲನಾ ಭೂಕಂಪಗಳು—ಭೂವೈಜ್ಞಾನಿಕ ವಿಶ್ಲೇಷಣೆ" ಎಂಬ ಶೀರ್ಷಿಕೆಯಲ್ಲಿ. ಸಿಂಧೂ–ಗಂಗಾ ಮೆಕ್ಕಲು ಮಣ್ಣಿನ ಪ್ರದೇಶದ ಅಂತರಾಳದಲ್ಲಿ ಹಲವಾರು ಉಬ್ಬು ತಗ್ಗುಗಳಿವೆ ಎಂದೂ, ಅಡಿಪಾಯ ಶಿಲೆಗಳಲ್ಲಿ ಸ್ತರಭಂಗಗಳು ಬಹು ಸಂಖ್ಯೆಯಲ್ಲಿದ್ದು ಅವು ಗುಂಪಾಗಿ ಒತ್ತೊತ್ತಾಗಿವೆ. ಆದುದರಿಂದ ಅವುಗಳಿಂದ ಹೊರಹೊಮ್ಮುವ ಶಕ್ತಿಯು ಅಪಾರವಾಗಿದ್ದು, ಅಭಿಮುಖ ಒತ್ತಡವೂ ಸೇರಿಕೊಂಡು ಸ್ತರಭಂಗಗಳು ಹರಿದು ಹೋಗುವ ಇಲ್ಲವೆ ಸೀಳು ಸರಿಯುವುದರಿಂದ (ಟಿಯರ್ ಫಾಲ್ಟ್) ಭೂಕಂಪ ಸಂಭವಿಸುತ್ತದೆ. ಒತ್ತಡ, ಅಮುಕುವಿಕೆ ಮತ್ತು ತಿವಿತ (ಪ್ರೆಸ್/ಪಾಷ್)ಗಳಿಂದ ಭೂಕಂಪಗಳು ಮೇಲಿಂದ ಮೇಲೆ ಸಂಭವಿಸುತ್ತಲೇ ಇರುತ್ತವೆ ಎಂದು ವಿವರಿಸಿರುತ್ತಾರೆ. ಹಿಮಾಲಯದಲ್ಲಿ ಒಟ್ಟು ೧೮ ಭೂಕಂಪನ ಮಾಪನ ಯಂತ್ರಗಳಿವೆ.

೩. ಪರ್ಯಾಯ ದ್ವೀಪ ಪ್ರದೇಶ

ಭರತ ಖಂಡಕ್ಕೆ ಇಂದಿನ ಭೌಗೋಳಿಕ ರೂಪುರೇಷೆಯು (ಈಗಿನ ನಕ್ಷೆ) ಮೂಡಿದ್ದು ಸುಮಾರು ಆರು ಕೋಟಿ ವರ್ಷಗಳಷ್ಟು ಹಿಂದೆ. ಅದಕ್ಕೂ ಮುಂಚೆ ಈ ಪರ್ಯಾಯದ್ವೀಪ ಆಫ್ರಿಕಾ ಖಂಡದ ಮಡಗಾಸ್ಕರ್ ದ್ವೀಪಕ್ಕೆ ಅಂಟಿಕೊಂಡಂತೆ ಇತ್ತು. ಬೇರ್ಪಟ್ಟ ಈ ಖಂಡದ ತುಣುಕು (ಪ್ಲೇಟ್) ನಿಧಾನವಾಗಿ ತೆಪ್ಪದಂತೆ ಚಲಿಸುತ್ತಾ ಟಿಬೆಟ್ ಪ್ರಸ್ಥಭೂಮಿಗೆ ಢಿಕ್ಕಿ ಹೊಡೆಯಿತು, ಆಗ ಹಿಮಾಲಯದ ಉದ್ಭವವಾಯಿತು. ಪರ್ಯಾಯ ದ್ವೀಪದ ತುಣುಕು ಸಾಗುತ್ತಿರುವಾಗಲೇ ಮಡಗಾಸ್ಕರ್ ದ್ವೀಪಕ್ಕೆ ಪೂರ್ವೋತ್ತರಕ್ಕಿರುವ ರಿಯೂನಿಯನ್ ಆಗ್ನಿಪರ್ವತದ ಹೆಚ್ಚು ಶಾಖ ಸ್ಥಳ (ಹಾಟ್‌ಸ್ಪಾಟ್)ದ ಮೇಲೆ—ಈ ಫಲಕವು (ತೆಪ್ಪವು) ಹಾದು ಹೋಗುವಾಗ ಪರ್ಯಾಯದ್ವೀಪದಲ್ಲಿ ಆಳವಾದ ಸೀಳಿಕೆಗಳುಂಟಾಗಿ, ಅವುಗಳ ಮುಖಾಂತರ ಭೂಮಿಯ ಆಳದಲ್ಲಿದ್ದ ಶಿಲಾಪಾಕವು ಹೊರಬಂದು ಲಾವಾ ಪ್ರವಾಹದಂತೆ ಹರಿದು ಘನೀಕರಿಸಿದವು. ಈ ಶಿಲೆಗಳನ್ನೆ ಬೆಸಾಲ್ಟ್ ಎನ್ನುವುದು. ಭೂತೊಗಟೆಯು ತೆಳುವಾದಾಗಲೂ, ಭೂ ಅಂತರಾಳದಿಂದ ಬೆಸಾಲ್ಟ್ ಲಾವಾಪ್ರವಾಹಬಂದು ಮೇಲ್ಮೈಯಲ್ಲಿ ಘನೀಕರಿಸಿ ಸಮತೋಲನವನ್ನು ಸರಿದೂಗಿಸುತ್ತದೆ. ಈ ತೆರನಾಗಿ ಬಂದ ಲಾವಾರಸ ಪ್ರವಾಹಗಳು ೫೦ಕ್ಕೂ ಮೀರಿದ ಸಂಖ್ಯೆಯಲ್ಲಿ ಪರ್ಯಾಯ ದ್ವೀಪದ ಅರ್ಧಭಾಗವನ್ನು ಆಕ್ರಮಿಸಿದವು. ಆರು ಕೋಟಿ ವರ್ಷಗಳ ಹಿಂದೆ ಲಾವಾಪ್ರವಾಹಗಳು ಒಂದಾದಮೇಲೊಂದರಂತೆ ಹಲವಾರು ಅಗ್ನಿಪರ್ವತಗಳಿಂದ ಹೊರಹರಿಯಲು ಪ್ರಾರಂಭಿಸಿದವು. ಆ ಅಗ್ನಿಪರ್ವತಗಳು ಸೀಳು ಅಗ್ನಿಪರ್ವತ ಮಾದರಿಯವಾಗಿದ್ದವು. ದಖ್ಖನ್ ಬೆಸಾಲ್ಟ್‌ನ (ದಖ್ಖನ್‌ಟ್ರ್ಯಾಪ್) ಒಟ್ಟು ವಿಸ್ತೀರ್ಣ ೫೦೦,೦೦೦ ಚದರ ಕಿ.ಮೀ.ಗಳು. ಈ ಶಿಲೆಗಳನ್ನು ಪರ್ಯಾಯ ದ್ವೀಪದ ಬಹುತೇಕ ಸ್ಥಳಗಳಲ್ಲಿ ಕಾಣುವೆವು—ಮುಂಬೈ, ಕಚ್, ಸಾಗರ್, ಜಬ್ಬಲ್‌ಪುರ, ನಾಗಪುರ, ರಾಜಮಹೇಂದ್ರಿ, ಹೈದರಾಬಾದ್ ಹಾಗೂ ಕರ್ನಾಟಕದ ಉತ್ತರದ ಜಿಲ್ಲೆಗಳಾದ ಬೆಳಗಾಂ, ಬಿಜಾಪುರ, ಗುಲ್ಬರ್ಗ ಮತ್ತು ಬೀದರ್‌ಗಳಲ್ಲೂ ಬೆಸಾಲ್ಟ್ ಶಿಲೆಗಳಿವೆ. ನರ್ಮದಾ ಮತ್ತು ತಪತಿ ನದಿಗಳು, ಬೆಸಾಲ್ಟ್ ಪ್ರಾಂತ್ಯದಲ್ಲಿ ಸ್ತರಭಂಗಗಳಿರುವ ಸ್ಥಳದಲ್ಲಿ ಹರಿಯುತ್ತಲಿವೆ. ಇತ್ತೀಚೆಗೆ ಸಂಭವಿಸಿದ ಭೂಕಂಪ ಪ್ರದೇಶಗಳಾದ ಲಾತೂರ್-ಖಿಲ್ಲಾರಿ ಮತ್ತು ಉತ್ತರ ಕರ್ನಾಟಕದ ಕೆಲವು ಸ್ಥಳಗಳಲ್ಲಿ ಮೇಲೆ ಹೇಳಿದ ದಖ್ಖನ್ ಬೆಸಾಲ್ಟ್ ಶಿಲೆಗಳಿವೆ. ಪರ್ಯಾಯದ್ವೀಪವು ಭೂಕಂಪ ರಹಿತ, ಸುರಕ್ಷಿತ ಎಂಬ ನಂಬಿಕೆಯನ್ನು ಸೆಪ್ಟೆಂಬರ್ ೩೦ರ ಭೂಕಂಪಗಳು ಸುಳ್ಳಾಗಿಸಿವೆ.

ಲಾತೂರ್-ಖಿಲ್ಲಾರಿ ಮತ್ತು ಕರ್ನಾಟಕದಲ್ಲಾದ ಭೂಕಂಪಗಳ ವೈಜ್ಞಾನಿಕ ಒಳನೋಟ

ಈಗಾಗಲೇ ವಿವರಿಸಿರುವಂತೆ, ಭೂಕಂಪದ ಹಾನಿಗೊಳಗಾದ ಈ ಮೂರು ಪ್ರದೇಶಗಳೂ ಸುರಕ್ಷಿತವೆಂದು ನಂಬಿದ್ದ ಪರ್ಯಾಯ ದ್ವೀಪದ, ದಖ್ಖನ್ ಬೆಸಾಲ್ಟ್ ಪ್ರದೇಶದಲ್ಲಿ ಇವೆ. ಆದುದರಿಂದ ಈ ಸ್ಥಳಗಳಲ್ಲಿ ಭೂಕಂಪವಾದುದೇಕೆ? ಹೇಗೆ? ಮತ್ತು ಆ ದುರಂತವನ್ನು ತಪ್ಪಿಸಬಹುದಿತ್ತೆ ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕಲು ಪ್ರಯತ್ನಿಸೋಣ.

ಲಾತೂರ್-ಖಿಲ್ಲಾರಿ ಭೂಕಂಪಗಳು :

ಸೆಪ್ಟೆಂಬರ್ ೩೦ರ ಬೆಳಗಿನ ಜಾವ ೩ ಗಂಟೆ ೫೬ ನಿಮಿಷಕ್ಕೆ ದಿಢೀರನೆ ಸಂಭವಿಸಿದ ಉಗ್ರಭೂಕಂಪದಿಂದ, ಸುಮಾರು ೧೦,೦೦೦ ಜನರು ಸಜೀವ ಸಮಾಧಿಯಾದರು ಹಾಗೂ ೧೬ ಸಾವಿರ ಜನರು ತೀವ್ರ ಗಾಯಗೊಂಡರು, ಅಲ್ಲದೆ ೧೯ ಸಾವಿರ ಮನೆಗಳು ಸಂಪೂರ್ಣ ನಾಶವಾದವು. ೧೯೯೩ರ ಸೆಪ್ಟೆಂಬರ್ ೩೦ ನಮ್ಮೆಲ್ಲರಿಗೂ ಅತ್ಯಂತ ದಾರುಣ ಮತ್ತು ದುರಂತದ ಕರಾಳ ದಿನ. ಭೂಕಂಪದ ನಂತರ ಅಳಿದುಳಿದವರು ಅಶ್ರುತರ್ಪಣ ನೀಡಲೂ ಶಕ್ತರಾಗಿರಲಿಲ್ಲ, ಸರ್ವಸ್ವವನ್ನೂ ಕಳೆದುಕೊಂಡು ಕಣ್ಣೀರಿಡಲೂ ಕಂಬನಿಯೇ ಬತ್ತಿಹೋಗಿತ್ತು.

ಲಾತೂರ್, ಖಿಲ್ಲಾರಿ ಮತ್ತು ಉಸ್ಮಾನಬಾಡ್‌ಗಳು ಹಿಂದೊಮ್ಮೆ ಅಂದರೆ ಭೂಕಂಪಕ್ಕೆ ಮುಂಚೆ ಹಲವು ಕೈಗಾರಿಕೆಗಳ, ವ್ಯಾಪಾರ, ವಾಣಿಜ್ಯ ವಹಿವಾಟು ಗಳ ಚಟುವಟಿಕೆಯ ಕೇಂದ್ರಗಳಾಗಿದ್ದುವು. ಅಲ್ಲಿನ ಎರೆಮಣ್ಣಿನ (ಕಪ್ಪು ಮಣ್ಣು) ಭೂಮಿಯಲ್ಲಿ ದ್ರಾಕ್ಷಿ ತೋಟಗಳು, ಸೂರ್ಯಕಾಂತಿ, ಕಬ್ಬಿನ ಗದ್ದೆಗಳು ಹೀಗೆ ಹಸಿರು ಹಸಿರಾಗಿ ಕಂಗೊಳಿಸುತ್ತಿದ್ದ ಆ ಊರು–ಸೆಪ್ಟೆಂಬರ್ ೩೦ರ ಬೆಳಗಿನ ಜಾವ ಬರಸಿಡಿಲಿನಂತೆ ಬಡಿದ ಭೂಕಂಪದಿಂದ ಸರ್ವನಾಶವಾಯಿತು. ಆ ಪ್ರದೇಶದ ೬೬ ಗ್ರಾಮಗಳಲ್ಲಿ ಭೀಕರ ಸಾವು ನೋವುಗಳ ದುರಂತ ಕೆಲವೇ ಸೆಕೆಂಡುಗಳಲ್ಲಿ ನಡೆದುಹೋಯಿತು. ಊರಿಗೆ ಊರೇ ಸ್ಮಶಾನವಾಯಿತು.

ಕೆಲವು ಮರುಕಂಪನಗಳಾದ ನಂತರ ಅಲ್ಲಿಯ ಜನರು, ಸರ್ಕಾರವು ಒದಗಿಸಿದ ತುರ್ತು ಪರಿಹಾರಕಾರ್ಯ, ಚಿಕಿತ್ಸೆ ಮತ್ತು ಇಡೀ ವಿಶ್ವವೇ ಸಹಾಯ ಹಸ್ತ ನೀಡಿದ್ದರಿಂದ ಸಾಂತ್ವನಗೊಂಡಿದ್ದರು. ಆದರೆ ಮತ್ತೆ ಮರುಕಳಿಸಿದ ಮರು ಕಂಪನ-ನವೆಂಬರ್ (೧೨, ೨೬ ಮತ್ತು ೮-೧೨-೯೩ ರಂದು) ಅವರಿಗೆ

ದಿಗ್ಭ್ರಮೆ ಉಂಟುಮಾಡಿತು. ವಾಸಿಯಾಗುತ್ತಿದ್ದ ಗಾಯದ ಮೇಲೆ ಮತ್ತೊಂದು ಬರೆ ಹಾಕಿದಂತಾಯಿತು.

ಈ ಪ್ರದೇಶದ ಗುರುತ್ವಾಕರ್ಷಣ ಸರ್ವೇಕ್ಷಣೆಯನ್ನು ೧೯೭೫ ರಂದು ನಡೆಸಿದ, ಡಾ|| ಕೃಷ್ಣಬ್ರಹ್ಮ ಮತ್ತು ಡಾ|| ನೇಗಿಯವರು, ಆ ಸ್ಥಳದಲ್ಲಿ ಎರಡು ಸ್ತರಭಂಗಗಳನ್ನು ಗುರುತಿಸಿದ್ದರು. ಅವುಗಳನ್ನು ಕೋಯ್ನಾ ಮತ್ತು ಕುರ್ಡುವಾಡಿ 'ಭೂ ಅಂತರಾಳ ಕಮರಿ' ಗಳೆಂದು ಹೆಸರಿಸಿದ್ದರು. ಅವರ ಸಂಶೋಧನಾ ಪತ್ರಿಕೆಯಲ್ಲಿ ಭೂಕಂಪವಾಗುವ ಸೂಚನೆಯನ್ನು ಕೊಟ್ಟಿದ್ದರು! ಅನಂತರ ೧೯೮೧ ರಲ್ಲಿ ಡಾ. ಖುರೇಶಿಯವರು, ಆ ಪ್ರದೇಶದ ದಖ್ಖನ್‌ಟ್ರಾಪ್ ಗಳ ಕೆಳಗೆ ಬಹು ಆಳದಲ್ಲಿ ಸ್ತರಭಂಗಗಳು ಅಥವಾ ಸೂಕ್ಷ್ಮ ರೇಖಾವಿನ್ಯಾಸ ಗಳಿರುವುದನ್ನು ವಿಹಂಗಮ ಛಾಯಾಚಿತ್ರ (ಏರಿಯಲ್ ಫೋಟೊಗ್ರಾಫ್) ಗಳ ಸಹಾಯದಿಂದ ಖಚಿತಪಡಿಸಿದ್ದರು. ಹೋದ ವರುಷ, ೧೯೯೨ ರಲ್ಲಿ ನಾಗಪುರದ ಭೂ ವಿಜ್ಞಾನ ಮತ್ತು ಗಣಿ ನಿರ್ದೇಶನಾಲಯದ ತಂಡವು ಮೇಲೆ ಹೇಳಿದ ಸ್ಥಳ ಪರೀಕ್ಷೆ ಮತ್ತು ಸರ್ವೇಕ್ಷಣೆಯನ್ನು ನಡೆಸಿ, ವರದಿಯನ್ನು ಮಹಾರಾಷ್ಟ್ರ ಸರ್ಕಾರಕ್ಕೆ ಒಪ್ಪಿಸಿತ್ತು. ಆ ವರದಿಯ ಮುಖ್ಯಾಂಶಗಳು ಈ ರೀತಿ ಇವೆ: ದಖ್ಖನ್‌ಟ್ರ್ಯಾಪ್ ಶಿಲಾ ಸಮುದಾಯವಿರುವ ಈ ಪ್ರದೇಶಗಳಲ್ಲಿ (ಕರ್ನಾಟಕವೂ ಸೇರಿದಂತೆ) ಹಲವು ನದಿ ನದಾಳಿಗಳು ಹರಿಯುತ್ತಿವೆ. ಅವುಗಳ ಕಣಿವೆಗಳಲ್ಲಿರುವ ಕಪ್ಪು ಮಣ್ಣಿನ ಮಂದವು ೧೦೦ ಅಡಿಗೂ ಮೀರಿದೆ. ಆದುದರಿಂದ ಈ ಪ್ರದೇಶಗಳು ಅಸ್ಥಿರವಾದುವು. ಲಾತೂರು ಮತ್ತು ಜಿಲ್ಲಾರಿಗೆ ಸಮೀಪ ಹರಿಯುತ್ತಿರುವ ತೇರ್ನಾ ನದಿಯು ಇಬ್ಬದಿಗಳಲ್ಲೂ ೩೦೦ ಅಡಿಗೂ ಮೀರಿದ ಆಳವಾದ ಸುಮಾರು ೪೦ ಕೊಳವೆ ಬಾವಿಗಳಿವೆ. ಈ ಬಾವಿಗಳಿಂದ ಸುಮಾರು ೧೦ ವರ್ಷಗಳಿಂದೀಚೆಗೆ, ಗೊತ್ತುಗುರಿಯಿಲ್ಲದೆ ಹೆಚ್ಚು ಹೆಚ್ಚು ಅಂತರ್ಜಲವನ್ನು ಕಳೆದ ವರ್ಷವೇ ನೀರಾವರಿಗಾಗಿ ಮೇಲೆತ್ತಿದ್ದಾರೆ; ಅದರಿಂದ ನಿರ್ಯಾತಉಂಟಾಗಿ ಶಿಲೆಗಳ ತಳಕುಸಿತವು ೧೯೯೧ ಹಾಗೂ ೯೨ರ ಲಘುಕಂಪನ ಗಳಿಗೆ ಕಾರಣವಾಯಿತು. ಜಿಲ್ಲಾರಿಗೆ ೧೦ ಕಿ.ಮೀ. ದೂರದಲ್ಲಿರುವ ಮಕಾನಿ ಅಣೆಕಟ್ಟಿನ ಸರ್ವೇಕ್ಷಣೆಯನ್ನು ಇದೇ ತಂಡವು ನಡೆಸಿತ್ತು, ಆ ಅಣೆಕಟ್ಟಿಗೆ ಅದೃಷ್ಟವಶಾತ್ ಆ ಭೂಕಂಪದಿಂದ ಯಾವ ಹಾನಿಯೂ ಆಗಿಲ್ಲವೆಂದು ನಾಗಪುರ ಭೂ ವಿಜ್ಞಾನಿ ತಂಡವು ೧೯೯೧ರಲ್ಲಿ ವರದಿ ಮಾಡಿತ್ತು.

ಈ ಪ್ರದೇಶದ ದಖ್ಖನ್‌ಟ್ರ್ಯಾಪ್ ಶಿಲಾ ಪದರಗಳ ನಡುವೆ, ಬೆಸಾಲ್ಟ್ ಶಿಥಿಲ ಗೊಂಡಿದ್ದರಿಂದಾದ ಕೆಂಪು ಬಣ್ಣದ ಜೇಡಿಮಣ್ಣು (ರೆಡ್ ಬೋಲ್) ಭೂಕಂಪಕ್ಕೆ

ವೇಗವರ್ಧಿನಿಯಂತೆ ಸಹಕಾರಿಯಾದುದನ್ನು ಗುರುತಿಸಿದ್ದಾರೆ. ಆ ಕೆಂಪು ಜೇಡಿಯ ವಿಶಿಷ್ಟ ಗುಣವೆಂದರೆ, ಅದು ನೀರನ್ನು ಹೀರಿಕೊಂಡಾಗ ಇಲ್ಲವೆ ಅದು ತೇವಾಂಶವನ್ನು ಕಳೆದುಕೊಂಡು ಒಣಗಿದಾಗಲೂ ಉಬ್ಬಿಕೊಳ್ಳುವುದರಿಂದ, ಮೇಲ್ಪದರಗಳಲ್ಲಿ ಬಿರುಕುಗಳುಂಟಾಗಿ ಭೂಮೇಲ್ಮೈ ವಾಲಿಕೊಳ್ಳುವುದು. ಇಂತಹ ವೈಶಿಷ್ಟ್ಯತೆಯೂ ಭೂಕಂಪಕ್ಕೆ ಪ್ರಬಲಕಾರಣವಾಯಿತು. ಆದರೂ, ಸರ್ಕಾರವು ಅಲ್ಲಿಯ ಜನರನ್ನು ಸುರಕ್ಷಿತ ಸ್ಥಳಕ್ಕೆ, ಸ್ಥಳಾಂತರಿಸದೆ, ಸಾವಿನ ನೆರಳಿನಲ್ಲೇ ಬದುಕುವಂತೆ ಮಾಡಿತು.

ಪ್ರೊ. ರಾಜಗುರು ಮತ್ತು ಬಾಡಾಮ್ ಅವರು ೧೯೮೮ ರಲ್ಲಿ ಈ ಪ್ರದೇಶದಿಂದ ಹಳೆಯ ಮೆಕ್ಕಲು ನಿಕ್ಷೇಪ ಮತ್ತು ಶಿಲಾಪೆಂಟೆಗಳು ಇರುವಿಕೆಯು, ಭೂರಚನಾ ವಿನ್ಯಾಸವೂ ಪುನರುಜ್ಜೀವನಗೊಂಡಿರುವುದಕ್ಕೆ ಸಾಕ್ಷಿ ಎಂಬುದನ್ನು ಪ್ರಕಟಿಸಿದ್ದರು.

ಮೇಲಿನ ವರದಿಗಳೇ ಅಲ್ಲದೆ ಲಾತೂರ್–ಖಿಲ್ಲಾರಿಗಳಲ್ಲಿ ೧೯೬೨, ೬೭ ಮತ್ತು ೮೩–೮೪ ರಲ್ಲಿ ಹಲವಾರು ಲಘು ಭೂಕಂಪಗಳು ಸಂಭವಿಸುತ್ತಲೇ ಇದ್ದುವು. ಆದುದರಿಂದ ಭೂವಿಜ್ಞಾನಿಗಳ ವರದಿಯನ್ನು ಅನುಸರಿಸಿ ಮುನ್ನೆಚ್ಚರಿಕೆಯ ಕ್ರಮಗಳನ್ನು ೧೯೯೨ರ ಲಘು ಭೂಕಂಪದ ನಂತರವಾದರೂ ಅಲ್ಲಿಯ ಜನರನ್ನು ಸುರಕ್ಷಿತ ಸ್ಥಳಗಳಿಗೆ ವರ್ಗಾಯಿಸಿದ್ದರೆ, ೧೯೯೩ ರ ಸೆಪ್ಟೆಂಬರ್ ೩೦ ರಂದು ಸಂಭವಿಸಿದ ಭೂಕಂಪದಿಂದಾದ ಸಾವು ನೋವುಗಳು ಇಲ್ಲನಂತೆ ಅಥವಾ ಸಾವಿನ ಸಂಖ್ಯೆಯನ್ನಾದರೂ ಕಡಿಮೆ ಮಾಡಬಹುದಿತ್ತು.

ಲಾತೂರ್–ಖಿಲ್ಲಾರಿ–ಉಸ್ಮಾನಬಾದ್‌ಗಳಲ್ಲಾದ ಭೂಕಂಪಕ್ಕೆ ಈ ಕೆಳಕಂಡ ಕಾರಣಗಳನ್ನು ಪಟ್ಟಿ ಮಾಡಬಹುದಾಗಿದೆ.

೧) ಸುಮಾರು ಎರಡು ವರ್ಷಗಳ ಹಿಂದಿನಿಂದಲೂ ಸೆಪ್ಟೆಂಬರ್ ೩೦ರವರೆಗೆ ಈ ಪ್ರದೇಶಗಳು ಸಹಸ್ರಾರು ಸಲ ಕಂಪಿಸುತ್ತಲೇ ಇದ್ದವು.

೨) ಈ ಪ್ರದೇಶಗಳ ಭೂ ಇತಿಹಾಸವನ್ನು ಅವಲೋಕಿಸಿದಾಗ, ಮುಖ್ಯವಾಗಿ ಮೂರು ಯುಗಗಳಿಗೆ ಸೇರಿದ ಶಿಲಾವರ್ಗಗಳ ಇರುವಿಕೆಯನ್ನು ಗಮನಿಸಬಹುದಾಗಿದೆ.

೩) ತಳದಿಂದ ಮೇಲಕ್ಕೆ ಇರುವ ಶಿಲಾ ಪೇರಿಕೆಯು ಈ ರೀತಿ ಇದೆ. ಅತ್ಯಂತ ಆಳದಲ್ಲಿರುವ (೧೫ ರಿಂದ ೨೦ ಕಿ.ಮೀ. ಆಳದಲ್ಲಿ) ಗ್ರಾನೈಟ್ ಮತ್ತು ನೈಸ್ ಶಿಲೆಗಳೇ ಅಡಿಪಾಯ

ಶಿಲೆಗಳು. ಇವುಗಳ ವಯಸ್ಸು ೩೦೦ ರಿಂದ ೩೪೦ ಕೋಟಿ ವರ್ಷಗಳು.

ಆ) ಇಂತಹ ಅಡಿಪಾಯ ಶಿಲೆಗಳ ಮೇಲೆ, ಕಲಾದಗಿ, ಭೀಮ ಮತ್ತು ವಿಂಧ್ಯನ್ ಸಮುದಾಯಕ್ಕೆ ಸೇರಿದ ಸುಣ್ಣ ಮತ್ತು ಜೇಡಿ ಶಿಲೆಗಳಿವೆ. ಇವುಗಳ ವಯಸ್ಸು ೧೫೦ ಕೋಟಿ ವರ್ಷಗಳು.

ಇ) ಭೀಮ ಮತ್ತು ವಿಂಧ್ಯನ್ ಶಿಲೆಗಳ ಮೇಲೆ, ಅಗ್ನಿ ಶಿಲೆಗಳಾದ ದಖ್ಖನ್‌ಟ್ರ್ಯಾಪ್ ಶಿಲೆಗಳಿವೆ. ಈ ಶಿಲೆಗಳ ವಯಸ್ಸು ೧೧ ಕೋಟಿಯಿಂದ ೬ ಕೋಟಿ ವರ್ಷಗಳು.

ಮೇಲೆ ವಿವರಿಸಿದ ಮೂರು ಶಿಲಾ ಪೇರಿಕೆಗಳಲ್ಲಿ ಅ) ಶಿಲೆಗಳು ಅತ್ಯಂತ ಕಠಿಣವಾದವು ಹಾಗೂ ಅವುಗಳಲ್ಲಿ ಸ್ತರಭಂಗ, ಸೀಳಿಕೆಗಳು ಇಲ್ಲವೆ ಛಿದ್ರತೆಯೂ ವಿರಳವಾಗಿರುತ್ತವೆ. ಇವು ಕರ್ನಾಟಕದ ದಕ್ಷಿಣ ಭಾಗದಲ್ಲಿರುವಂತಹ ಅಗ್ನಿ ಶಿಲೆಗಳು (ಧಾರವಾಡ ಶಿಲೆಗಳು). ಇವುಗಳ ಮೇಲೆ ಇರುವ ಆ) ಶಿಲೆಗಳಾದ ಕಲಾದಗಿ, ಭೀಮ ಮತ್ತು ವಿಂಧ್ಯನ್ ವರ್ಗದ ಶಿಲೆಗಳು. ಜಲಜ ಶಿಲೆಗಳಾದುದರಿಂದ, ಅಷ್ಟೇನು ಕಠಿಣವಲ್ಲದ ಹಾಗೂ ಹೆಚ್ಚು ಸೀಳಿಕೆ, ಸ್ತರಭಂಗ ಇಲ್ಲವೆ ಗುಹೆಗುಹಾಂತರಗಳಿಂದ ಕೂಡಿದ ಸುಣ್ಣ ಮತ್ತು ಜೇಡಿ ಶಿಲೆಗಳಾಗಿವೆ. ಇಂತಹ ದುರ್ಬಲ ಶಿಲೆಗಳ ಮೇಲೆ ಕಠಿಣ ಹಾಗೂ ಭಾರವಾದ ದಖ್ಖನ್‌ಟ್ರ್ಯಾಪ್ (ಇ) ವರ್ಗದ ಮತ್ತು ಅಂತರ ಟ್ರ್ಯಾಪ್‌ಶಿಲೆಗಳಾದ ಕೆಂಪು ಜೇಡಿ, ಬಿಳಿಯ ಸುಣ್ಣಾಂಶಯುತ ಜೇಡಿ ಹಾಗೂ ಚೆರ್ಟ್ ಶಿಲೆಗಳಿವೆ. ಮೇಲೆ ಹೇಳಿದ ಮೂರು ವರ್ಗದ ಶಿಲೆಗಳಲ್ಲಿ ಆ) ವರ್ಗಕ್ಕೆ ಸೇರಿದ ಶಿಲೆಗಳು ಅತ್ಯಂತ ದುರ್ಬಲವಾದುವು. ಅಲ್ಲದೆ ಅದರ ಮೇಲಿರುವ ಇ) ವರ್ಗದ ಶಿಲೆಗಳ ಭಾರವನ್ನು ತಡೆದುಕೊಳ್ಳಲಾರವು. ಆದುದರಿಂದ ಈ ಪ್ರದೇಶದ ಶಿಲಾಪೇರಿಕೆಯಲ್ಲಿ ಕಂಡು ಬರುವ ಆ) ವರ್ಗದ ದುರ್ಬಲ ಶಿಲೆಗಳ ಕುಸಿತ, ಇಲ್ಲವೆ ಒತ್ತಡದ ಭಾರವನ್ನು ಹೊರಲಾಗದೆ ಪಕ್ಕಕ್ಕೆ ಹರಿವದು ಭೂಕಂಪವಾಗಲು ಮುಖ್ಯ ಕಾರಣವಾಯಿತು. ಇದೇ ತೆರನಾದ ಶಿಲಾಪೇರಿಕೆಯು ಕರ್ನಾಟಕದ ಉತ್ತರ ಭಾಗದ ಜಿಲ್ಲೆಗಳಲ್ಲೂ ಇರುವುದರಿಂದ ಭೂಕಂಪ ಸಂಭವಿಸಿತು. ಈ ವಿಷಯವನ್ನು ಕುರಿತು ಮುಂದಿನ ಪುಟಗಳಲ್ಲಿ ವಿವರಿಸಲಾಗುವುದು.

೩) ಈ ಪ್ರದೇಶದಲ್ಲಿರುವ ಕಟ್ಟಡಗಳಿಗೆ ಉಪಯೋಗಿಸಿರುವ ನಿರ್ಮಾಣ ಸಾಮಗ್ರಿಗಳು ಭೂಕಂಪನ ನಿರೋಧಕವಾಗಿಲ್ಲ; ಬದಲಾಗಿ ಕಂಪನಕ್ಕೆ ಓಗೊಟ್ಟು ಕುಸಿದುಬಿದ್ದ ಗಾರೆ, ಮಣ್ಣು, ಇಟ್ಟಿಗೆ ಹಾಗೂ ಸೈಜು ಕಲ್ಲುಗಳು ಅಪಾರ ಜೀವಹಾನಿಗೆ ಕಾರಣವಾಯಿತು. ಆದರೆ ಕಬ್ಬಿಣ ಮತ್ತು ಸಿಮೆಂಟ್ ಉಪಯೋಗಿಸಿ (ಆರ್.ಸಿ.ಸಿ.) ಕಟ್ಟಿದ್ದ ಮನೆಗಳಿಗೆ ಹೆಚ್ಚು ಹಾನಿಯಾಗಿಲ್ಲ.

೪) ಕಲ್ಲು ಮಣ್ಣಿನ ಗೋಡೆಗಳು, ತಗಡಿನ ಮೇಲು ಹಾಸುಗಳ ಮೇಲೆ ದಟ್ಟೈಸಿದ ಎರಡು ಅಥವಾ ಮೂರು ಅಡಿಗಳಷ್ಟು ಮಂದದ ಮಣ್ಣು, ಮೇಲ್ಛಾವಣಿಯು ತಟ್ಟನೆ ಕುಸಿಯಲು ಅನುವು ಮಾಡಿಕೊಟ್ಟಿತು.

೫) ಈಗ್ಗೆ ಒಂದು ದಶಕದಿಂದಲೂ ಈ ಪ್ರದೇಶಗಳಲ್ಲಿ, ಹೆಚ್ಚು ನೀರಾವರಿಗಾಗಿ ಅತ್ಯಧಿಕ ಕೊಳವೆ ಬಾವಿಗಳನ್ನು ಕೊರೆದು, ಭೂಅಂತರ್ಜಲವನ್ನು ಗೊತ್ತುಗುರಿಯಿಲ್ಲದೆ ಉಪಯೋಗಿಸಿ, ಬರಿದು ಮಾಡಿದ್ದು ಭೂಕಂಪಕ್ಕೆ ಒಂದು ಮುಖ್ಯ ಕಾರಣವಾಗಿ ಪರಿಣಮಿಸಿತು.

ಕರ್ನಾಟಕದ ಭೂಕಂಪಗಳು :

ದಕ್ಷಿಣ ಭಾರತದಲ್ಲಿ ಉನ್ನತವಾದ ಪ್ರಸ್ಥಭೂಮಿ ಎಂದರೆ ಕರ್ನಾಟಕ ಪೀಠಭೂಮಿ, ಇದರ ಪಶ್ಚಿಮದ ಅಂಚು, ಘಟ್ಟದಿಂದ ಆವರಿಸಿದೆ; ಮಧ್ಯೆ ಎತ್ತರವಿರುವ ಸಮತಟ್ಟಾದ ಭೂಮಿಯನ್ನು "ಮೈಸೂರು ಪೀಠಭೂಮಿ" ಎಂದು ಕರೆಯುತ್ತಾರೆ. ಈ ಪೀಠಭೂಮಿಯನ್ನು ನಾಲ್ಕು ಭೌಗೋಳಿಕ ಪ್ರದೇಶಗಳನ್ನಾಗಿ ವಿಂಗಡಿಸಬಹುದು : ೧) ಕರಾವಳಿಗೆ ಅಂಟಿಕೊಂಡಂತೆ ಸಮಾಂತರವಾಗಿರುವ ಕಿರಿದಾದ ಭೂಭಾಗ, ೨) ಪಶ್ಚಿಮ ಘಟ್ಟಗಳು, ೩) ಮಲೆನಾಡು ಪ್ರದೇಶ, ೪) ಒಳನಾಡಿನ ಮೈದಾನಪ್ರದೇಶ. ಹೀಗೆ ವಿಂಗಡಿಸಿರುವ ಪ್ರತಿಯೊಂದು ಪ್ರದೇಶದಲ್ಲೂ ವಾಯುಗುಣ, ಮಳೆ, ನೆಲ-ಜಲ, ಶಿಲೆ–ಮಣ್ಣು ಇತ್ಯಾದಿಗಳು ವಿವಿಧತೆಯಿಂದ ಕೂಡಿರುತ್ತವೆ.

ಕರ್ನಾಟಕದ ಭೂವೈಜ್ಞಾನಿಕ ನಕ್ಷೆಯು ಪ್ರಪಂಚದಲ್ಲಿ ಅದ್ವಿತೀಯವಾದುದು. ಕರ್ನಾಟಕದ ಉತ್ತರ ಭಾಗದಲ್ಲಿ ಲಾತೂರ್–ಖಿಲ್ಲಾರಿಗಳಲ್ಲಿರುವ ದಖ್ಖನ್ ಟ್ರಾಪ್ ಶಿಲೆಗಳೇ ಇವೆ. ಆದರೆ ದಕ್ಷಿಣ ಭಾಗಕ್ಕೆ ಬಂದಂತೆಲ್ಲಾ ಅತಿ ಪುರಾತನ ಶಿಲೆಗಳಿವೆ. ಆದುದರಿಂದ ಕರ್ನಾಟಕದ ದಕ್ಷಿಣ ಭಾಗವನ್ನು ಭೂಕಂಪ ರಹಿತ ಪ್ರದೇಶವೆಂದು ನಂಬಿದ್ದೆವು. ಆದರೆ ಇತ್ತೀಚೆಗೆ ಸಂಭವಿಸಿದ ಭೂಕಂಪ

ಗಳು "ಮೈಸೂರು ಪೀಠಭೂಮಿ"ಯು ಕಂಪನ ಪೀಡಿತ ಅಥವಾ ಅಸ್ಥಿರ ವಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಆದುದರಿಂದ ಪರ್ಯಾಯ ದ್ವೀಪದ ಮರುಸರ್ವೇಕ್ಷಣೆಯನ್ನು ಪ್ರಾರಂಭಿಸಬೇಕಾಗಿದೆ. ಡಾ॥ ಬಿ. ಪಿ. ರಾಧಾಕೃಷ್ಣ ಅವರು ತಮ್ಮ ೧೯೫೭ ಮತ್ತು ೧೯೬೩ರ ವೈಜ್ಞಾನಿಕ ಸಂಶೋಧನಾ ಪತ್ರಿಕೆಗಳಲ್ಲಿ ಮೈಸೂರು ಪೀಠಭೂಮಿಯನ್ನು ಕುರಿತಂತೆ ಇಲ್ಲಿಯ ನದಿಗಳ ವಿಲಕ್ಷಣ ಸಾಗುವಿಕೆ, ಜಲಪಾತಗಳು, ಸವೆತಗೊಂಡ ಸಮತಲ ಮೇಲ್ಮೈಗಳು (ಎರೋಷನ್ ಸರಫೇಸ್), ಹಾಗೂ ನದಿಗಳು ಹರಿಯುತ್ತಿದ್ದ ಸ್ಥಳಗಳ ಬದಲಾವಣೆ; ಇವೆಲ್ಲವೂ ತೃತೀಯ ಜೀವಕಲ್ಪದ ಭೂಕಾಲದಲ್ಲಿ (೬ ಕೋಟಿ ವರ್ಷಗಳಷ್ಟು ಹಿಂದೆ) ನದಿಗಳು ಯೌವನಾವಸ್ಥೆಯನ್ನು ಪಡೆದುವೆಂಬುದಕ್ಕೆ ಉತ್ತಮ ನಿದರ್ಶನಗಳೆಂದು ಪ್ರಕಟಿಸಿದ್ದಾರೆ. ಪೀಠಭೂಮಿಯಲ್ಲಿ ಆಳದಲ್ಲಿರುವ ಸ್ತರಭಂಗಗಳು ಚಲಿಸಿ ಲಘು ಕಂಪನಗಳಾಗಿವೆ ಹೊರತು ಉಗ್ರ ಭೂಕಂಪಗಳಲ್ಲ. ಉದಾಹರಣೆಗೆ: ೧೯೭೨ರ ಮೇ ೧೬ರಂದು ಮಂಡ್ಯ ಜಿಲ್ಲೆಯ ದೊಡ್ಡೇಗೌಡನ ಕೊಪ್ಪಲು, ಕೆ.ಎಂ.ದೊಡ್ಡಿಯಲ್ಲಿ, ೪ರ ತೀವ್ರತೆಯ ಸೂಕ್ಷ್ಮ ಕಂಪನವಾಯಿತು. ಆದರಿಂದ ಯಾವ ಹಾನಿಯೂ ಆಗದೆ ಕೆಲವು ಮನೆಗಳ ಗೋಡೆಯಲ್ಲಿ ಬಿರುಕು ಉಂಟಾದುವು. ೧೯೭೫ರಲ್ಲಿ ಶಿಕಾರಿಪುರದ ಅಡಗಂಟೆ ಎಂಬಲ್ಲಿ ಹೆಚ್ಚು ವ್ಯಾಪಕವಾದ ಭೂಕಂಪವಾಯಿತು. M ೫ ಶಕ್ತಿಯುತವಾಗಿತ್ತು; ಇನ್ನೊಂದು ಭೂಕಂಪವು ಬೆಂಗಳೂರು ಜಿಲ್ಲೆಯ ಹೊಸಕೋಟೆಯ ಸಿದ್ದಾಪುರಗ್ರಾಮದಲ್ಲಿ M ೨.೮ ಶಕ್ತಿಯ ಕಂಪನವು ೧೯೭೬ರಲ್ಲಿ ಸಂಭವಿಸಿತು. ೮–೧೨–೯೩ರಂದು ಮತ್ತೊಂದು ಲಘು ಭೂಕಂಪವು ಮಹಾರಾಷ್ಟ್ರದ ಕೋಯ್ನಾ, ಮುಂಬಯಿ ಲಾತೂರ್ ಹಾಗೂ ಗೋವಾಗಳನ್ನು ನಡುಗಿಸಿತು. ಅದೇ ದಿನದಂದು ಕರ್ನಾಟಕದ ಬೆಳಗಾಂ, ಧಾರವಾಡ ಮತ್ತು ಹುಬ್ಬಳ್ಳಿಯಲ್ಲೂ ಭೂಮಿ ಕಂಪಿಸಿತು. ಆದರ ತೀವ್ರತೆ. M ೫.೬ ಇತ್ತು.

ಮೇಲೆ ಹೇಳಿದ ಮೂರು ಭೂಕಂಪಗಳಿಂದ ಯಾವ ವಿಧವಾದ ಸಾವುನೋವುಗಳೂ ಸಂಭವಿಸಲಿಲ್ಲ. ಆವಾಗ್ಯೂ ಮುನ್ನೆಚ್ಚರಿಕೆಯ ಕ್ರಮವಾಗಿ, ಇನ್ನು ಮುಂದೆ ಕಟ್ಟುವ ಕಟ್ಟಡಗಳಿಗೆ ಭೂಕಂಪ ನಿರೋಧಕ ಸಾಮಗ್ರಿಗಳನ್ನು ಉಪಯೋಗಿಸುವುದನ್ನು ಕಡ್ಡಾಯ ಮಾಡಬೇಕು.

ಕರ್ನಾಟಕದ ದಕ್ಷಿಣ ಭಾಗವು ಭೂಕಂಪರಹಿತ ಪ್ರದೇಶವೆಂದು ಹೇಳಬಹುದು. ಆದರೆ ಈ ಪ್ರದೇಶದಲ್ಲೂ M ೪.೫ರ ಭೂಕಂಪವು ಶಿಂಷಾ–ಗಗನಚುಕ್ಕಿ ಜಲಪಾತದ ಸಮೀಪ; ೨೧ ಮತ್ತು ೨೬–೧೧–೯೩ರಂದು ಸಂಭವಿಸಿತಾದರೂ

ಯಾವ ಹಾನಿಯೂ ಆಗಲಿಲ್ಲ. ಈ ಪ್ರದೇಶವು ಸ್ತರಭಂಗ ಪ್ರದೇಶದಲ್ಲೆ ಇದೆ. ನಿರ್ಮಾಣವಾಗಲಿರುವ ಕಟ್ಟಡಗಳಿಗೆ ಕಂಪನ ನಿರೋಧಕ ಸಾಮಗ್ರಿಯನ್ನು ಕಡ್ಡಾಯವಾಗಿ ಉಪಯೋಗಿಸಬೇಕಾಗಿದೆ. ಕರ್ನಾಟಕದ ಎಲ್ಲ ಪ್ರದೇಶಗಳಲ್ಲೂ ಅಂತರ್ಜಲ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದೂ ಒಂದು ಮುನ್ನೆಚ್ಚರಿಕೆಯ ಕ್ರಮ.

ಭೂಕಂಪ ಸುರಕ್ಷತಾ ಕ್ರಮಗಳು:

ಭೂಕಂಪಗಳಾದಾಗ ಸಾವು ನೋವುಗಳು ಮತ್ತು ಸಂತ್ರಸ್ತರಿಗೆ ಪರಿಹಾರ ಒದಗಿಸುವುದು. ಇವೇ ಮೊದಲಾದ ಸಮರೋಪಾದಿಯಲ್ಲಿ ಮಾಡುವ ತುರ್ತು ಕಾರ್ಯಕ್ರಮಗಳಿಗಿಂತ, ಅಷ್ಟೇ ಮುತವರ್ಜಿಯಿಂದ ಭೂಕಂಪ ಪ್ರದೇಶಗಳೆಂದು ಗುರುತಿಸಲಾಗಿರುವ ಪ್ರದೇಶಗಳಲ್ಲಿ ಎಲ್ಲಾ ಕಟ್ಟಡಗಳೂ ಭೂಕಂಪ ನಿರೋಧಕ ಸಾಮಗ್ರಿಗಳನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ಎಚ್ಚರ ವಹಿಸಿದರೆ ಸಾಕು. ಅದಕ್ಕಿಂತ ಸುರಕ್ಷತಾಕ್ರಮ ಯಾವುದೂ ಇಲ್ಲ ಎನ್ನಬಹುದು. ಏಕೆಂದರೆ ಭೂಕಂಪವಾದರೂ ಒಂದೂ ಸಾವಿಲ್ಲ. ಎಂದರೆ ಅದಕ್ಕಿಂತ ಸುರಕ್ಷತಾ ಮಾರ್ಗ ಇನ್ನೊಂದಿದೆಯೆ?

ಬಹು ಮುಖ್ಯ ಸುರಕ್ಷಣಾಕ್ರಮ ಎಂದರೆ, ಅಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಭೂಕಂಪಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವುದು. ಕೆಲವೇ ಕ್ಷಣಗಳು, ಭೂಮಿಯು ಕಂಪಿಸಿ ನಮ್ಮ ಅಳಿವು–ಉಳಿವುಗಳ ಅನಿಶ್ಚತೆಯನ್ನು ತಂದೊಡ್ಡಿದಾಗಲೂ, ಈ ಕೆಳಕಂಡ ಕೆಲವು ಸುರಕ್ಷತಾ ನಿಯಮಗಳನ್ನು ಪಾಲಿಸುವುದು ನಮ್ಮೆಲ್ಲರ ಉಳಿವಿಗೆ ಸಹಾಯಕವಾದೀತು.

ಭೂಕಂಪ ಸುರಕ್ಷಣಾ ನಿಯಮಗಳು*

ಭೂಕಂಪವಾಗುವಾಗ (ಅವಶ್ಯವಾಗಿ ಮಾಡಬೇಕಾದ ಕಾರ್ಯಗಳು)	ಭೂಕಂಪವಾದ ನಂತರ (ಅನಗತ್ಯತಾ ಕಾರ್ಯಗಳು)
೧) ಧೈರ್ಯಗೆಡಬಾರದು. ಭೂಕಂಪವು ಭಯಾನಕವಾಗುವುದು ಯಾವಾಗ ಎಂದರೆ	೧) ಭೂಕಂಪದಿಂದಾಗಿ ವಿದ್ಯುತ್ ತಂತಿ, ನೀರಿನ ಪೈಪುಗಳು ಕಡಿದು ಹೋಗುವುದರಿಂದ,

ಮೇಲ್ಛಾವಣಿಯು ಕುಸಿಯುವುದರಿಂದ.

ಭೂಮಿ ಬಾಯಿಬಿಡುವುದಿಲ್ಲ ಇಲ್ಲವೆ ನೆರೆ ಹೊರೆಯುವರನ್ನು ನುಂಗಿಹಾಕಿ ಬಾಯಿ ಮುಚ್ಚಿಕೊಳ್ಳುವುದಿಲ್ಲ. ಆದುದರಿಂದ, ಶಾಂತವಾಗಿದ್ದು, ಮನೆಯಿಂದ ಹೊರಗಿರುವುದು ಒಳ್ಳಿತು. ಇಲ್ಲವೆ ಮನೆಯಿಂದ ಹೊರಕ್ಕೆ ಓಡಿಬಿಡಿ.

೨) ಭೂಕಂಪವಾದಾಗ ಮನೆಯೊಳಗೆ ಸಿಕ್ಕಿಹಾಕಿಕೊಂಡರೆ, ಒಳಗೇ ಇದ್ದು ಅದಷ್ಟೂ ಟೇಬಲ್ಲು ಮತ್ತು ಬೆಂಚಿನ ಕೆಳಗೆ ಅಥವಾ ಬಾಗಿಲ ಹತ್ತಿರ ಇಲ್ಲವೆ ಒಳಗೋಡೆಗಳ ಸಮೀಪ ಇರುವುದು ಒಳ್ಳೆಯದು, ಗಾಜು ಇಲ್ಲವೆ ಒಡೆಯುವ ವಸ್ತುಗಳಿಂದ ದೂರ ಇರುವುದು ಉತ್ತಮ.

೩) ಮೇಣದ ಬತ್ತಿ, ಬೆಂಕಿಪ್ರೊಟ್ಟಣ ಮತ್ತು ಉರಿವ ಬೆಂಕಿಯಿಂದ ಭೂಕಂಪವಾದಾಗ ಮತ್ತು ಅನಂತರವೂ ದೂರ ಇರುವುದು. ದಹಿಸುವ ವಸ್ತು, ಸ್ಫೋಟಕ ವಸ್ತುಗಳಿಂದ ದೂರ ಇರುವುದು. ಬೆಂಕಿಯನ್ನು ಆರಿಸಬೇಕು. ಬ್ಯಾಟರಿಯು ಬಹು ಉಪಯುಕ್ತ.

ಯಾವ ವಸ್ತುಗಳನ್ನೂ ಮುಟ್ಟುವುದೇ ಆಗಲಿ, ಸ್ವಿಚ್ ಅನ್ನು ಹಾಕಬಾರದು.

೨) ಗ್ಯಾಸ್ ಸಿಲೆಂಡರ್‌ಗಳೂ ಲೀಕ್ ಆಗಿರಬಹುದು. ಆದುದರಿಂದ ಬೆಂಕಿ ಕಡ್ಡಿಯನ್ನು ಗೀಚಬೇಡಿ, ಎಲ್ಲವನ್ನೂ ನಿಧಾನವಾಗಿ ಪರೀಕ್ಷಿಸಿ ಸರಿಪಡಿಸಿಕೊಳ್ಳಬೇಕು.

೩) ನೀರಿನ ಪೈಪ್‌ಗಳು ಹೊಡೆದು ಹೋಗಿದ್ದರೆ, ಮುಖ್ಯ ಕವಾಟವನ್ನು ಸಂಪೂರ್ಣವಾಗಿ ನಿಲ್ಲಿಸುವುದು.

೪) ವಿದ್ಯುತ್ ತಂತಿಗಳು ಕಡಿದು ಶಾರ್ಟ್‌ಸರ್ಕ್ಯೂಟ್ ಆಗಿದ್ದರೆ, ಮುಖ್ಯ ಸ್ವಿಚ್ ಅನ್ನು ಆಫ್ ಮಾಡುವುದು.

೫) ರೇಡಿಯೋ ಮತ್ತು ಟೆಲಿವಿಷನ್‌ಗಳನ್ನು (ಸುಸ್ಥಿತಿಯಲ್ಲಿದ್ದರೆ ಮಾತ್ರ) ಹಾಕಿ ತುರ್ತು ವಿಷಯಗಳನ್ನು, ಸೂಚನೆಗಳನ್ನು ಭೂಕಂಪದ ವಾರ್ತೆಗಳನ್ನು ತಿಳಿದುಕೊಳ್ಳಿ.

೬) ದೂರಸಂಪರ್ಕದಿಂದ (ಟೆಲಿಫೋನ್) ದೂರ ಇರುವುದೇ ಒಳ್ಳೆಯದು.

೭) ಹೊರ ಸಂಚಾರಕ್ಕೆ ಹೋಗದಿರುವುದು.

೪) ನೀನು ಮನೆಯಿಂದ ಹೊರಗಡೆ ಇದ್ದಾಗ ಭೂಕಂಪ ಸಂಭವಿಸಿದರೆ. ಆದಷ್ಟೂ ಕಟ್ಟಡ ಮತ್ತು ವಿದ್ಯುತ್ ತಂತಿಗಳಿಂದ ದೂರವಿರು. ಕಂಪನವು (ನಿಲ್ಲುವ) ಮುಗಿಯುವವರೆಗೂ ವಿಶಾಲವಾದ ಮೈದಾನದಲ್ಲಿ ಇರುವುದೇ ಒಳ್ಳೆಯದು.

೫) ಕಟ್ಟಡಗಳ ಸಮೀಪಕ್ಕೆ ಇಲ್ಲವೆ ಅವುಗಳ ಮುಖಾಂತರ (ದಾಟಿಕೊಂಡು) ಓಡಬಾರದು. ಬಾಗಿಲುಗಳ ಹೊರ ಭಾಗಕ್ಕೆ ಗಾರೆ, ಮಣ್ಣು, ಇಟ್ಟಿಗೆ ಇವೇ ಮುಂತಾದುವು ಕುಸಿಯುತ್ತವೆ. ಆದುದರಿಂದ ಒಳ ಭಾಗಕ್ಕಿರುವುದು ಒಳಿತು.

೬) ಚಲಿಸುವ ವಾಹನದಲ್ಲಿದ್ದರೆ, (ಕಾರು, ಸ್ಕೂಟರ್, ರೈಲು ಮುಂತಾದವು) ಅದನ್ನು ಸುರಕ್ಷಿತವಾಗಿ ನಿಲ್ಲಿಸುವುದು. ಕಾರು ಒಂದು ಉತ್ತಮ ಭೂಕಂಪನ ಮಾಪಕವಿದ್ದಂತೆ, ಏಕೆಂದರೆ ಕಾರು ತನ್ನ ಸ್ಪ್ರಿಂಗ್‌ಗಳ ಮೇಲೆ ಯದ್ವಾತದ್ವಾ ಕುಣಿಯುತ್ತದೆ. ಆದುದರಿಂದ ಸುರಕ್ಷಿತ ಸ್ಥಳವೆಂದರೆ ಕಾರಿನಲ್ಲಿ ಕುಳಿತಿರುವುದು.

೮) ಬಹಳ ಛಿದ್ರವಾಗಿರುವ, ಶಿಥಿಲವಾಗಿರುವ ಅಥವಾ ಝರ್ಜರಿತವಾಗಿರುವ ಕಟ್ಟಡಗಳಿಂದ ಹೆಚ್ಚು ದೂರವಿರುವುದು ಒಳ್ಳೆಯದು. ಕಾರಣ ಮರುಕಂಪನಗಳು ಅವನ್ನು ಕೆಡವಬಹುದು ಇಲ್ಲವೆ ಬೀಳಿಸಬಹುದು.

೯) ನೆರೆ ಹೊರೆಯುವರಿಗೆ, ಸ್ವಯಂ ಸೇವಕರಿಗೆ ಸಹಾಯ ಹಸ್ತ ನೀಡುವುದು.

---

* ಅಮೆರಿಕದ ರಾಷ್ಟ್ರೀಯ ಕಡಲು ಮತ್ತು ವಾಯುಮಂಡಲ ಆಡಳಿತ ಪ್ರಾಧಿಕಾರದ ಕೃಪೆಯಿಂದ.

ಮುಖ್ಯಾಂಶಗಳು ಮತ್ತು ಹಿನ್ನುಡಿ

ನಾವು ವಿಜ್ಞಾನದಲ್ಲಿ ಎಷ್ಟೇ ಮುನ್ನಡೆ ಸಾಧಿಸಿದ್ದರೂ, ಪರಿಸರವನ್ನು ಕಲುಷಿತಗೊಳಿಸಿ, ಪ್ರಕೃತಿಯನ್ನು ನಾಶಮಾಡಿ, ನಾವೆಂದೂ ಬದುಕಲಾರೆವು ಎಂಬ ಸತ್ಯವನ್ನು ಭೂಕಂಪಗಳು ಸಾರಿ ಹೇಳುತ್ತವೆ. ಭೂಮಿಯು ತಾನಿರುವುದನ್ನು ಜ್ಞಾಪಿಸಿಕೊಳ್ಳಿರೆಂದು ಕ್ಷಮಾಮಾತೆಯಂತಿದ್ದ ಭೂಮಿ ಒಮ್ಮೊಮ್ಮೆ ಪ್ರಕ್ಷುಬ್ಧಳಾಗುವಳು. ವಾಸ್ತವವಾಗಿ ನಮಗೆ ವಿಜ್ಞಾನದಿಂದ ಎಷ್ಟೊಂದು ಜೀವನ ಸುಖಸೌಲಭ್ಯಗಳು ಲಭಿಸಿವೆಯೋ ಅವರ ಜೊತೆಜೊತೆಗೆ ಪ್ರಕೃತಿಯ ಪ್ರಕೋಪ–ಭೂಕಂಪವು ಅಷ್ಟೇ ಅಸ್ಥಿರತೆಯನ್ನು ಹುಟ್ಟಿಸಿದೆ; ಹಾಗೂ ಈ ಸೌಲಭ್ಯಗಳು ಗೌಣ ಎನಿಸುವಂತೆ ಮಾಡಿದೆ. ಲಾತೂರ್–ಖಿಲ್ಲಾರಿಯ ಜನರು ಈಗ್ಗೆ ಎರಡು ವರ್ಷಗಳ ಹಿಂದೆಯೆ ಅಂದರೆ ೧೯೯೧ ರಲ್ಲೆ ಆ ಪ್ರದೇಶಗಳ ಭೂಮಿ ನೂರಾರು ಸಲ ನಡುಗಿದ್ದನ್ನು ಸರ್ಕಾರದ ಗಮನಕ್ಕೆ ತಂದರು. ಸ್ಥಳಾಂತರಕ್ಕೆ ಮೊರೆಯಿಟ್ಟರೂ; ಅವರ ಭೀತಿಯ ತೀವ್ರತೆಯನ್ನು ನಾವ್ಯಾರೂ ಅರ್ಥಮಾಡಿಕೊಳ್ಳಲಿಲ್ಲ. ಆದರೆ ಅವರಲ್ಲಿ ಬಹುತೇಕ ಮಂದಿ ಸತ್ತ ನಂತರ ಶವಕ್ಕೆ ಶೃಂಗಾರವೆಂಬಂತೆ ಎಲ್ಲಿಲ್ಲದ ಸಮರೋಪಾದಿಯ ಅತ್ಯಂತ ತುರ್ತುಪರಿಹಾರಕಾರ್ಯ!

ಭೂಕಂಪದ ಬಗ್ಗೆ ನೆನಪಿನಲ್ಲಿಡಬೇಕಾದ ಅಂಶಗಳೆಂದರೆ:

೧) ಒಮ್ಮೆ ಕಂಪನಕ್ರಿಯೆ ಆರಂಭಗೊಂಡಿತೆಂದರೆ ಭೂಮಿಯು ತನ್ನ ಮೊದಲಸ್ಥಿತಿಗೆ ತಲುಪಬೇಕಾದರೆ "ಭೂಕಂಪ"ವಾದನಂತರವೆ.

೨) ಭೂಕಂಪಕ್ಕೆ ಪೂರ್ವಭಾವಿಯಾಗಿ ಆಯಸ್ಕಾಂತೀಯ ಕ್ಷೇತ್ರವು ಬದಲಾಗುತ್ತದೆ.

೩) ವಿಜ್ಞಾನಿ ಬೋಲ್ಟ್ (೧೯೯೩)ರ ಪ್ರಕಾರ "ಶಿಲೆಗಳಲ್ಲಿ ನೀರಿರದಿದ್ದರೆ ಬೃಹತ್ ಭೂಕಂಪವಾಗುವ ಸಂಭವ ಕಡಿಮೆ" ಎಂದು.

೪) ಭೂಮಿ ಸದಾ ಕಾಲ ಕಂಪಿಸುತ್ತಿದ್ದರೂ, ಅದರ ತೀವ್ರತೆ ಭೂಕಂಪದಷ್ಟಿಲ್ಲ.

೫) ಭೂಕಂಪವಾಗಲು ಕಾರಣ ಶಿಲೆಗಳು ಒತ್ತಡದಲ್ಲಿ "ಸ್ಥಿತಿಸ್ಥಾಪನಾ ಹಿನ್ನೆಗೆತ"ವನ್ನು ಪ್ರತಿಕ್ರಿಯಿಸುವುದರಿಂದ. (ರೀಡ್, ೧೯೦೬)

೬) ಭೂಕಂಪದಲ್ಲಿ ಎರಡು ವಿಧ ಚಲನೆಗಳಾಗುವುವು-ಭೂ ಮೇಲ್ಮೈಯು ಪಕ್ಕಕ್ಕೆ ಸರಿಯುವ–ಸೂಕುಸುಗ್ಗಲ ಚಲನೆ ಮತ್ತು ಏರು ಬೀಳುಗಳ ಚಲನೆ.

೭) ಭೂಮಿಯ ಒಳಪದರಗಳಲ್ಲಾಗುವ ಯಾವುದೇ ಸಮತೋಲನದ ತೊಂದರೆಕೆ, ಭೂಮೇಲ್ಮೈಯನ್ನು ನಡುಗಿಸುತ್ತದೆ.

೮) ಭೂಕಂಪದ ಸಮಯದಲ್ಲಾಗುವ ಕ್ರಿಯೆ ಎಂದರೆ ಶಿಲೆಗಳ ಮೇಲೆ ಒತ್ತಡ ಹೆಚ್ಚಾದಂತೆಲ್ಲಾ ಬಿರುಕುಗಳೂ ಹೆಚ್ಚಾಗುವುದು.

೯) V_p/V_s ಗಳ ವೇಗವು ಕನಿಷ್ಠ ಪ್ರಮಾಣದಲ್ಲಿದ್ದರೆ, ಅದು ಭೂಕಂಪ ಸಂಭವಿಸುವುದನ್ನು ಖಚಿತವಾಗಿ ಸೂಚಿಸುತ್ತದೆ.

೧೦) ಅಂತರ್ಜಲದಲ್ಲಿ "ರಡಾನ್" ಅಂಶವು ಹೆಚ್ಚಾದರೆ ಅದು ಭೂಕಂಪದ ನಿಖರ ಮುನ್ಸೂಚನೆ.

೧೧) ಭೂಕಂಪವಾದಾಗ ನೆಲದ ಮಣ್ಣು ಅನುರಣಿಸುತ್ತದೆ

೧೨) ಭೂಕಂಪದ ಆದಿ ಮತ್ತು ಅಂತ್ಯಗಳಲ್ಲಿ ಮರುಕಂಪನ ಇದ್ದೇ ಇರುತ್ತದೆ

೧೩) ಭೂಕಂಪಗಳಾದಾಗ ಸಾಮಾನ್ಯವಾಗಿ ಅಂತರ್ಜಲದ ಸ್ವರೂಪ ಬದಲಾವಣೆಯಾಗುವುದು.

೧೪) ಶಿಲೆಗಳ ಹಿಗ್ಗುವಿಕೆಯಿಂದ ಅದರ ರೂಪು ಬದಲಾವಣೆಗೊಂಡು ಹೆಚ್ಚು ಸ್ಥಳವನ್ನಾಕ್ರಮಿಸುತ್ತದೆ. ಇದರಿಂದ ಭೂ ಮೇಲ್ಮೈಯಲ್ಲಿ ಬಿರುಕು ಮತ್ತು ಇಳಿಜಾರಿ ಉಂಟಾಗುವುದು (ವಾಲಿಕೊಳ್ಳುವುದು), ಇದೇ ಭೂಕಂಪಕ್ಕೆ ನಾಂದಿ.

೧೫) ಕೆಲವೇ ಕ್ಷಣಗಳಲ್ಲಿ ಮುಗಿಯುವ ದುರಂತ ಘಟನೆ 'ಭೂಕಂಪ' ಆದುದರಿಂದ ಮುನ್ನೆಚ್ಚರಿಕೆ ಅಸಾಧ್ಯ.

೧೬) ಭೂಕಂಪವೇ ಮನುಷ್ಯನನ್ನು ಕೊಲ್ಲಲಾರದು ಹಾಗೂ ಅವನ ಮೈಮೇಲೆ ಒಂದು ಗೀಚನ್ನೂ ಮಾಡಲಾರದು. ಆದರೆ ಭೂಮಿಯ ಓಲಾಟದಿಂದ ಕಟ್ಟಡಗಳು ಕುಸಿದು ಅದರ ಕಲ್ಲು, ಮಣ್ಣು, ಮನುಷ್ಯರನ್ನು ಸಜೀವ ಸಮಾಧಿ ಮಾಡುತ್ತದೆ.

೧೭) ಯಾವಾಗ ಭೂಕಂಪ ಆಗುತ್ತದೆ ಎಂದು ಹೇಳುವುದಕ್ಕಿಂತ ಅದರ ತೀವ್ರತೆಯನ್ನು ಕಡಿಮೆಯಾಗುವಂತೆ ಮಾಡುವುದೇ 'ಮುನ್ಸೂಚನೆಯ' ಮುಖ್ಯ ಗುರಿಯಾಗಿದೆ.

೧೮) ವಾಸ್ತುಶಿಲ್ಪಿಗಳಿಗೆ, ಇಂಜನೀಯರಿಂಗ್ ಮತ್ತು ಪರಿಸರ ವಿಜ್ಞಾನಿಗಳಿಗೆ ಹಾಗೂ ಜನಸಾಮಾನ್ಯರಿಗೆ ಭೂಕಂಪದ ವಿಶ್ಲೇಷಣೆ ಸುರಕ್ಷತಾ ಮಾರ್ಗಗಳ ಅರಿವು ಅತ್ಯಗತ್ಯ.

೧೯) ನಮ್ಮ ದೇಶದಲ್ಲಿ ಸುಮಾರು ೫೦ ಭೂಕಂಪಮಾಪಕ ಯಂತ್ರಗಳಿವೆ. (ಸೀಸ್ಮೊಗ್ರಾಫ್) ಇವು ಬಹಳ ಹಳೆಯಮಾದರಿಗಳಾಗಿರುವುದರಿಂದ ಹಾಗೂ ದೇಶದ ಉದ್ದಗಲವನ್ನು ಗಣನೆಗೆ ತೆಗೆದುಕೊಂಡರೆ ಇನ್ನೂ ಹತ್ತುಪಟ್ಟು ಹೆಚ್ಚು ಸ್ಥಳಗಳಲ್ಲಿ ಒಳ್ಳೆಯ ಮಾಪಕ ಯಂತ್ರ ಗಳನ್ನು ಕೊಂಡು ವ್ಯವಸ್ಥೆ ಮಾಡುವುದು ಉತ್ತಮ. "ಭೂಕಂಪ ಮುನ್ಸೂಚನೆಗೆ" ಚಾಲನೆ ಹಾಗೂ ಆ ಸ್ಥಳಗಳ ತೀವ್ರತೆಯನ್ನು ಆಧಾರವಾಗಿಟ್ಟುಕೊಂಡು ಹೆಚ್ಚು ನಿರೋಧಕ ವಸ್ತುಗಳನ್ನು ಉಪ ಯೋಗಿಸಿ, ನಿರ್ಮಾಣ ತಂತ್ರಗಳನ್ನು ರೂಢಿಗೆ ತಂದರೆ ಭಯಂಕರ ಭೂಕಂಪವಾದರೂ, ಯಾವ ಹಾನಿಯನ್ನು ಮಾಡಲಾರದಂತೆ ನೋಡಿ ಕೊಳ್ಳಬಹುದು.

೨೦) ನಮ್ಮ ದೇಶದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರು (೪೪ ಕೋಟಿ) "ಭೂಕಂಪ ಪೀಡಿತ" ವಲಯದಲ್ಲಿ ವಾಸಿಸುತ್ತಿದ್ದಾರೆ. ಭೂಕಂಪವಾದ ಮೇಲೆ ಪರಿಹಾರ ಒದಗಿಸುವುದಕ್ಕಿಂತ, ಮುಂಚೆಯೆ ಅಲ್ಲಿರುವ ಕಟ್ಟಡಗಳಿಗೆ ಕಾಯಕಲ್ಪ ಮಾಡಿ, ನಿರೋಧಕ ವಸ್ತು ಗಳಿಂದ ಭೂಕಂಪದ ಭಯವನ್ನು ಹೋಗಲಾಡಿಸುವುದು, ಅದರ ಬಗ್ಗೆ ಅರಿವು ಮೂಡಿಸುವುದೂ ಒಳ್ಳೆಯ ಮುಂಜಾಗ್ರತಾ ಕ್ರಮಗಳೇ ಆಗಿವೆ.

ಒಟ್ಟಿನಲ್ಲಿ ನಾವು ನೆಚ್ಚಿನಿಂತ ನೆಲವೇ ನಡುಗಿದಾಗ ನಮಗೆಲ್ಲಿ ನೆಲೆ. ನಮಗಿರುವ ಒಂದೇ ಮಾರ್ಗವೆಂದರೆ ಎಂತಹ ಬೀಕರ ಭಯಾನಕ ಭೂಕಂಪ ಸಂಭವಿಸಿದರೂ, ಭೂಕಂಪ ನಿರೋಧಕ ವಸ್ತುಗಳಿಂದ ನಿರ್ಮಿಸಿದ ಕಟ್ಟಡಗಳು ಒಂದೂ ಸಾವನ್ನುಂಟುಮಾಡದೆ ನಾವೆಲ್ಲರೂ ಸುರಕ್ಷಿತವಾಗಿರುವುದೇ ಆಗಿದೆ.

ಭೂಕಂಪದಿಂದ ನಾವು ಕಲಿಯಬೇಕಾದ ಪಾಠವೆಂದರೆ, ಇರುವುದೊಂದೆ ಭೂಮಿ, ಆದುದರಿಂದ ಎಚ್ಚರವಹಿಸಿ ಅದರ ಪರಿಸರವನ್ನು ಜತನದಿಂದ ಸಂಪೂರ್ಣವಾಗಿ ಕಾಪಾಡದಿದ್ದರೆ, ನಾವು ಭೂಕಂಪವೆಂಬ ವಿನಾಶದ ಅಂಚಿನಲ್ಲಿ ನಿಲ್ಲುತ್ತೇವೆ ಎಂದು. ಭೂಮಿ ಭೂಮಿಗಾಗಿಯೇ ಎಂಬ ತತ್ವವನ್ನು ಸಾರ್ಥಕ ಪಡಿಸಬೇಕು; ಬಾಹುಬಲಿಯು ಭರತನಿಗೆ ಹೇಳಿದ ವಾಕ್ಯ "ಭೂಮಿಯು ಯಾರಿಗೂ ಸೇರಿದ್ದಲ್ಲ, ಯಾರಿಗಾಗಿಯೂ ಅಲ್ಲ, ಅದು ನಿಸರ್ಗಸಹಜ ಸಂಪತ್ತಾದದ್ದು" ಎಂಬುದನ್ನು ಮರೆಯುವಂತಿಲ್ಲ.

ಡಾ. ಟಿ. ವಿ. ಶಿವರುದ್ರಪ್ಪ

ನನ್ನ ತಂದೆ, ಮಗ ಮತ್ತು ನಾನು

ಅತ್ಯಂತ ಕಠಿಣ ಶಿಸ್ತಿನಲ್ಲಿ ತಂದೆ ತನ್ನ ಮಗನನ್ನು ಬೆಳೆಸಿದ—ಸೇನಾ ಕವಾಯಿತಿರಂಗದ ತೆರದಲ್ಲಿ. ಈ ಮಗನಿಗೆ ಮುಂದೊಂದು ದಿನ ಮಗ ಹುಟ್ಟಿದಾಗ ತಂದೆ ತನ್ನ ಮಗನಿಗೆ ರವಾನಿಸಿದ ಸಂದೇಶ: "ನೀನು ನಿನ್ನ ಮಗನಿಗೆ ನಿನ್ನ ತಂದೆ ನಿನಗಿದ್ದಂತೆ ಇರಬೇಡ!"

ನನ್ನ ತಂದೆ ಈಗಲೂ ಹಾಗೆಯೇ ಇದ್ದಾರೆ. ನಾನು ಬೆಳೆಯುತ್ತಿರುವಾಗ ಇದ್ದಂತೆಯೇ. ಅದೇ ತುಂಬುಗೂದಲು, ವಜ್ರಕಾಯ, ಗೌರವರ್ಣ, ಚೂಪು ದೃಷ್ಟಿ. ವ್ಯತ್ಯಾಸವಾಗಿ ಕಾಣುತ್ತಿರುವುದು ಅವರ ಇಂದಿನ ವೃದ್ಧತ್ವ ಮತ್ತು ತಾಳ್ಮೆ ಮಾತ್ರ. ಇವೆರಡನ್ನು ಅವರಲ್ಲಿ, ನಾನು ಹುಡುಗನಾಗಿದ್ದಾಗ ಕಂಡ ನೆನಪಿಲ್ಲ. 'ನಮ್ಮಿಬ್ಬರಲ್ಲಿ ಯಾರು ಬದಲಾಗಿದ್ದೇವೆ?' ಎಂಬುದೇ ನನಗೆ ಅಚ್ಚರಿ.

ನನ್ನ ಮಗ ಮ್ಯಾಥ್ಯೂ ಮತ್ತು ನಾನು, ನನ್ನ ತಂದೆಯನ್ನು ನೋಡಲು ಅರಿಜೋನಾಗೆ ಹೋದಾಗ, ಅವರು ತಮ್ಮ ಗಿಟಾರನ್ನು ಶ್ರುತಿಮಾಡುತ್ತಿದ್ದರು. ನನ್ನ ಮಗನನ್ನು ಕರೆದು "ನಿನಗೆ—'ಓ, ಎಮ್ಮೆಗಳು ಓಡಾಡುತ್ತಿರುವಲ್ಲಿ ನನಗೊಂದು ಮನೆಯ ಕೊಡು'—ಎಂಬ ಹಾಡು ನುಡಿಸಲು ಗೊತ್ತುಂಟೇ" ಎಂದು ಕೇಳಿದರು. ಅವನು ಅಲ್ಲಿರುವಷ್ಟು ಹೊತ್ತು ನನ್ನ ತಂದೆಯು ಹಾಸಿಗೆಯ ಮೇಲೆ ಲಾಗ ಹಾಕುತ್ತ, ಅವನು ಮುಟ್ಟಬಾರದ ಗಿಟಾರನ್ನು ಕಿತ್ತಾಡುತ್ತ ಒಂದೇ ಸಮನೆ ಹರಡುತ್ತಿದ್ದ.

ಒಂದು ಕಾಲದಲ್ಲಿ ನಾನು ಮತ್ತು ನನ್ನ ತಂದೆ, ಪರಸ್ಪರ ವಿರುದ್ಧವಾಗಿದ್ದೆವು. ನನ್ನ ಯೌವನದ ಬಿಸಿ, ಗೆಳೆಯರು, ಬಟ್ಟೆ-ಬರೆ, ನಂಬಿಕೆಗಳು, ಆಟದ ಹುಮ್ಮಸ್ಸು, ಕಿರಿಚಾಟಗಳು—ಒಂದೇ, ಎರಡೇ—ಇವೆಲ್ಲವೂ ಅವರಿಗೆ ಜುಗುಪ್ಸೆ ತರುವ ವಿಷಯಗಳಾಗಿದ್ದುವು. 'ನಾನು ನನ್ನ ತಂದೆಯಂತಿಲ್ಲ ಎಂದು ಸಾಧಿಸುವುದನ್ನು ಇನ್ನು ಮುಂದೆ ಬಿಟ್ಟುಬಿಡಬಹುದು' ಎಂದು ನಾನು ನಿರ್ಧಾರಕ್ಕೆ ಬಂದ ದಿನ ಇನ್ನೂ ಹಚ್ಚ ಹಸುರಾಗಿ ನೆನಪಿನಲ್ಲಿದೆ.

ನಾನು ಚಿಕ್ಕವನಿದ್ದಾಗ, ನನ್ನ ತಂದೆ ಅಷ್ಟಾಗಿ ನನ್ನ ಜೊತೆಗೆ ಇರಲಾಗುತ್ತಿರಲಿಲ್ಲ. ಅವರು ವಾರವಿಡೀ ಹಗಲೆಲ್ಲಾ ಹಾಲು ಮಾರುವವರಾಗಿ ದುಡಿಯು

೧೯೯೩ರ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ವಾಲ್ಟ್ ಹ್ಯಾರಿಂಗ್‌ಟನ್ ಅವರ ಲೇಖನದ ಅನುವಾದ.

ತ್ತಿದ್ದರು. ಆದರೆ ಅವರ ಗೈರುಹಾಜರಿಯಲ್ಲೂ ನನ್ನಿಂದ ಕೆಲಸ ಮಾಡಿಸುವ ತಾಕತ್ತು ಅವರಲ್ಲಿತ್ತು. ಆದರೆ ನಾನು ಮಾಡದೇ ಇದ್ದಾಗ, ರಾತ್ರಿ ಬಂದವರು, ದನಿಯಿಂದಲೋ ತೋರುಬೆರಳಿನಿಂದಲೋ ಗದರಿಸುತ್ತಿದ್ದರೇ ವಿನಾ ಬೇರೇನೂ ಶಿಕ್ಷಿಸುತ್ತಿರಲಿಲ್ಲ.

ಮುಷ್ಟಿಗೆ ಮುಷ್ಟಿ ಹೊಡಿಯಾದರೂ ನಾನು ಅವರನ್ನೆದುರಿಸಿ ನನ್ನ ಪುರುಷತ್ವವನ್ನು ಉಳಿಸಿಕೊಳ್ಳಬೇಕೆಂದು ನಾನು ಯೋಚಿಸಿದ್ದುಂಟು. ನಮ್ಮ ಶಾಲೆಯು ಕಾರಿನ ನಿಲ್ದಾಣದ ಬಳಿಯಿದ್ದ ಮರದ ಹಳಿಗಳನ್ನು ಕಂಡರೆ ನಮಗ್ಯಾರಿಗೂ ಆಗುತ್ತಿರಲಿಲ್ಲ. ಏಕೆಂದರೆ ಶಾಲೆಯು ಬಸ್ಸುಗಳೆಲ್ಲ ಹೋಗುವ ತನಕ, ನಾವು ನಮ್ಮ ಕಾರುಗಳನ್ನು ಹೊರತೆಗೆದು ಶಾಲೆ ಬಿಡುವಂತಿರಲಿಲ್ಲ.

ಎಂತಲೇ, ಒಮ್ಮೆ ನಾನು, ನನ್ನ ಗೆಳೆಯರೂ ಸೇರಿ, ಆ ಹಳಿಗಳನ್ನು ಕಿತ್ತು ವರ್ಷಾಂತ್ಯದಲ್ಲಿ ಉರಿಸುವ ಸೌದೆರಾಶಿಗೆ ಹಾಕಿಬಿಟ್ಟೆವು. ಈ ಮಹತ್ಕಾರ್ಯವನ್ನು ನಾನು ನನ್ನ ತಂದೆಗೆ ಹೇಳಿದಾಗ ಅವರು ಅದನ್ನು ತಮಾಷೆಯಾಗಿ ತೆಗೆದುಕೊಳ್ಳದೆ, ಹಳಿಗಳನ್ನು ಮತ್ತೆ ಹಾಕಲು ತಮ್ಮೊಂದಿಗೆ ಬರಬೇಕೆಂದರು.

ಹದಿನಾರರ ಹರೆಯದಲ್ಲಿ ಇದಕ್ಕಿಂತ ಅವಮಾನವನ್ನು ನೀವು ಊಹಿಸಬಲ್ಲಿರಾ? ನಾನು 'ಸಾಧ್ಯವೇ ಇಲ್ಲ' ಎಂದೆ. ತಂದೆ ವಿಪರೀತ ಕೋಪಗೊಂಡರು. ನಾನು, ನಮ್ಮಿಬ್ಬರ ನಡುವಿನ ಪರೀಕ್ಷಾ ಘಟ್ಟ ಬಂದೇ ಬಿಟ್ಟಿತು ಎಂದು ಭಾವಿಸಿದೆ. ಆದರೆ ಅವರು ತಲೆಯಾಡಿಸಿ, ಶಾಂತವಾಗಿ ಹೊರಟೇ ಹೋದರು.

ಮರುದಿನ ಅವರು, ವರ್ಷಕ್ಕೊಮ್ಮೆ ನಡೆಯುವ 'ಬಾನ್‌ಫೈರ್' ಉತ್ಸವದಲ್ಲಿ ಪಾಲ್ಗೊಂಡು, ಆ ಸೌದೆಗಳ ರಾಶಿಯಿಂದ ಮರದ ಹಳಿಗಳನ್ನು ಹೊರಗೆಳೆದು ಹಾಕಿದ್ದನ್ನು ನನ್ನ ಗೆಳೆಯರು ನನಗೆ ಹೇಳಿದರೇ ವಿನಾ ನನ್ನ ತಂದೆ ಇಂದಿಗೂ ನನಗದನ್ನು ಹೇಳಿಲ್ಲ!

ತಂದೆ–ಮಗನ ನಡುವಿನ ಈ ಜಗಳಗಳಿದ್ದರೂ ಅವರ ಪ್ರೀತಿಯನ್ನು ನಾನೆಂದೂ ಶಂಕಿಸಿರಲಿಲ್ಲ. ಅವರು—ನಾನು ಒಟ್ಟಿಗೆ ಕುಳಿತು ಟಿ.ವಿ. ನೋಡಿದ್ದು, ಮಣ್ಣು ರಸ್ತೆಯಲ್ಲಿ ಮುಸ್ಸಂಜೆಯಲ್ಲಿ ನಾವಿಬ್ಬರೂ ನಡೆದಾಡಿದ್ದು, ಜಾನಪದ ಗೀತೆಗಳನ್ನು ಹಾಡುತ್ತ ಇಬ್ಬರೂ ಕಾರಿನಲ್ಲಿ ಸುತ್ತಾಡಿದ್ದು –ಹೀಗೆ ನನ್ನ–ಅವರ ನಡುವಿನ ಪ್ರೇಮ ಸಂಬಂಧವಾದ ಬೆಚ್ಚಗಿನ ನೆನಪುಗಳು ಹೇರಳವಾಗಿವೆ.

ಅವರು ನನ್ನೆಡೆಗೆ ನೋಡಿ ಕಣ್ಣು ಮಿಟುಕಿಸಿ ನಗುತ್ತಿದ್ದ ರೀತಿ, ಹಿಂಗೈಯಿಂದ ಮೆಲ್ಲಗೆ ಹೊಡೆದು ನನಗೆ ಶಹಭಾಸ್‌ಗಿರಿ ಕೊಡುತ್ತಿದ್ದುದು, ನನ್ನ ಕಾರ್ಯಗಳಿಂದ ತಮಗೆ ಹೆಮ್ಮೆಯಾಗಿದೆ ಎಂದು ಹೇಳುತ್ತಿದ್ದ ವಿಧ, ನನ್ನನ್ನು ತೀವ್ರವಾಗಿ

ಕೀಟಲೆ ಮಾಡಿ ತಮ್ಮ ಅಪ್ರಕಟ ಪ್ರೇಮವನ್ನು ವ್ಯಕ್ತಪಡಿಸುತ್ತಿದ್ದ ರೀತಿ, ನನ್ನಿಂದ ಮರೆಯಲಸಾಧ್ಯ.

ಎಷ್ಟೋ ಮಂದಿ ತಮ್ಮ ಮಮತೆಯನ್ನು ಹೀಗೆ ಪ್ರಕಟವಾಗಿ, ತೋರುವುದೇ ಇಲ್ಲ ಎಂದು ನಾನು ಬೆಳೆದಾಗ ನನಗೆ ಅರ್ಥವಾಯಿತು. 'ನಿನ್ನ ಮೂಗು ಬಲು ದೊಡ್ಡದು. ನಿನ್ನ ಟೈ ತುಂಬ ಕೆಟ್ಟದಾಗಿದೆ ಎಂದು ಮುಕ್ತವಾಗಿ ಹೇಳುವುದರ ಮೂಲಕ 'ನಾನು ನಿನ್ನನ್ನು ಪ್ರೀತಿಸುತ್ತೇನೆ' ಎಂದು ಸೂಚ್ಯವಾಗಿ ಹೇಳುವುದನ್ನು ನಾನು ಕಲಿತದ್ದು ಅವರಿಂದಲೇ.

ಆದರೆ....ನನ್ನ ತಂದೆ ನನ್ನನ್ನು ಅಪ್ಪಿಗೊಂಡದ್ದಾಗಲೀ, ಮುದ್ದುಗರೆದದ್ದಾಗಲೀ, ನನ್ನನ್ನು ಪ್ರೀತಿಸುವೆ ಎಂದದ್ದಾಗಲೀ ನನಗೆ ನೆನಪಿಲ್ಲ. ಭಾನುವಾರಗಳಂದು ಅವರ ಬೆಚ್ಚಗಿನ ಅಪ್ಪುಗೆಯಲ್ಲಿ ನಿದ್ರಿಸಿದ್ದು ನೆನಪಿದೆಯೇ ವಿನಾ, ಅವರ ಕೈ ಕುಲುಕುವಿಕೆಗಿಂತ ಹೆಚ್ಚಿನ ಪ್ರೇಮ ಪ್ರದರ್ಶನವನ್ನು ಅವರೆಂದೂ ವ್ಯಕ್ತಪಡಿಸಿಲ್ಲ.

ನಾನು ರಜೆ ಮುಗಿಸಿಕೊಂಡು ಕಾಲೇಜಿಗೆ ಹಿಂತಿರುಗುವಾಗಿನ ದಿನಗಳಲ್ಲಿ, ಅವರನ್ನು ಅಪ್ಪಿಕೊಂಡು ಬೀಳ್ಕೊಳ್ಳಬೇಕೆಂಬ ಉತ್ಕಟ ಆಸೆ. ಆದರೆ ಸ್ನಾಯುಗಳು ನನ್ನ ಭಾವನೆಗಳಿಗೆ ಸ್ಪಂದಿಸುತ್ತಿರಲಿಲ್ಲ. ಕಡೆಗೆ, ನನ್ನ ತಾಯಿಯನ್ನು ಅಪ್ಪಿಕೊಂಡು, ತಂದೆಗೆ ಕೈ ಕುಲುಕಿ, ಹೊರಡುತ್ತಿದ್ದೆ.

'ಒಬ್ಬ ಮನುಷ್ಯನ ಹೆಗ್ಗಳಿಕೆ ಇರುವುದು ಅವನ ಮಾತಿನಲ್ಲಲ್ಲ, ಕೃತಿಯಲ್ಲಿ' ಎನ್ನುತ್ತಿದ್ದರವರು. ಮಾತು—ಭಾವನೆಗಳು ಎರಡೂ ಎಷ್ಟು ಬೇಕೋ ಅಷ್ಟು ಮಾತ್ರ. ಇಡೀ ದಿನ ಹೊರಗೆ ದುಡಿಯುತ್ತಿದ್ದರೂ, ನನ್ನನ್ನು ರಕ್ಷಿಸುತ್ತಿದ್ದರು. ನನಗೆ ತಪ್ಪು–ಒಪ್ಪುಗಳನ್ನು ಬೋಧಿಸುತ್ತಿದ್ದರು. ನನ್ನ ಹೃದಯ–ಮನಸ್ಸುಗಳನ್ನು ಗಟ್ಟಿಯಾಗಿಸಿದರು. ಇದೇ ನಮ್ಮಿಬ್ಬರ ನಡುವಿನ ಬಂಧ: ಬಿಡುಕೂ ಕೂಡ.

ತಂದೆಯಲ್ಲಿ ನನಗೆ ಕಂಡ ತಪ್ಪುಗಳನ್ನು, ನಾನು ಪುನರಾವರ್ತಿಸಬಾರದು ಎಂದು ನಿರ್ಧರಿಸಿದೆ. ನನ್ನ ಮಗ ಮ್ಯಾಥ್ಯೂ ಮತ್ತು ನಾನು ಅಪ್ಪಿ ಮುದ್ದಾಡುತ್ತೇವೆ. ಇದು ಹೊಸ ರೀತಿಯ ಪುರುಷತ್ವ ಪ್ರದರ್ಶನ. ನನ್ನ ತಂದೆಯ ಕಾಲದ ಗಂಡುತನವಲ್ಲ. ಈ ಹೊಸ ರೀತಿಯ ಪ್ರೇಮ ಪ್ರದರ್ಶನದಿಂದ ತಂದೆ–ಮಗನ ನಡುವಿನ ಜಗಳಗಳನ್ನು ತಡೆಹಿಡಿಯುವುದೇನೂ ಸಾಧ್ಯವಿಲ್ಲ ಎಂಬ ಸತ್ಯ ನನಗೀಗ ಅರಿವಾಗುತ್ತಿದೆ. ಆದರೆ, ಮುಂಬರುವ ಕಠಿಣ ದಿನಗಳಲ್ಲಿ, ನನ್ನ–ಮ್ಯಾಥ್ಯೂ ನಡುವಿನ ಈ ಪ್ರಕಟಪ್ರೇಮ ಸಂಬಂಧ ಒಂದು ಸಂತಸದ ಕಣಜವಾಗಿ, ಅಂತರಾಳದಲ್ಲಿ ಉಳಿಯುತ್ತದೆ ಎಂಬ ಆಸೆ ನನಗಿದೆ.

ನನ್ನದಾದ ಒಬ್ಬ ಮಗನನ್ನು ಪಡೆದಾಗ, ನಾನು, ತಂದೆ–ಮಕ್ಕಳ ನಡುವಿನ ಸಂಬಂಧವನ್ನು ಆಳವಾಗಿ ವಿಚಾರ ಮಾಡತೊಡಗಿದೆ. ನನ್ನ ತಂದೆಯನ್ನು ಸ್ಪಷ್ಟವಾಗಿ ನೋಡಿ, ಅರ್ಥ ಮಾಡಿಕೊಳ್ಳತೊಡಗಿದೆ. ‘ತಂದೆಯರಿಗೆ ತಾಳ್ಮೆಯಿಲ್ಲ’ ಎಂಬುದೇ ಎಲ್ಲಾ ಮಕ್ಕಳ ಸಾರ್ವತ್ರಿಕ ಆರೋಪಣೆ.

ಒಮ್ಮೆ ನಾನು ಆರು ವರ್ಷದವನಾಗಿದ್ದಾಗ ನನ್ನ ತಂದೆ, ಮಳೆಯಲ್ಲೇ ಮನೆಯ ಹಂಚು ಸರಿಪಡಿಸುತ್ತಿದ್ದರು. ನಾನೂ ಅವರಿಗೆ ಸಹಾಯ ಮಾಡುತ್ತೇನೆಂದು ಹಠ ಹಿಡಿದೆ. ನನ್ನ ತಂದೆ ಕೋಪದಿಂದ ಒಂದೇಟು ಕೊಟ್ಟರು. ಪ್ರಾಯಶಃ ಅವರು ಕೊಟ್ಟ ಒಂದೇ ಏಟು ಅದು. ಅನೇಕ ಬಾರಿ ಅವರು ಅದನ್ನು ನೆನಪಿಸಿಕೊಂಡು ಉಕ್ಕುಕ್ಕಿ ನಗುತ್ತಿದ್ದರು. ಆದರೆ ನನಗೆ ಮಾತ್ರ ಅದರಲ್ಲಿ ಅಂಥ ತಮಾಷೆ ಏನಿದೆ ಎಂದು ಅರಿವಾಗಿರಲಲ್ಲ.

ಈಗ ಮ್ಯಾಥ್ಯೂ, ನಮ್ಮ ತೋಟದ ಮರಗಳನ್ನು ಕಡಿಯುವಾಗ ನನಗೆ ಸಹಾಯ ಮಾಡುತ್ತೇನೆಂದು ಹಠ ಹಿಡಿಯುತ್ತಾನೆ. ನನ್ನ ಮನೆಗೆ ತಾನೂ ಬಣ್ಣ ಬಳಿಯುತ್ತೇನೆಂದು ಪೊಂಡುತನ ಮಾಡುತ್ತಾನೆ. ನಾನು ತಾಳ್ಮೆ ಕಳೆದುಕೊಳ್ಳದಿರಲು ಆದಷ್ಟೂ ಪ್ರಯತ್ನಿಸುವಾಗ, ಆ ದಿನಗಳನ್ನು ನನ್ನ ತಂದೆಯ ಕಣ್ಣುಗಳಿಂದ ನೋಡುತ್ತಿದ್ದೇನೆ.

ಅದೇ ಅನುಭವಗಳನ್ನು ಮತ್ತೆ ಹೊಂದುತ್ತಿರುವ ಈ ದಿನದವರೆಗೆ, ಅಂದರೆ ಮೂವತ್ತು ವರ್ಷಗಳು ನಾನು ನನ್ನ ತಂದೆಯ ಮೇಲೆ ಕೋಪಗೊಂಡಿರಬಲ್ಲೆ ಎಂದು ಯಾರು ತಾನೆ ಊಹಿಸಿದ್ದರು? ಬಹುಶಃ ಈಗ ನನ್ನ ಮಗನಿಗೆ ನನ್ನ ಮೇಲೆ ಕೋಪವಿರಬಹುದು!

ಎಲ್ಲಕ್ಕಿಂತ ಆಶ್ಚರ್ಯಕರವಾಗಿ, ‘ನಾನು ನನ್ನ ತಂದೆಯಂತಿಲ್ಲ’ ಎಂಬ ನನ್ನ ಹರೆಯದ ಮನವರಿಕೆಗಳಿಗೆ ವಿರುದ್ಧವಾಗಿ, ‘ನಾನು ನನ್ನ ತಂದೆಯಂತೆಯೇ ಇದ್ದೇನೆ–ಬಹುಮಟ್ಟಿಗೆ’ ಎಂಬ ವಾಸ್ತವತ್ವದ ಅರಿವಾಗಿದೆ ನನಗೆ! ನಾವಿಬ್ಬರೂ ಅದೇ ಹಾಸ್ಯಪ್ರಜ್ಞೆ, ಅದೇ ಹಠ, ಅದೇ ತಾಟಸ್ಥ್ಯ, ಅದೇ ಧ್ವನಿಯನ್ನು ಕೂಡ ಹಂಚಿಕೊಂಡಿದ್ದೇವೆ. ಈ ಸಾಮ್ಯವನ್ನು ನಾನೆಂದೂ ಅಪೇಕ್ಷಣೀಯ ಎಂದುಕೊಳ್ಳದೇ ಇದ್ದರೂ, ಇದೀಗ ನಾನು ಅವನ್ನು ಹೊಂದಿರುವುದರಿಂದಲೋ ಏನೋ ಇಷ್ಟಪಡುತ್ತಿದ್ದೇನೆ!

ಉದಾಹರಣೆಗೆ ನನ್ನ ತಂದೆ ಫೋನ್‌ನಲ್ಲಿ ಮಾತನಾಡುವಾಗ ‘ಹೆಲ್‌ಲೋ’ ಎನ್ನುವ ರೀತಿ—ಮೊದಲ ಅಕ್ಷರವನ್ನು ತುಂಬ ಒತ್ತಿ ಕಡೆಯ ಅಕ್ಷರವನ್ನು ಮೊಟಕಾಗಿಸುವುದು–ಅವರದ್ದೇ ವೈಶಿಷ್ಟ್ಯ. ನೀವು ನನಗೆ ಫೋನ್ ಮಾಡಿ

ನೋಡಿ. ನಾನು ಅದೇ ರೀತಿ 'ಹೆಲ್-ಲ್ಲೋ' ಎನ್ನುತ್ತೇನೆ, ಆ ನನ್ನ ತಂದೆಯಂತೆಯೇ. ಹಾಗೆ ನನ್ನ ಧ್ವನಿ ಹೊರ ಬಂದಾಗ ನನಗದೇನೋ ಒಂದು ರೀತಿಯ ಹಿತವೆನಿಸುತ್ತದೆ.

ತಂದೆಯ ಕಡೆಗೆ ಈ ನನ್ನ ಹೊಸ ಅನುಭೂತಿಯಿಂದ ನನಗೊಂದು ಬೆಚ್ಚಿಬೀಳುವಂಥ ಅರಿವುಂಟಾಗಿದೆ. ನಾನು ಈ ದಿನವೂ ನನ್ನ ತಂದೆಯನ್ನು ಕುರಿತು ನನ್ನ ಭಾವನೆಗಳನ್ನು ವಿಶದೀಕರಿಸುತ್ತಿದ್ದೇನೆಂದ ಮೇಲೆ, ನಾನು ಕಿರಿಯನಾಗಿದ್ದಾಗ ನನ್ನ ತಂದೆಯೂ ನನ್ನಂತೆಯೇ ತಮ್ಮ ತಂದೆಯೊಂದಿಗಿನ ಸಂಬಂಧಗಳನ್ನು ಅರ್ಥೈಸುತ್ತಿದ್ದಿರಬಹುದು. ಅವರು ತಮ್ಮ ತಂದೆಗೆ ಪ್ರತಿಕ್ರಿಯಿಸಿ ನನ್ನನ್ನು ಬೆಳೆಸಿರಬೇಕು. ಅಂದ ಮೇಲೆ ನನ್ನ ಮಗ ನನಗೆ ಮಾತ್ರ ಸಂಬಂಧಿಸಿಲ್ಲ. ಅವನು ನನ್ನ ತಂದೆಗೆ, ಅವರ ತಂದೆಗೆ ಮತ್ತು ಪ್ರಾಯಶಃ ಹ್ಯಾರಿಂಗ್ಟನ್ ವಂಶದ ತಂದೆಯರಿಗೆಲ್ಲ ಸಂಬಂಧಪಟ್ಟವನಾಗುತ್ತಾನೆ.

ತುಂಬ ಅಗಾಧವಾದ ಹಾಗೂ ತುಂಬ ಕ್ಷುಲ್ಲಕ ಕಾರಣಗಳಿಂದಾಗಿ ಹಲವು ವರ್ಷಗಳ ಹಿಂದೆ, ಕೆಲಕಾಲ ನಾನು, ನನ್ನ ತಂದೆ, ಒಬ್ಬರನ್ನೊಬ್ಬರು ನೋಡುತ್ತಿರಲಿಲ್ಲ; ಮಾತನಾಡುತ್ತಿರಲಿಲ್ಲ. ಕೊನೆಗೊಮ್ಮೆ ನಾನೇ ನನ್ನ ಹಠವನ್ನು ಬಿಟ್ಟುಕೊಟ್ಟು, ಅವರನ್ನು ಹಠಾತ್ತಾಗಿ ಭೇಟಿ ಮಾಡಿದೆ. ಎರಡು ದಿನಗಳವರೆಗೂ ನಾವು ಮಾತನಾಡಿದ್ದೇ ಆಡಿದ್ದು. ಇಬ್ಬರೂ ನಾವು ಆ ಐದು ವರ್ಷಗಳೂ ಏಕೆ ಭೇಟಿಯಾಗಲಿಲ್ಲ ಎಂಬುದರ ಬಗ್ಗೆ ಮಾತನಾಡಲಿಲ್ಲ. ಅನ್ಯೋನ್ಯತೆ ನಮ್ಮಿಬ್ಬರ ನಡುವೆ ಅಸಾಧ್ಯ ಎನಿಸಿ, ಖಿನ್ನನಾಗಿ ಹೊರಟು ಬಂದೆ.

ಎರಡು ದಿನಗಳ ಬಳಿಕ ನನ್ನ ತಂದೆ ನನಗೊಂದು ಕಾಗದ ಬರೆದರು. ಅವರು ಬರೆದ ಒಂದೇ ಕಾಗದವದು. ನಾನೊಬ್ಬ ಸಾಹಿತಿ. ಅವರಾದರೋ ಹಾಲು ಮಾರುವವರು. ಆದರೆ ಆ ಪತ್ರದ ಧ್ವನಿ, ಒತ್ತು, ಭಾವನೆ, ಸರಳತೆ ಎಲ್ಲವೂ ನನ್ನವೇ ಎನಿಸಿತು. "ನಾವು ಮತ್ತೆ ಭೇಟಿಯಾದಾಗ, ನಾನು ನಿನ್ನೊಂದಿಗೆ ಇನ್ನೂ ಹೆಚ್ಚು ವೇಳೆ ಕಳೆಯಲು ಪ್ರಯತ್ನಿಸುತ್ತೇನೆ. ಕಾಲ ಮಿಂಚಿ ಹೋಗುವವರೆಗೂ ನಾವಿದನ್ನು ಅರ್ಥಮಾಡಿಕೊಳ್ಳುವುದೇ ಇಲ್ಲವೇನೋ ಎಂದು ಬರೆದಿದ್ದರು.

ನಾನು ಹೊರಡುವ ಹೊತ್ತಿನಲ್ಲಿ ಬಾಗಿಲವರೆಗೆ ನಡೆದ ನನ್ನನ್ನು ತಡೆಯಬೇಕೆಂಬ ಅವರ ಇಚ್ಛೆ, ಕರೆದು, ಕುಳ್ಳಿರಿಸಿ ಮಾತನಾಡಿಸಬೇಕೆಂಬ ಅವರ ಅತ್ಯಾಕಾಂಕ್ಷೆ, ಮತ್ತೊಮ್ಮೆ ನೋಡುತ್ತೇನೋ ಇಲ್ಲವೋ ಎಂಬ ಶಂಕೆ—

ಆ ಕ್ಷಣದಲ್ಲಿ ನಾವು ಒಬ್ಬರಿಗೊಬ್ಬರು ಸಂಪೂರ್ಣ ಸೋತಿದ್ದೇವೆ ಎಂಬ ಭಾವನೆ ಮೂಡಿಸಿತ್ತು. "ಅಷ್ಟೊಂದು ಹಂಬಲ ಹೃದಯದಲ್ಲಿದ್ದರೂ ನಿನ್ನನ್ನು ಕಳುಹಿಸಿ ಬಿಟ್ಟೆ" ಎಂದು ಪತ್ರದಲ್ಲಿ ತೋಡಿಕೊಂಡಿದ್ದರು.

ನನ್ನ ತಂದೆಯ ಭಾವನೆಗಳೊಂದಿಗೆ ಅವರ ಸ್ನಾಯುಗಳು ಸ್ಪಂದಿಸಲಿಲ್ಲ ವೆಂದು ಈಗ ನನಗೆ ಅರಿವಾಗಿತ್ತು. ಈ ವಿಚಾರ ನಾನು ಎಂದೋ ಅರಿಯ ಬೇಕಿತ್ತು. ಹಲವು ದಿನಗಳ ಹಿಂದೆ ಮ್ಯಾಥ್ಯೂ ಕೇಳಿದ "ಮಕ್ಕಳು ದೊಡ್ಡವ ರಾದ ಮೇಲೆ ತಂದೆಯಂತಾಗುತ್ತಾರೆ ಅಲ್ಲವೇ?" ಇದು ತಿಳಿವಳಿಕೆಗಾಗಿ ಅವನ ಹೋರಾಟ. ನಾನು ಜಾಗರೂಕನಾಗಿ ಉತ್ತರಿಸಿದೆ. "ಇಲ್ಲ, ಮಕ್ಕಳು ತಂದೆ ಯನ್ನು ಕೆಲವು ವಿಧಗಳಲ್ಲಿ ಹೋಲಬಹುದೇ ಹೊರತು ತಮ್ಮ ತಂದೆಯೇ ಆಗಲಾರರು. ತಮ್ಮತನವನ್ನು ಬೆಳೆಸಿಕೊಳ್ಳಬೇಕು."

ಮ್ಯಾಥ್ಯೂ ಈ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳದೆ ಪ್ರತಿಭಟಿಸಿದ. "ಮಕ್ಕಳು ಬೆಳೆದ ಮೇಲೆ, ತಮ್ಮ ತಂದೆಯೇ ಆಗುತ್ತಾರೆ. ಅದು ಅವರಿಗೆ ಸಾಧ್ಯವಿದೆ." ನಾನು ವಾದಿಸಲಿಲ್ಲ. ಇದರಿಂದ ನನಗೆ ಒಂದು ರೀತಿ ಸಂತೋಷವೇ ಆಯಿತೆನ್ನಿ.

ಹಗಲೆಲ್ಲ ನನಗೆ ತುಂಬಾ ಆತಂಕ. ನಾನು ಮತ್ತು ಮ್ಯಾಥ್ಯೂ ಇನ್ನೇನು ಅರಿಜೋನಾ ಬಿಟ್ಟು ನನ್ನ ಮನೆಗೆ ಹಿಂತಿರುಗಬೇಕು. ಈ ಬಾರಿ ನಾನು ಹಿಂದೆಂದೂ ಮಾಡದ್ದನ್ನು ಮಾಡಬೇಕೆಂದು ನಿರ್ಧಾರ ಮಾಡಿದ್ದೇನೆ. ಪ್ರತಿಯೊಬ್ಬ ಮಗನ ಬಾಳಿನಲ್ಲೂ ಒಂದು ಕಾಲ ಇರುತ್ತದೆ. ಅದು 'ನಾನು ನನ್ನ ತಂದೆಯ ಮಗ' ಎಂದು ಪದೇ ಪದೇ ಸಾರುವ ಪ್ರತಿಧ್ವನಿಯನ್ನು ದೂರವಿರಿಸಿ ತನ್ನ ಜಂಭದ ಸ್ವಂತಿಕೆಯನ್ನು ಮೆರೆಯುವ ಕಾಲ. ಪುನಃ ಹಾಗೇ ಅವನ ಜೀವನದಲ್ಲಿ ಇನ್ನೊಂದು ಕಾಲವೂ ಬರುತ್ತದೆ—ನನಗೆ ಬಂದಂತೆ— 'ಈ ಪ್ರತಿಧ್ವನಿಗಳು ತಮ್ಮ ತಲಾಂತರಗಳನ್ನು ಮಸುಕಾಗಿಸಿ, ಒಂದಕ್ಕೊಂದು ಬೆಸೆದುಕೊಂಡಿವೆ' ಎಂದು ಅರ್ಥವಿಸುವ ಕಾಲ.

ಆದ್ದರಿಂದ ನಾನು, ನನ್ನ ಮಗ ಕದವನ್ನು ದಾಟಿ ಈಚೆ ಬಂದು ನಮ್ಮ ವಿಮಾನ ಹತ್ತುವ ಮುನ್ನ ನಾನು ಬಾಗಿ, ನನ್ನ ತಂದೆಯನ್ನು ಆಲಿಂಗಿಸಿ ಹೇಳಿದೆ "ನಾನು ನಿನ್ನನ್ನು ಪ್ರೀತಿಸುತ್ತೇನೆ. ಎಂದಿನಿಂದಲೂ ಪ್ರೀತಿಸುತ್ತಿದ್ದೇನೆ. ಇದು ನಿನಗೆ ತಿಳಿದರೆ ಸರಿ."

ಗೀತಾ ಸೀತಾರಾಮ್

'ಗ್ಯಾಟ್' ಒಪ್ಪಂದ ಮತ್ತು ಭಾರತ

ಕಳೆದ ಡಿಸೆಂಬರ್ ೧೫ ರಂದು ಜಿನೀವಾದಲ್ಲಿ ಐತಿಹಾಸಿಕ ಒಪ್ಪಂದವೊಂದಕ್ಕೆ ಪ್ರಪಂಚದ ನೂರಹದಿನೇಳು ದೇಶಗಳ ಪ್ರತಿನಿಧಿಗಳು ಒಪ್ಪಿಗೆ ನೀಡಿದರು. ಇನ್ನು ಮೇಲೆ ದೇಶ–ದೇಶಗಳ ನಡುವೆ ನಡೆಯುವ ವ್ಯಾಪಾರಗಳು ಇನ್ನಷ್ಟು ಮುಕ್ತ. ಅವಕ್ಕೆ ಇದುವರೆಗೂ ತಡೆಯಾಗಿದ್ದ ಸುಂಕದ ಕೋಟೆಯ ಗೋಡೆ ಇನ್ನಷ್ಟು ತಗ್ಗಿದೆ. ಒಂದು ದೇಶದ ಸರಕುಗಳು ಇನ್ನೊಂದು ದೇಶದಲ್ಲಿ ಸ್ಪರ್ಧಿಸದಂತೆ ಅಲ್ಲಿಯ ಕೈಗಾರಿಕೆಗಳಿಗೆ ಹಾಗೂ ಇತರ ಉತ್ಪಾದನೆಗಳಿಗೆ ನೀಡಿದ್ದ ರಕ್ಷಣೆ ಇನ್ನಷ್ಟು ಸಡಿಲವಾಗುತ್ತದೆ. ಹೀಗೆ ಮಾಡುವುದರಿಂದ ದೇಶ–ದೇಶಗಳ ನಡುವಣ ವ್ಯಾಪಾರ—ಎಂದರೆ ಅಂತರರಾಷ್ಟ್ರೀಯ ವ್ಯಾಪಾರ—ಇನ್ನಷ್ಟು ವೃದ್ಧಿ ಹೊಂದುತ್ತದೆ. ಇದೆಲ್ಲ ಒಳ್ಳೆಯದೇ ಎಂದು ಅನೇಕರು ಹೇಳುತ್ತಿದ್ದಾರೆ.

ಈ ಒಪ್ಪಂದ ಅಂತರರಾಷ್ಟ್ರೀಯವಾದರೂ, ಪ್ರಪಂಚದ ಮುಂದುವರಿದ, ಆರ್ಥಿಕವಾಗಿ ಬಲಿಷ್ಠವಾದ ದೇಶಗಳು ಅಷ್ಟೇನೂ ಮುಂದುವರಿಯದ, ಬಹುತೇಕ ದುರ್ಬಲ ಎನಿಸಿದ ದೇಶಗಳ ಮೇಲೆ ಹೇರಿದ್ದು. ಈ ಒಪ್ಪಂದದಿಂದ ಎಲ್ಲ ದೇಶಗಳಿಗೂ ಏಕರೀತಿಯಾಗಿ—ಎಂದರೆ ಸಾರ್ವತ್ರಿಕವಾಗಿ—ಅನುಕೂಲವೇನೂ ಆಗುವುದಿಲ್ಲ. ಮುಕ್ತವಾದ ಸ್ಪರ್ಧೆಯ ಹೆಸರಿನಲ್ಲಿ ದುರ್ಬಲ ದೇಶಗಳ ಉದ್ಯಮಗಳನ್ನು ಕೊಂದುಹಾಕಿ, ಅವು ಸದಾಕಾಲವೂ ಮುಂದುವರಿದ ದೇಶಗಳನ್ನು ಅವಲಂಬಿಸುವ ಸ್ಥಿತಿ ಏರ್ಪಡುತ್ತದೆ—ಎಂದು ಹೇಳುವವರೂ ಇದ್ದಾರೆ. ಈ ಒಪ್ಪಂದದ ವಿವಿಧ ಅಂಶಗಳನ್ನು ಕುರಿತಂತೆ ಜಿನೀವಾದಲ್ಲಿ ಸಂಧಾನ ನಡೆಯುತ್ತಿದ್ದಾಗ ಹಲವಾರು ದೇಶಗಳಲ್ಲಿ ಜನ ಇದನ್ನು ವಿರೋಧಿಸಿ ಉಗ್ರವಾಗಿ ಪ್ರತಿಭಟಿಸಿದರು; ನಮ್ಮ ದೇಶದ ಹಿತಗಳನ್ನು ಮಾರಿಕೊಳ್ಳುತ್ತಿದ್ದೀರಿ—ಎಂದು ಆಯಾ ಸರ್ಕಾರಗಳನ್ನು ಟೀಕಿಸಿದರು. ಆದರೆ ಒಂಟೊಂಟಿಯಾಗಿ ಈ ದೇಶಗಳು ಏನು ಮಾಡುವುದು ಸಾಧ್ಯ? ಇಂಥ ಒಪ್ಪಂದಗಳಿಂದ ಕೆಲವು ವಿಚಾರಗಳಲ್ಲಿ ಅನುಕೂಲವೂ ಇನ್ನು ಕೆಲವು ವಿಚಾರಗಳಲ್ಲಿ ತೊಂದರೆಯೂ ಕಷ್ಟನಷ್ಟಗಳೂ ಉಂಟಾಗುವುದು ಸಹಜ. ಒಟ್ಟಿನಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕುವುದು ಅನಿವಾರ್ಯವೆನಿಸಿದೆ—ಎಂದು ಈ ದೇಶಗಳ ಸರ್ಕಾರಗಳು ತಂತಮ್ಮ ನಿಲುವುಗಳನ್ನು ಸಮರ್ಥಿಸಿಕೊಂಡಿವೆ. ಆದರೂ ಅಸಮಾಧಾನ ವ್ಯಾಪಕವಾಗಿ ಮುಂದುವರಿದೇ ಇದೆ.

ಮಾತಿನ ಮನೆ

ಈಗ ಮಾಡಿಕೊಳ್ಳಲಾದ ಒಪ್ಪಂದಕ್ಕೆ ಒಂದು ದೀರ್ಘವಾದ ಹೆಸರುಂಟು. 'ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟ್ಯಾರಿಫ್' ಎಂದು ಇದನ್ನು ಕರೆಯಲಾಗಿದೆ. ಇದರಲ್ಲಿರುವ ಮುಖ್ಯವಾದ ಪದಗಳ ಮೊದಲ ಅಕ್ಷರಗಳನ್ನು ಕೂಡಿಸಿ 'ಜಿಎಟಿಟಿ' ಅಥವಾ 'ಗ್ಯಾಟ್' ಎಂದು ಸಂಕ್ಷೇಪವಾಗಿ ಕರೆಯುತ್ತಾರೆ. ಏಳು ವರ್ಷಗಳ ದೀರ್ಘವಾದ ಮಾತುಕತೆಯ ಅನಂತರ, ಕೊನೆಮೊದಲಿಲ್ಲ ವೆನಿಸುವಂತೆ ನಡೆದ ಸಂಧಾನಗಳಿಂದಾಗಿ, ಚೌಕಾಸಿಯಿಂದಾಗಿ, ಇದನ್ನು 'ಜನರಲ್ ಅಗ್ರಿಮೆಂಟ್ ಟು ಟಾಕ್ ಅಂಡ್ ಟಾಕ್' ಎಂದು ಹಾಸ್ಯವಾಗಿ ಅನೇಕರು ಕರೆಯುವುದುಂಟು. ಇಲ್ಲಿಯ ಮುಖ್ಯ ಪದಗಳ ಪ್ರಥಮಾಕ್ಷರಗಳನ್ನು ಕೂಡಿಸಿದರೂ ಜಿಎಟಿಟಿ ಅಥವಾ ಗ್ಯಾಟ್ ಎಂದೇ ಆಗುತ್ತದೆ. ಇದು ಹೇಗೂ ಇರಲಿ, ಕನ್ನಡದಲ್ಲಿ ಇದನ್ನು 'ವ್ಯಾಪಾರ ಮತ್ತು ಸುಂಕ ಕುರಿತ ಸಾರ್ವತ್ರಿಕ ಒಪ್ಪಂದ' ಎಂದು ಕರೆಯಬಹುದು. ಇಲ್ಲಿಯ ಮುಖ್ಯ ಪದಗಳ ಪ್ರಥಮ ಅಕ್ಷರ ಗಳನ್ನು ಕೂಡಿಸಿದರೆ 'ವ್ಯಾಸುಸಾಒ' ಎಂದಾಗುತ್ತದೆ. ನಾವು ಇಂಗ್ಲಿಷಿನ 'ಗ್ಯಾಟ್' ಎಂಬ ಸಂಕ್ಷೇಪವನ್ನೇ ಬಳಸುವುದು ಅನುಕೂಲಕರ ಎನಿಸುತ್ತದೆ ಅಥವಾ ಇದನ್ನು ಜಿನೀವಾ ಒಪ್ಪಂದ ಎಂದಾದರೂ ಹೇಳಬಹುದು. ಜಿನೀವಾ ಇಂಥ ಅನೇಕ ಅಂತರರಾಷ್ಟ್ರೀಯ ಒಪ್ಪಂದಗಳಿಗೆ—ಆ ಕುರಿತ ಮಾತುಕತೆಗಳಿಗೆ —ಆಶ್ರಯ ನೀಡಿರುವುದರಿಂದ, 'ಜಿನೀವಾ ಒಪ್ಪಂದ' ಎಂದರೆ ಅವುಗಳ ಪೈಕಿ ಯಾವುದು ಎಂಬ ಸಂದೇಹಕ್ಕೆ ಎಡೆಯುಂಟಾಗುತ್ತದೆ. 'ಜಿನೀವಾ ವ್ಯಾಪಾರ ಸುಂಕ ಒಪ್ಪಂದ' ಎಂದು ಕೂಡ ಹೇಳಬಹುದು ಎನಿಸುತ್ತದೆ.

ಮುಕ್ತ ಸ್ಪರ್ಧೆಯ ಆದರ್ಶ

ದೇಶಗಳ ನಡುವಣ ವ್ಯಾಪಾರಕ್ಕಿರುವ ಅಡೆತಡೆಗಳನ್ನು ತೆಗೆಯುವ ಸಂಧಾನ ಹಾಗೂ ಒಪ್ಪಂದ ಆದದ್ದು ಇದೇ ಮೊದಲಲ್ಲ. ವ್ಯಾಪಾರ ಮುಕ್ತವಾಗಿದ್ದರೆ ಚೆನ್ನ. ಅನಾವಶ್ಯಕವಾಗಿ ಪದಾರ್ಥಗಳ ಬೆಲೆ ಏರದೆ ಇರುತ್ತದೆ. ಅದರಿಂದ ಬಳಕೆ ದಾರರಿಗೆ, ಎಂದರೆ ಶ್ರೀಸಾಮಾನ್ಯರಿಗೆ, ಅನುಕೂಲ. ಎಲ್ಲ ದೇಶಗಳ ಪದಾರ್ಥ ಗಳೂ ಎಲ್ಲ ದೇಶಗಳಲ್ಲೂ ವ್ಯಾಪಾರಕ್ಕೆ ಬಂದರೆ ಆಗ ಈ ವಿವಿಧ ದೇಶಗಳ ಪದಾರ್ಥಗಳ ನಡುವೆ ಸ್ಪರ್ಧೆ ಏರ್ಪಡುತ್ತದೆ. ಗುಣ, ಬೆಲೆ ಎರಡೂ ಸಮರ್ಪಕ ವಾಗಿರುವಂತೆ, ಎಂದರೆ ಉತ್ತಮ ಗುಣಮಟ್ಟದ ಪದಾರ್ಥಗಳು ಸಾಧ್ಯವಿದ್ದಷ್ಟು ಕಡಮೆ ಬೆಲೆಗಳಲ್ಲಿ ಸಿಗುವಂತೆ, ಮಾಡಲು ಪ್ರತಿಯೊಂದು ಉದ್ಯಮವೂ

ಶ್ರಮಿಸುತ್ತದೆ. ಇಲ್ಲದಿದ್ದರೆ ಅದರ ಪದಾರ್ಥಗಳಿಗೆ ಬೇಡಿಕೆ ಇರುವುದಿಲ್ಲ. ಕಡಮೆ ಬೆಲೆಯ, ಹೆಚ್ಚಿನ ಗುಣಮಟ್ಟದ ಇತರ ಉದ್ಯಮಗಳ ಪದಾರ್ಥಗಳನ್ನೇ ಜನ ಕೊಳ್ಳುತ್ತಾರೆ. ಆದ್ದರಿಂದ ಈ ಸ್ಪರ್ಧೆಯಿಂದ ಸರ್ವತೋಮುಖ ಲಾಭ, ಹಿತ. ಇಡೀ ಪ್ರಪಂಚದ ಎಲ್ಲ ದೇಶಗಳೂ ಈ ಕಾಲ್ಚೆಂಡು ಪಂದ್ಯಾಟದಲ್ಲಿ ಮೇಲ್ಮೆ ಸಾಧಿಸಲೇ ಬೇಕು. ದಕ್ಷತೆಯ ಬೆಳವಣಿಗೆಗೆ ಇದು ಸಾಧಕ. ಎಲ್ಲ ದೇಶಗಳೂ ಎಲ್ಲ ಪದಾರ್ಥಗಳ ಉತ್ಪಾದನೆಯಲ್ಲೂ ಗರಿಷ್ಠ ದಕ್ಷತೆ ಸಾಧಿಸಲಾಗುವುದಿಲ್ಲ ಎಂಬುದು ನಿಜ. ಒಂದೊಂದು ದೇಶಕ್ಕೂ ಕೆಲಕೆಲವು ಪದಾರ್ಥಗಳ ಉತ್ಪಾದನೆಗೆ ನೈಸರ್ಗಿಕವಾಗಿ ಹಾಗೂ ಇತರ ಬಗೆಯ ಕೆಲವು ಅನುಕೂಲಗಳಿರುತ್ತವೆ. ಆ ಪದಾರ್ಥಗಳನ್ನು ಅದು ಅತ್ಯಂತ ಕಡಮೆ ವೆಚ್ಚದಲ್ಲಿ ಅತ್ಯಂತ ಹೆಚ್ಚಿನ ಗುಣಮಟ್ಟದಲ್ಲಿ ಉತ್ಪಾದಿಸುವುದು ಸಾಧ್ಯ. ಹೀಗಾಗಿ, ಅಂತಿಮವಾಗಿ ಒಂದೊಂದು ದೇಶವೂ ಕೆಲಕೆಲವು ಪದಾರ್ಥಗಳನ್ನು ಉತ್ಪಾದಿಸುವುದಕ್ಕೆ ವಿಶೇಷ ಗಮನ ನೀಡಬೇಕಾಗುತ್ತದೆ. ಉಳಿದ ಪದಾರ್ಥಗಳ ತಯಾರಿಕೆಯಲ್ಲಿ ಬೇರೆ ಯಾವ ಯಾವ ದೇಶಗಳಿಗೆ ಗರಿಷ್ಠ ಅನುಕೂಲತೆಗಳಿವೆಯೋ ಆಯಾ ದೇಶಗಳಿಗೇ ಅವನ್ನು ಬಿಟ್ಟುಕೊಡುವ ಪ್ರವೃತ್ತಿ ಬೆಳೆಯುತ್ತದೆ. ಹೀಗೆ ಒಂದು ರೀತಿಯಲ್ಲಿ ಜಾಗತಿಕ ಮಟ್ಟದಲ್ಲಿ ವಿವಿಧ ಉದ್ಯಮಗಳು ವಿವಿಧ ದೇಶಗಳಲ್ಲಿ ಹಂಚಿಕೆಯಾಗುತ್ತವೆ. ಒಂದು ದೇಶದ ಅರಕೆ ಇನ್ನೊಂದು ದೇಶದಿಂದ ಪೂರೈಕೆಯಾಗುತ್ತದೆ. ಪರಸ್ಪರ ಸೌಹಾರ್ದ, ಪರಸ್ಪರಾವಲಂಬನೆ, ಶ್ರಮವಿಭಜನೆ, ವಿಶೇಷೀಕರಣ—ಇವು ಬೆಳೆಯುತ್ತವೆ. ಇದು ಮುಕ್ತ ವ್ಯಾಪಾರದ ಆದರ್ಶಸ್ಥಿತಿ. ಇಂಥ ಸ್ಥಿತಿಯ ಸ್ಥಾಪನೆಗಾಗಿ ಪ್ರಪಂಚದ ದೇಶಗಳು ಕಳೆದ ಸುಮಾರು ಐವತ್ತು ವರ್ಷಗಳಿಂದ ಪ್ರಯತ್ನ ನಡೆಸುತ್ತಲೇ ಬರುತ್ತಿವೆ.

ಸಂಧಾನ ಪರಂಪರೆ

ಎರಡನೆಯ ಮಹಾಯುದ್ಧಕ್ಕೆ ಹಿಂದೆ ಪ್ರಪಂಚದ ಅನೇಕ ದೇಶಗಳು ತಮ್ಮ ಅರ್ಥವ್ಯವಸ್ಥೆಯ ಸುತ್ತ ಎತ್ತರದ ಗೋಡೆಗಳನ್ನು ಕಟ್ಟಿಕೊಂಡಿದ್ದುವು. ಅನ್ಯ ದೇಶಗಳ ಸರಕುಗಳು ಬಂದು ತಮ್ಮ ಸರಕುಗಳೊಂದಿಗೆ ಸ್ಪರ್ಧೆ ನಡಸದಂತೆ ಎಚ್ಚರಿಕೆ ವಹಿಸುತ್ತಿದ್ದುವು. ತಮ್ಮ ಕೈಗಾರಿಕೆಗಳಿಗೆ ನಾನಾ ಬಗೆಯ ಉತ್ತೇಜನಗಳನ್ನು ನೀಡುತ್ತಿದ್ದುವು. ಹೀಗೆ ಪ್ರತಿಯೊಂದು ದೇಶವೂ ಇನ್ನೊಂದು ದೇಶವನ್ನು ದೂರ ಇಡುವ ಪ್ರವೃತ್ತಿ ಬೆಳಸಿಕೊಂಡಿತ್ತು. ಸ್ವಾರ್ಥವೇ ಪ್ರಧಾನವಾಗಿತ್ತು. ಇದು ಅಂತಿಮವಾಗಿ ದ್ವೇಷಕ್ಕೂ ಯುದ್ಧಕ್ಕೂ

ಕಾರಣವಾಗಿತ್ತು. ಇಂಥ ಪರಿಸ್ಥಿತಿಯನ್ನು ತಪ್ಪಿಸಿ ಆರ್ಥಿಕವಾಗಿ ಇಡೀ ಪ್ರಪಂಚವನ್ನು ಒಂದು ಘಟಕವಾಗಿ ಪರಿಗಣಿಸುವ, ಮುಕ್ತ ವಾತಾವರಣವನ್ನು ಕಲ್ಪಿಸುವ ಕನಸನ್ನು ಅಂದು ಯುದ್ಧನಿರತವಾಗಿದ್ದ ದೇಶಗಳ ನೇತಾರರು ಕಟ್ಟಿಕೊಂಡಿದ್ದರು. ಅಂತರರಾಷ್ಟ್ರೀಯ ವ್ಯಾಪಾರ ಸಂಘ ಎಂಬ ಒಂದು ವ್ಯವಸ್ಥೆಯನ್ನು ರೂಪಿಸಬೇಕೆಂಬುದಾಗಿ ೧೯೪೭ ರಲ್ಲಿ ತೀರ್ಮಾನಿಸಲಾಗಿತ್ತು.

ಆದರೆ ಪ್ರತಿಯೊಂದು ದೇಶದ ಸುತ್ತ ಇದ್ದ ಸುಂಕ ಮತ್ತು ಇತರ ನಿರ್ಬಂಧಗಳ ಗೋಡೆಗಳನ್ನು ಹೊಡೆದು ಕೆಡಹುವುದು ಅಷ್ಟು ಸುಲಭವೆಂದು ಆಗ ಅನಿಸಲಿಲ್ಲ. ಒಂದೇ ಬಾರಿಗೆ ಎಲ್ಲ ಅಡೆತಡೆಗಳನ್ನು ತೆಗೆದುಹಾಕಿದರೆ ಬೀಸುವ ಬಲವಾದ ಗಾಳಿಯಿಂದ ಅನೇಕ ದೇಶಗಳ ಆರ್ಥಿಕ ವ್ಯವಸ್ಥೆಗಳು ಉರುಳಿಯೇ ಹೋಗುತ್ತವೆ. ಬಲಿಷ್ಠ ದೇಶಗಳ ಉದ್ಯಮಗಳು ಎಲ್ಲೆಲ್ಲೂ ಮೇಲುಗೈ ಸ್ಥಾಪಿಸುತ್ತವೆ. ಈ ಬಲಿಷ್ಠ ದೇಶಗಳೇ ಒಮ್ಮೆಗೇ ತಮ್ಮ ಕೆಲವು ಕಟ್ಟುಪಾಡುಗಳನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಹೀಗಾಗಿ, ಯಾವ ಯಾವ ಪದಾರ್ಥದ ಮೇಲಣ ಆಮದು ಸುಂಕವನ್ನು ಎಷ್ಟೆಷ್ಟು ತೆಗೆಯಬಹುದು, ಎಷ್ಟರಮಟ್ಟಿಗೆ ಮುಕ್ತವಾದ ಪರಿಸ್ಥಿತಿಯನ್ನೇರ್ಪಡಿಸಬಹುದು ಎಂಬ ವಿಚಾರವಾಗಿ ಹಲವು ದೇಶಗಳ ನಡುವೆ ಸಂಧಾನಗಳು ನಡೆದುವು. ಈ ಬಗ್ಗೆ ಮೊದಲನೆಯ ಸಂಧಾನ ನಡೆದದ್ದು ೧೯೪೭ ರಲ್ಲಿ. ಇದರಲ್ಲಿ ಭಾಗವಹಿಸಿದ್ದ ದೇಶಗಳು ಇಪ್ಪತ್ಮೂರು. ಒಟ್ಟು ೪೫,೦೦೦ ಪದಾರ್ಥಗಳ ಮೇಲೆ ಸುಂಕವನ್ನು ಇಳಿಸಲು ಈ ದೇಶಗಳು ಒಪ್ಪಂದ ಮಾಡಿಕೊಂಡುವು. ಇವುಗಳ ಒಟ್ಟು ವ್ಯಾಪಾರಮೌಲ್ಯ ವಾರ್ಷಿಕವಾಗಿ ಸುಮಾರು ೧,೦೦೦ ಕೋಟಿ ಡಾಲರ್. ಈ ಒಪ್ಪಂದವನ್ನು ಜಾರಿಗೆ ಕೊಡುವ ಸಾಧನವಾಗಿ ಜಿನೀವಾದಲ್ಲಿ ಒಂದು ಸಂಸ್ಥೆ, ಸಂಘಟನೆ, ರೂಪಿತವಾಯಿತು. ಅದೇ ಗ್ಯಾಟ್.

ಅಂದಿನಿಂದ ಹಲವು ವರ್ಷಗಳಿಗೆ ಒಮ್ಮೆ ಪ್ರಪಂಚದ ದೇಶಗಳ ನಡುವೆ ಈ ಬಗ್ಗೆ ಸಂಧಾನಗಳು ನಡೆಯುತ್ತಲೇ ಬಂದಿವೆ. ಒಂದೊಂದು ಸುತ್ತಿನಲ್ಲೂ ಹೆಚ್ಚು ಹೆಚ್ಚು ದೇಶಗಳು ಈ ಸಂಧಾನಗಳಲ್ಲಿ ಸೇರುತ್ತಿವೆ. ಹೆಚ್ಚು ಹೆಚ್ಚು ಪದಾರ್ಥಗಳ ಸುಂಕಗಳನ್ನು ತಗ್ಗಿಸಲಾಗುತ್ತಿದೆ, ಹಿಂದೆ ಇಳಿಸಿದ್ದ ಸುಂಕಗಳನ್ನು ಇನ್ನಷ್ಟು ಇಳಿಸಲಾಗುತ್ತಿದೆ. ಮೊದಲನೆಯ ಸುತ್ತಿನ ಮಾತುಕತೆ (೧೯೪೭) ಹವಾನಾದಲ್ಲಿ ಆರಂಭವಾದರೆ, ಎರಡನೆಯ ಸುತ್ತು ೧೯೪೯ ರಲ್ಲಿ ಫ್ರಾನ್ಸಿನ ಅನೆಸಿ ಎಂಬಲ್ಲೂ, ಮೂರನೆಯದು (೧೯೫೦-೫೧) ಬ್ರಿಟನ್ನಿನ ಟಾರ್ಕ್ವೇ ಎಂಬಲ್ಲೂ, ನಾಲ್ಕನೆಯದು (೧೯೫೫-೫೬) ಜಿನೀವಾದಲ್ಲೂ, ಐದನೆಯದೂ (೧೯೬೦-೬೨)

ಜಿನೀವಾದಲ್ಲೂ, ಆರನೆಯದು (ಕೆನೆಡಿ ಸುತ್ತು) ಕೂಡ ಜಿನೀವಾದಲ್ಲೂ (೧೯೬೪-೬೭), ಏಳನೆಯ ಸುತ್ತು (೧೯೭೩-೭೯) ಟೋಕಿಯೋದಲ್ಲೂ ಆರಂಭವಾದುವು. ಪ್ರತಿಯೊಂದು ಸುತ್ತಿನಲ್ಲೂ ಚೌಕಾಸಿ ಬಹಳಷ್ಟು ನಡೆದು ಒಂದು ರೀತಿಯ ರಾಜಿ ನ್ಯಾಯ ಆಗಿರುವುದನ್ನು ಕಾಣಬಹುದು. ಮುಂದೆ ಮುಂದೆ ನಡೆದಂತೆ ಸಂಧಾನ ಹೆಚ್ಚು ಹೆಚ್ಚು ತೊಡಕಾಗುತ್ತಿದೆ, ಅವರ ಅವಧಿಯೂ ಹೆಚ್ಚುತ್ತಿದೆ. ಇದೀಗ ಮುಕ್ತಾಯವಾದ ಎಂಟನೆಯ ಸುತ್ತಿನ ಸಂಧಾನ ಆರಂಭವಾದದ್ದು ಯುರುಗ್ವೇ ದೇಶದ ಪೆಂಟ್ ಡೆಲ್ ಎಸ್ಟೇ ಎಂಬಲ್ಲಿ— ೧೯೮೬ ರಲ್ಲಿ. ಇದು ಯುರುಗ್ವೇ ಸುತ್ತಿನ ಮಾತುಕತೆ ಎಂದೇ ಹೆಸರಾಗಿದೆ. ಇದು ಅತಿ ದೀರ್ಘಕಾಲ ಎಳೆದಾಡಿತು. ಹೆಚ್ಚಿನ ಪದಾರ್ಥಗಳೂ ಸೇವೆಗಳೂ ಸಂಧಾನಕ್ಕೆ ಒಳಪಟ್ಟುವು. ಹೆಚ್ಚು ದೇಶಗಳೂ ಭಾಗವಹಿಸಿದುವು. ಆರಂಭದಲ್ಲಿ ಇವರಲ್ಲಿ ೧೦೫ ದೇಶಗಳಿದ್ದುವು. ಸಂಧಾನ ಮುಗಿಯುವ ವೇಳೆಗೆ ೧೧೭ ದೇಶಗಳು ಸೇರಿದ್ದುವು. ಹೆಚ್ಚು ಮುಕ್ತವಾದ, ಬಹುಮುಖವಾದ ವ್ಯಾಪಾರ ಸಂವರ್ಧನೆ ಇವರಿಂದ ಸಾಧ್ಯವಾಗಿದೆ ಎಂದು ವಾದಿಸಲಾಗಿದೆ. ಈ ಸಂಧಾನದ ಫಲವಾಗಿ ಒಪ್ಪಂದಕ್ಕೆ ಒಳಪಟ್ಟ ಒಟ್ಟು ವ್ಯಾಪಾರದ ಮೌಲ್ಯ ೬,೦೦೦ ಟ್ರಿಲಿಯನ್ ಡಾಲರ್‌ಗಳು (ಹತ್ತು ಲಕ್ಷದ ಹತ್ತು ಲಕ್ಷದ ಹತ್ತು ಲಕ್ಷವನ್ನು ಒಂದು ಟ್ರಿಲಿಯನ್ ಎನ್ನುತ್ತಾರೆ). ರೂಪಾಯಿಯ ಲೆಕ್ಕದಲ್ಲಿ ಇದು ಎರಡು ಕೋಟಿ ಕೋಟಿ ರೂಪಾಯಿಗಳಾಗುತ್ತದೆ! ಈ ಒಪ್ಪಂದದಿಂದ ವಿಶ್ವದ ವ್ಯಾಪಾರ ವಾರ್ಷಿಕವಾಗಿ ೨೭,೦೦೦ ಕೋಟಿ ಡಾಲರುಗಳಷ್ಟು ಹೆಚ್ಚಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇವರಿಂದ ಸಂಪತ್ತು ಬೆಳೆಯುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಉದ್ಯೋಗಗಳ ಸೃಷ್ಟಿಯಾಗುತ್ತದೆ, ವರಮಾನ ಬೆಳೆಯುತ್ತದೆ. ಈ ಒಪ್ಪಂದ ಪೂರ್ಣವಾಗಿ ಜಾರಿಗೆ ಬಂದ ಮೇಲೆ (ಇನ್ನು ಹತ್ತು ವರ್ಷಗಳಲ್ಲಿ) ಪ್ರಪಂಚದ ಒಟ್ಟು ಸ್ಥೂಲ ರಾಷ್ಟ್ರೀಯ ಉತ್ಪನ್ನ ಶೇ॥ ೧ ರಷ್ಟು ಹೆಚ್ಚಾಗಿ ಬೆಳೆಯುತ್ತದೆ. ಎಂದರೆ ಸಾರ್ವತ್ರಿಕ ಸಂಪತ್ಸಮೃದ್ಧಿಯಲ್ಲವೆ? ಇದೇ ರೀತಿ ಮುನ್ನಡೆದರೆ ಸ್ವರ್ಗಕ್ಕೆ ಮೂರೇ ಗೇಣು ಎಂಬ ಸ್ಥಿತಿ ಉಂಟಾಗಬಹುದು! ಸುಖ ನೆಮ್ಮದಿಗೆ ಇನ್ನೇನು ಬೇಕು?

ಬೌದ್ಧಿಕ ಆಸ್ತಿ ಹಕ್ಕು

ಹಾಗಾದರೆ ಏಕೆ ಈ ಒಪ್ಪಂದದ ಬಗೆ ಪ್ರಪಂಚದ ಅನೇಕ ದೇಶಗಳಲ್ಲಿ ಹುಯಿಲೆದ್ದಿದೆ? ಎಂದು ವಿಸ್ಮಯಪಡಬಹುದು. ಕೆಲವರಿಗೆ ಈ ಒಪ್ಪಂದ

ಆಪ್ಯಾಯಮಾನವಾಗಿದ್ದರೆ ಇನ್ನು ಕೆಲವರಿಗೆ ಅವಮಾನಕರ. ಒಬ್ಬರಿಗೆ ಅಮೃತವೆನಿಸಿದ್ದು ಇನ್ನೊಬ್ಬರಿಗೆ ವಿಷವೆನಿಸಬಹುದು. ಪ್ರಪಂಚದಲ್ಲಿ ಎಲ್ಲ ದೇಶಗಳೂ ಒಂದೇ ಸಮನಾಗಿ ಅಭಿವೃದ್ಧಿ ಹೊಂದಿಲ್ಲ. ಕೆಲವು ದೇಶಗಳು ಮುಂದುವರಿದಿವೆ. ಬಲಿಷ್ಠವಾದ ಆ ದೇಶಗಳು ತಮ್ಮ ಹಿತಗಳಿಗೆ ಧಕ್ಕೆಬಾರದ ರೀತಿ, ತಮಗೆ ಹೆಚ್ಚು ಅನುಕೂಲವಾಗುವ ಹಾಗೆ, ಒಪ್ಪಂದವನ್ನು ರೂಪಿಸಿ ಬಲವಂತವಾಗಿ ಅವನ್ನು ತಮ್ಮಷ್ಟು ಅದೃಷ್ಟಶಾಲಿಗಳಲ್ಲದ ದೇಶಗಳ ಮೇಲೆ ಹೊರಿಸಿವೆ. ವಿಶ್ವವ್ಯಾಪಾರವನ್ನು ಇನ್ನಷ್ಟು ಮುಕ್ತಗೊಳಿಸುವ, ಅಬಾಧಿತವಾಗಿ ಮಾಡುವ ಉದ್ದೇಶದಿಂದಲೇ ಅವು ಪ್ರತಿಯೊಂದು ಅಂಶವನ್ನೂ ತಮಗೆ ಬೇಕಾದಂತೆ ತಿರುಚಿಕೊಂಡಿವೆ. ಹೀಗಾಗಿ, ಮುಕ್ತ ವ್ಯಾಪಾರ ಸಾಧನೆಯ ಉದ್ದೇಶ ಒಳ್ಳೆಯದೆಂದು ಒಪ್ಪಿದರೂ, ವಾಸ್ತವವಾಗಿ ಇದನ್ನು ಜಾರಿಗೆ ಕೊಡುವಲ್ಲಿ ನಾನಾ ಸೊಟ್ಟುಪಟ್ಟುಗಳಾಗಿವೆ, ಅನ್ಯಾಯಗಳೂ ಆಗಿವೆ.

ಯುರುಗ್ವೇ ಸುತ್ತಿನ ಸಂಧಾನಗಳಲ್ಲಿ ಇದುವರೆಗೆ ಸೇರದಿದ್ದ ಕೆಲವು ವಿಷಯಗಳನ್ನು ಸೇರಿಸಿದ್ದು ವಿಶೇಷವಾದ ಆತಂಕಕ್ಕೂ ಬಹಳಷ್ಟು ವಾಗ್ಯುದ್ಧಕ್ಕೂ ಕೊಸರಾಟಕ್ಕೂ ಕಾರಣವಾಯಿತೆನ್ನಬೇಕು. 'ವ್ಯಾಪಾರ' ಎಂದಾಗ ನಮ್ಮ ಮನಸ್ಸಿನಲ್ಲಿ ಬರುವ ಚಿತ್ರವೆಂದರೆ ಸರಕುಗಳ ಮಾರಾಟ, ಕೊಳ್ಳಿಕೆ. ಇವುಗಳ ಕ್ರಯ-ವಿಕ್ರಯಕ್ಕೆ ಅಡೆತಡೆಗಳಿಲ್ಲದಂಥ ಸ್ಥಿತಿ ಏರ್ಪಡಿಸುವುದು ಗ್ಯಾಟ್ ಸಂಘಟನೆಯ ಮೂಲ ಉದ್ದೇಶ. ಆದರೆ ಈ ಬಾರಿ ಸರಕುಗಳಲ್ಲದ, ಮೂರ್ತವಲ್ಲದ, ಎಂದರೆ ಕಣ್ಣಿಗೆ ಕಾಣಿಸದ ಎರಡು ಅಂಶಗಳನ್ನು ಅಮೆರಿಕಾ ಸೇರಿಸಿತು. ಈಗಿನದು ತಂತ್ರಜ್ಞಾನದ ಯುಗ ಎಂಬುದನ್ನು ನಾವೆಲ್ಲರೂ ಬಲ್ಲೆವು. ಆಧುನಿಕ ಉತ್ಪಾದನೆಗೆ ಯಂತ್ರ ಎಷ್ಟು ಮುಖ್ಯವೋ, ತಂತ್ರಜ್ಞಾನವೂ ಅಷ್ಟೇ ಮುಖ್ಯ. ಇಂದು ಮಾರುಕಟ್ಟೆಯಲ್ಲಿ ಮಾರಾಟಕ್ಕೆ ಬಂದಿರುವ ಅಸಂಖ್ಯಾತ ಸರಕುಗಳ ತಯಾರಿಕೆಯ ವಿಧಾನಗಳನ್ನು ಕಂಡುಹಿಡಿದ ವಿಜ್ಞಾನಿಗಳೂ ತಂತ್ರಜ್ಞಾನಿಗಳೂ ಇದ್ದಾರೆ. ಅಸಂಖ್ಯಾತ ಔಷಧಗಳು, ರಾಸಾಯನಿಕಗಳು, ಸುಧಾರಿತ ತಳಿಯ ಬೀಜಗಳು ಮುಂತಾದವೆಲ್ಲ ಇವರ ದೀರ್ಘಕಾಲದ ಸಂಶೋಧನೆಯ ಫಲಗಳು. ತಮ್ಮ ದೀರ್ಘಶ್ರಮದ ಹಾಗೂ ಬುದ್ಧಿಶಕ್ತಿಯ ಫಲದ ಲಾಭ ತಮಗೇ ದೊರಕಬೇಕೆಂದು ಇವರು ಬಯಸುವುದು ಸಹಜ. ಆದ್ದರಿಂದ ಇವರು ಈ ಸರಕುಗಳ ಉತ್ಪಾದನ ವಿಧಾನಗಳನ್ನು ತಮ್ಮ ಹಕ್ಕುಗಳೆಂದು ಭಾವಿಸಿ, ಈ ವಿಧಾನಗಳ ಹಾಗೂ ಈ ಉತ್ಪನ್ನಗಳ ಸ್ವಾಮ್ಯ ಹಕ್ಕು (ಪೇಟೆಂಟ್) ಪಡೆದುಕೊಂಡಿರುತ್ತಾರೆ. ಈ ಪೇಟೆಂಟನ್ನು ಇವರು ಇತರರಿಗೆ ಮಾರಬಹುದು. ಇವನ್ನು

ಉತ್ಪಾದಿಸುವವರು ತಮ್ಮ ಹೆಸರಿಗೆ ಇದನ್ನು ಪಡೆದುಕೊಂಡಿರಬಹುದು. ಈ ಬಗೆಯ ಹಕ್ಕನ್ನು ಎಲ್ಲ ದೇಶಗಳೂ ಸಾಮಾನ್ಯವಾಗಿ ಮಾನ್ಯಮಾಡಿವೆ. ಇದಕ್ಕೆ ಅನುಗುಣವಾಗಿ ಕಾನೂನು ರಚಿಸಿಕೊಂಡಿವೆ. ಈ ಪದಾರ್ಥಗಳ ಉತ್ಪಾದನೆಗೆ ಸಂಬಂಧಪಟ್ಟ ಹಕ್ಕುದಾರರೊಡನೆ ಒಪ್ಪಂದ ಮಾಡಿಕೊಂಡು, ನಿಗದಿಯಾದ ಪ್ರತಿಫಲ ನೀಡಿ ಅಧಿಕಾರ ಪಡೆದುಕೊಳ್ಳಬೇಕಾಗುತ್ತದೆ.

ಆದ್ದರಿಂದ ಈ ಹಕ್ಕನ್ನೂ—ಎಂದರೆ ಬೌದ್ಧಿಕ ಆಸ್ತಿ ಹಕ್ಕನ್ನೂ—ಒಂದು ಪದಾರ್ಥವೆಂದು ಪರಿಗಣಿಸಿ, ಇವರ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಸಂಬಂಧಿಸಿದಂತೆ ಸಾರ್ವತ್ರಿಕ ಒಪ್ಪಂದ ಮಾಡಿಕೊಳ್ಳಬೇಕು. ಇದನ್ನೂ ಗ್ಯಾಟ್ ಸಂಧಾನಗಳಲ್ಲಿ ಸೇರಿಸಬೇಕು ಎಂದು ಮುಂದುವರಿದ ದೇಶಗಳು ವಾದಿಸಿವೆ. ಮುಖ್ಯವಾಗಿ ಅಮೆರಿಕದ ವಾದವಿದು. ಅಂತರರಾಷ್ಟ್ರೀಯ ಒಡಂಬಡಿಕೆಗೆ ಅನುಗುಣವಾಗಿ ಎಲ್ಲ ದೇಶಗಳೂ ತಂತಮ್ಮ ಸ್ವಾಮ್ಯ ಹಕ್ಕು ಕಾನೂನುಗಳನ್ನು ಬದಲಿಸಿಕೊಳ್ಳಬೇಕು, ಬೌದ್ಧಿಕ ಆಸ್ತಿ ಹಕ್ಕನ್ನು ಇತರರು ಕದಿಯದಂತೆ ತಡೆಹಾಕಬೇಕು. ಇಲ್ಲದಿದ್ದರೆ ನಮಗೆ ಬರಬೇಕಾದ ಹಣ ಬಾರದೆ ನಮಗೆ ಅನ್ಯಾಯವಾಗುತ್ತದೆ ಎಂಬುದು ಅಮೆರಿಕದ ವಾದ.

ಭಾರತದ ಸ್ವಾಮ್ಯ ಹಕ್ಕು ಕಾನೂನಿನ ಪ್ರಕಾರ ಯಾವುದೇ ಪದಾರ್ಥದ ತಯಾರಿಕೆಯ ವಿಧಾನ ಅಥವಾ ಪ್ರಕ್ರಿಯೆಯನ್ನು ಕಂಡುಹಿಡಿದವನ ಅಥವಾ ಅದನ್ನು ಅವನಿಂದ ಕೊಂಡುಕೊಂಡವನ ಹಕ್ಕಿಗೆ ಮಾನ್ಯತೆಯುಂಟು. ಅದನ್ನು ತಯಾರಿಕೆ ಮಾಡುವ ಪ್ರಕ್ರಿಯೆಯ ಅಧಿಕಾರವನ್ನು ಪಡೆದುಕೊಂಡ ಮೇಲೆ ಅದೇ ಪದಾರ್ಥವನ್ನು ಬೇರೆ ವಿಧಾನದಿಂದ ತಯಾರಿಸುವ ಹಕ್ಕು ಭಾರತಕ್ಕೆ ಇರುತ್ತದೆ. ಇದಕ್ಕಾಗಿ ಸಂಶೋಧನೆ ನಡಸಬಹುದು ಮತ್ತು ಈ ಪದಾರ್ಥವನ್ನು ತನಗೆ ಇಷ್ಟಬಂದ ಪರಿಮಾಣದಲ್ಲಿ ತಯಾರಿಸಿ ತನಗೆ ಯುಕ್ತವೆನಿಸಿದ ಬೆಲೆಯಲ್ಲಿ, ಇಲ್ಲವೇ ಉಚಿತವಾಗಿ, ವಿತರಿಸಲೂ ಅಧಿಕಾರವುಂಟು. ಪದಾರ್ಥದ ಉತ್ಪಾದನೆಯ ಪ್ರಕ್ರಿಯೆಯ ಮೇಲಿನ ಸ್ವಾಮ್ಯದ ಅವಧಿ ಸಾಮಾನ್ಯವಾಗಿ ಹತ್ತು ವರ್ಷ. ಈ ಸ್ಪರ್ಧೆಯ ಜಗತ್ತಿನಲ್ಲಿ ಯಾವುದೇ ಉತ್ಪಾದನ ವಿಧಾನ ಬಲುಬೇಗ ಹಳತಾಗಿ ಹೋಗುತ್ತಿರುತ್ತದೆ, ಹೊಸಹೊಸ ವಿಧಾನಗಳೂ ಹೊಸಹೊಸ ಪದಾರ್ಥಗಳೂ ಬರುತ್ತಿವೆ. ಆದ್ದರಿಂದ ಹತ್ತು ವರ್ಷಗಳ ಹಕ್ಕಿನ ಅವಧಿಯೂ ದೀರ್ಘವೇ. ಅಂತೂ ಹತ್ತು ವರ್ಷಗಳಾದ ಮೇಲೆ ಸ್ವಾಮ್ಯ ಹಕ್ಕು ಇರುವುದಿಲ್ಲ. ಏನೇ ಇರಲಿ, ವ್ಯಾಪಾರ ಮತ್ತು ಸುಂಕ ಕುರಿತ ಸಾರ್ವತ್ರಿಕ ಒಪ್ಪಂದದ ಕಕ್ಷೆಯೊಳಕ್ಕೆ ಇದನ್ನು ತರುವ ಅಗತ್ಯವಿಲ್ಲ—ಎಂಬುದು ಭಾರತ ಮತ್ತು ಇತರ

ಹಲವು ಅಭಿವೃದ್ಧಿಶೀಲ ದೇಶಗಳ ವಾದವಾಗಿತ್ತು. ಆದರೆ ಯಾವುದೇ ಪದಾರ್ಥದ ಮೇಲೆ ಸ್ವಾಮ್ಯ ಪಡೆದುಕೊಂಡಿರುವವರ ಅನುಮತಿಯಿಲ್ಲದೆ ಅದನ್ನು ಯಾವ ರೀತಿಯಿಂದಲೂ ಉತ್ಪಾದಿಸಕೂಡದು. ಎಲ್ಲ ವಿಚಾರದಲ್ಲೂ ಅವರದೇ ಕೊನೆ ಮಾತು. ಅಲ್ಲದೆ ಈ ಪೇಟೆಂಟ್ ಹಕ್ಕು ಇಪ್ಪತ್ತು ವರ್ಷಕಾಲ ಮುಂದುವರಿಯ ತಕ್ಕದ್ದು—ಎಂದು ಅಮೆರಿಕ ವಾದಿಸಿತು.

ಹಣಹೂಡಿಕೆ ಅವಕಾಶ

ವ್ಯಾಪಾರ ಮತ್ತು ಸುಂಕ ಕುರಿತ ಸಾರ್ವತ್ರಿಕ ಒಪ್ಪಂದದ ವ್ಯಾಪ್ತಿಯೊಳಕ್ಕೆ ಸೇರಿಸಬೇಕೆಂದು ಅಮೆರಿಕ ವಾದಿಸಿದ ಇನ್ನೊಂದು ವಿಚಾರವೆಂದರೆ ಹಣಕಾಸಿನ ಹೂಡಿಕೆಯನ್ನು, ಸೇವೆಯನ್ನು ಕುರಿತದ್ದು. ಮೊದಲನೆಯದನ್ನು ವ್ಯಾಪಾರ ಸಂಬಂಧವಾದ ಬೌದ್ಧಿಕ ಆಸ್ತಿ ಹಕ್ಕುಗಳು (ಟ್ರೇಡ್ ರಿಲೇಟೆಡ್ ಇಂಟೆಲೆಕ್ಚು-ಯಲ್ ಪ್ರಾಪರ್ಟಿ ರೈಟ್ಸ್ ಅಥವಾ—ಸಂಕ್ಷೇಪವಾಗಿ—ಟಿ.ಆರ್.ಐ.ಪಿ.ಎಸ್—ಟ್ರಿಪ್ಸ್) ಎಂದು ಕರೆದರೆ, ಇದನ್ನು ವ್ಯಾಪಾರ ಸಂಬಂಧವಾದ ಹಣ ವಿನಿಯೋಜನ ಕ್ರಮಗಳು (ಟ್ರೇಡ್ ರಿಲೇಟೆಡ್ ಇನ್ವೆಸ್ಟ್‌ಮೆಂಟ್ ಮೆಷರ್ಸ್ ಅಥವಾ—ಸಂಕ್ಷೇಪವಾಗಿ—ಟಿ.ಆರ್.ಐ.ಎಂ.ಎಸ್—ಟ್ರಿಮ್ಸ್) ಎಂದು ಕರೆಯಲಾಗಿದೆ. ಭಾರತದಲ್ಲಿ ಬ್ಯಾಂಕಿಂಗ್, ವಿಮೆ ಮುಂತಾದ ಸೇವೆಗಳು ರಾಷ್ಟ್ರೀಕರಣಗೊಂಡಿವೆ. ವಿದೇಶಿ ಸಂಸ್ಥೆಗಳು ಇಲ್ಲಿ ಈ ಸೇವೆಗಳನ್ನು ಸ್ವೇಚ್ಛೆಯಾಗಿ ನೀಡುವಂತಿಲ್ಲ. ಮುಕ್ತ ಸ್ಪರ್ಧೆಗೆ ಇಲ್ಲಿ ಅವಕಾಶ ಇಲ್ಲ. ಈ ಸೇವೆಗಳನ್ನು ಇಲ್ಲಿ ವಿಸ್ತರಿಸಿ ಇವರಲ್ಲಿ ಹಣ ತೊಡಗಿಸಿದರೆ ಲಾಭ ದೊರಕುತ್ತದೆಂದು ಅಮೆರಿಕದ ಅನಿಸಿಕೆ. ಆದ್ದರಿಂದ ಈ ಕ್ಷೇತ್ರಗಳನ್ನು ಮುಕ್ತವಾಗಿ ತೆರೆಯಬೇಕೆಂಬುದು ಅವರ ವಾದ. ಇವು ಕೂಡ ಅಂತರರಾಷ್ಟ್ರೀಯ ವ್ಯಾಪಾರದ ತೆಕ್ಕೆಗೆ ಒಳಪಡಬೇಕಾದಂಥವು ಎಂದು ಅದರ ನಿಲುವು. ಇವುಗಳಲ್ಲಿ ಏಕಸ್ವಾಮ್ಯ ಇರುವುದಾಗಲಿ, ಅನ್ಯದೇಶಗಳ ಹಣಹೂಡಿಕೆ ಸಂಸ್ಥೆಗಳಿಗೆ ಮುಕ್ತ ಸ್ಪರ್ಧೆಯ ಅವಕಾಶ ನೀಡದಿರುವುದಾಗಲಿ ತಪ್ಪು. ಆದ್ದರಿಂದ ಈ ವಿಚಾರವನ್ನೂ ಚರ್ಚೆಗೆ ಒಳಪಡಿಸಬೇಕೆಂದು ಅದು ಬಯಸಿತು. ಕೃಷಿಗೆ ವಿಶೇಷವಾದ ರಕ್ಷಣೆ ನೀಡಿ, ಅನ್ಯದೇಶಗಳ ಧಾನ್ಯವೇ ಮುಂತಾದವುಗಳ ಮುಕ್ತ ಆಮದಿಗೆ ಅವಕಾಶ ನೀಡದ ವ್ಯವಸ್ಥೆಯನ್ನೂ ಅದು ವಿರೋಧಿಸಿತು. ಹೀಗೆ ಯುರುಗ್ವೇ ಸುತ್ತಿನ ಮಾತುಕತೆಗಳು ಆರಂಭದಿಂದಲೇ ಬಹಳ ತಕರಾರಿನಿಂದ ಕೂಡಿದ ಅನೇಕ ಹೊಸ ಪ್ರಸ್ತಾವಗಳಿಂದಾಗಿ ಸಾರ್ವತ್ರಿಕ ಒಡಂಬಡಿಕೆ ಸಾಧಿಸುವುದು ಬಲುಕಠಿಣವಾಗಿ ಪರಿಣಮಿಸಿತು.

ಡಂಕೆಲ್ ಪ್ರಸ್ತಾವ

ವಿವಿಧ ದೇಶಗಳ ನಡುವೆ ಬಹಳಷ್ಟು ಭಿನ್ನ ದೃಷ್ಟಿಕೋನಗಳಿದ್ದುವು. ಸ್ಥೂಲವಾಗಿ ಅಭಿವೃದ್ಧಿ ಹೊಂದಿದ ದೇಶಗಳು ಒಂದು ಕಡೆ ಹಾಗೂ ಅಭಿವೃದ್ಧಿಶೀಲ ದೇಶಗಳು ಇನ್ನೊಂದು ಕಡೆ ಇದ್ದರೂ, ಒಂದೊಂದೂ ಗುಂಪಿನೊಳಗಿನ ದೇಶಗಳ ನಡುವೆಯೇ ಅನೇಕ ಭಿನ್ನತೆಗಳಿದ್ದುವು. ಅವು ಮುಕ್ತ ವ್ಯಾಪಾರದ ಮಾತಾಡುತ್ತ, ತಮ್ಮ ಹಿತಗಳಿಗೆ ಧಕ್ಕೆ ಬರುವುದೆನಿಸಿದಾಗ ಅವುಗಳ ರಕ್ಷಣೆಗಾಗಿ ತಮ್ಮವೇ ಆದ ಸೂತ್ರಗಳನ್ನು ಮಂಡಿಸುತ್ತ, ಇಲ್ಲವೇ ಇತರರ ಸೂತ್ರಗಳನ್ನು ನಿರಾಕರಿಸುತ್ತ ಇದ್ದುದರ ಫಲವಾಗಿ ಬಹಳಷ್ಟು ಗೊಂದಲವೇ ಉಂಟಾಯಿತು. ಇದನ್ನು ನಿವಾರಿಸಿ ಸರ್ವಸಮ್ಮತವೆನಿಸಬಹುದಾದ, ಪ್ರತಿಯೊಂದು ದೇಶವೂ ಕೆಲವು ಅಂಶಗಳಲ್ಲಿ ಸ್ವಲ್ಪಮಟ್ಟಿಗೆ ತನ್ನ ನಿಲುವನ್ನು ಬಿಟ್ಟುಕೊಡಬೇಕಾಗುವ, ಇನ್ನು ಕೆಲವು ಅಂಶಗಳಲ್ಲಿ ಸ್ವಲ್ಪಮಟ್ಟಿಗೆ ತನ್ನ ನಿಲುವಿಗೆ ಅನುಗುಣವಾಗಿರುವಂಥ ರಾಜಿ ಸಲಹೆಗಳನ್ನು ಆಗ ಗ್ಯಾಟ್ ಸಂಘಟನೆಯ ಮಹಾ ನಿರ್ದೇಶಕರಾಗಿದ್ದ ಆರ್ಥರ್ ಡಂಕೆಲ್ ಎಂಬವರು ಸೂಚಿಸಿದರು (೧೯೯೧ ಡಿಸೆಂಬರ್). ಸಂಧಾನಕ್ಕೆ ಈ ಸಲಹೆಗಳನ್ನು ಆಧಾರವಾಗಿಟ್ಟುಕೊಂಡು, ಅಲ್ಲಿ ಇಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಎಲ್ಲರೂ ಇವನ್ನು ಒಪ್ಪಬಹುದು ಎಂದು ಹೇಳಿದರು. ವ್ಯಾಪಾರ ಸಂಬಂಧವಾದ ಬೌದ್ಧಿಕ ಆಸ್ತಿ ಹಕ್ಕುಗಳು ಮತ್ತು ಹಣ ಹೂಡಿಕೆ ಕ್ರಮಗಳನ್ನು ಈ ಸೂಚನೆಗಳಲ್ಲಿ ಸೇರಿಸಲಾಗಿತ್ತು. ಕೆಲವು ದೇಶಗಳ ಸರ್ಕಾರಗಳು ತಮ್ಮ ಕೃಷಿಯ ರಕ್ಷಣೆಗಾಗಿ ಹಾಗೂ ಸಾರ್ವಜನಿಕರಿಗೆ ಆಹಾರ ಧಾನ್ಯಗಳೇ ಮುಂತಾದವು ಕಡಮೆ ಬೆಲೆಯಲ್ಲಿ ವಿತರಣೆಯಾಗಲೆಂಬ ಉದ್ದೇಶದಿಂದ ನೀಡುತ್ತಿದ್ದ ಪ್ರೋತ್ಸಾಹಧನವೇ ಮುಂತಾದವನ್ನು ಗಮನಾರ್ಹವಾಗಿ ಕಡಿಯಬೇಕೆಂಬುದನ್ನೂ ಈ ಸೂಚನೆಗಳಲ್ಲಿ ಸೇರಿಸಲಾಗಿತ್ತು.

ಡಂಕೆಲ್ ಸೂಚನೆಗಳಿಗೂ ವ್ಯಾಪಕವಾದ ವಿರೋಧವಿತ್ತು. ಒಂದೊಂದು ದೇಶದಲ್ಲಿಯು ವಿರೋಧ ಒಂದೊಂದು ಕಾರಣಕ್ಕಾಗಿ. ಕೃಷಿಯ ಮೇಲೆ ಸಬ್ಸಿಡಿಯನ್ನು ಕಡಿಮೆ ಮಾಡಲು, ಆಹಾರ ಧಾನ್ಯದ ಆಮದಿಗೆ ಬಾಗಿಲು ತೆರೆಯಲು ವಿರೋಧಿಸಿ ಕೆಲವರು ಪ್ರದರ್ಶನ ನಡೆಸಿದರು. ಭಾರತದಲ್ಲಿ ಕೃಷಿಗೆ ಸಹಾಯಧನ ನೀಡುವುದಕ್ಕೆ, ಸಾರ್ವಜನಿಕ ವಿತರಣ ವ್ಯವಸ್ಥೆಯ ಮೂಲಕ ಅಗ್ಗದ ಬೆಲೆಯಲ್ಲಿ ಆಹಾರ ಪದಾರ್ಥಗಳ ವಿತರಣೆಗೆ ಅಡ್ಡಿಯುಂಟಾದೀತೆಂದು ಆತಂಕ; ಪೇಟೆಂಟ್ ಹಕ್ಕು ಕೇವಲ ಉತ್ಪಾದನೆಯ ಕ್ರಿಯೆಗಳಿಗೇ ಅಲ್ಲದೆ ಉತ್ಪನ್ನಗಳಿಗೂ ಅನ್ವಯ

ನಾಗುವುದಾದರೆ, ಅದರ ಅವಧಿ ವಿಸ್ತರಿಸುವುದಾದರೆ, ಇದರಿಂದ ನಮ್ಮ ಔಷಧ ಗಳು ಹೆಚ್ಚು ದುಬಾರಿಯಾಗಿ ಜೀವ ಉಳಿಸುವಂಥ ಅನೇಕ ಔಷಧಗಳು ಜನ ಸಾಮಾನ್ಯರಿಗೆ ಲಭ್ಯವಿಲ್ಲದೆ ಹೋದಾವೆಂಬ ಭಯ; ವಿಶ್ರುತಳಿ ಬೀಜಗಳೇ ಮುಂತಾದವುಗಳ ಮೇಲೂ ಸೂಕ್ಷ್ಮಾಣುಜೀವಿಗಳ ಮೇಲೂ ವಿದೇಶಿ ಸಂಸ್ಥೆಗಳ ಸ್ವಾಮ್ಯ ಹಕ್ಕುಗಳಿಂದಾಗಿ ರೈತರು ನಿರಂತರವಾಗಿ ಆ ಸಂಸ್ಥೆಗಳನ್ನೇ ಅವಲಂಬಿಸ ಬೇಕಾಗಿ ಬಂದು, ಕೃಷಿ ಕಾರ್ಯಗಳಿಗೆ ನಿರುತ್ತೇಜನ ಉಂಟಾದೀತೆಂಬ ಅಂಜಿಕೆ; ನಮ್ಮ ಹಣಕಾಸು ಕ್ಷೇತ್ರಗಳಲ್ಲಿ ವಿದೇಶೀ ಬಂಡವಾಳ ಸಂಸ್ಥೆಗಳ ಸ್ಪರ್ಧೆಯಿಂದಾಗಿ ನಮ್ಮ ಸಂಸ್ಥೆಗಳು ಕಣ್ಮುಚ್ಚಬಹುದಾದ ಅಪಾಯ; ಶೇ. ೩೮ ರಿಂದ ಶೇ. ೬೫ರ ವರೆಗೆ ಅನೇಕ ಪದಾರ್ಥಗಳ ಮೇಲಣ ಆಮದು ಸುಂಕ ಇಳಿಸಬೇಕಾಗಿ ಬರುವುದ ರಿಂದ ನಮ್ಮ ಕೈಗಾರಿಕೆಗಳು ಉತ್ಪಾದಿಸುವ ಸರಕುಗಳು ಅನ್ಯದೇಶಗಳೊಂದಿಗೆ ಸ್ಪರ್ಧಿಸಲಾರದೆ ಹಿಂಜರಿತವನ್ನೆದುರಿಸಬೇಕಾಗುವ ಸಾಧ್ಯತೆ; ವಿವಿಧ ಎಳೆ ಜವಳಿ ಒಪ್ಪಂದದ ಪ್ರಕಾರ ನಮ್ಮ ಜವಳಿ ಸರಕುಗಳನ್ನು ವಿವಿಧ ದೇಶಗಳಿಗೆ ರಫ್ತು ಮಾಡುವ ವಿಚಾರದಲ್ಲಿ ವಿಧಿಸಲಾಗಿರುವ ಕೋಟಾ ಪದ್ಧತಿಯನ್ನು ಸಂಪೂರ್ಣ ವಾಗಿ ರದ್ದುಮಾಡಿ, ವಿಶ್ವಪೇಟೆಯಲ್ಲಿ ನಮ್ಮ ಜವಳಿ ಸರಕುಗಳು ಯಶಸ್ವಿಯಾಗಿ ಸ್ಪರ್ಧಿಸಲು ಅವಕಾಶ ನೀಡುವುದನ್ನು ಹತ್ತು ವರ್ಷಗಳ ಕಾಲ ಮುಂದೂಡ ಬೇಕೆಂಬ ಷರತ್ತಿನಿಂದಾಗಿ ಆ ಕ್ಷೇತ್ರದಲ್ಲಿಯ ಮುಕ್ತವ್ಯಾಪಾರದಿಂದ ಭಾರತ ವನ್ನು ವಂಚಿಸಲಾಗಿದೆಯೆಂಬ ದುಃಖ—ಹೀಗೆ ಡಂಕೆಲ್ ಪ್ರಸ್ತಾವವೂ, ಅದಕ್ಕೆ ಅನುಗುಣವಾಗಿ ಅಂತಿಮವಾಗಿ ಆಗಿರುವ ಒಡಂಬಡಿಕೆಯೂ ನಮಗೆ ಸಮಾಧಾನ ತರುವಂಥವೇನೂ ಅಲ್ಲ.

ರೈತ ಹಿತ

ಇವುಗಳಲ್ಲಿ ಒಂದೊಂದಕ್ಕೂ ಸರ್ಕಾರ ತನ್ನದೇ ಆದ ರೀತಿಯಲ್ಲಿ ಸಮಾಧಾನ ಕಂಡುಕೊಳ್ಳಲು ಯತ್ನಿಸಿದೆ. ಮೊದಲನೆಯದಾಗಿ, ಕೃಷಿಗೆ ಸಂಬಂಧಿಸಿದಂತೆ ಸಬ್ಸಿಡಿಯ ಪ್ರಶ್ನೆ: ಪ್ರತಿಯೊಂದು ದೇಶವೂ ಕೃಷಿಗೆ ಆದ್ಯತೆ ನೀಡುವುದು ಸಾಮಾನ್ಯ. ಮೂಲಭೂತವಾಗಿ ಆಹಾರ ಪೂರೈಕೆಗಾಗಿ, ಕೈಗಾರಿಕೆಗಳಿಗೆ ಅಗತ್ಯ ವಾದ ಕಚ್ಚಾ ಸಾಮಗ್ರಿಗಾಗಿ ಕೃಷಿಗೆ ವಿಶೇಷ ಪ್ರಾಮುಖ್ಯ. ಆದರೆ ಪ್ರತಿಯೊಂದು ದೇಶದ ಕೃಷಿ ಮಾರುಕಟ್ಟೆಯನ್ನೂ ಎಲ್ಲ ದೇಶಗಳ ಕೃಷಿ ಸರಕುಗಳಿಗಾಗಿ ತೆರೆದಿಡ ಬೇಕೆಂದು ಅಮೆರಿಕಾ ವಾದಿಸುತ್ತಿದೆ. ರೈತರಿಗೆ ವಿಶೇಷ ಸವಲತ್ತು ನೀಡಿ ಮುಕ್ತ ವ್ಯಾಪಾರಕ್ಕೆ ಅಡ್ಡಿ ತರಬಾರದೆಂದು ಅದರ ಅಪೇಕ್ಷೆ. ಅನೇಕ ಯೂರೋಪಿಯನ್

ದೇಶಗಳೂ, ಜಪಾನ್, ದಕ್ಷಿಣ ಕೊರಿಯ ಮುಂತಾದ ದೇಶಗಳೂ ಇವನ್ನು ವಿರೋಧಿಸಿದುವು. ಅಂತಿಮವಾಗಿ ಇವು ಸಬ್ಸಿಡಿಯ ಇಳಿತಾಯಕ್ಕೆ ಒಪ್ಪಬೇಕಾಯಿತು. ಜಪಾನ್, ದಕ್ಷಿಣ ಕೊರಿಯಾಗಳು ಅಮೆರಿಕದ ಅಕ್ಕಿಯ ಆಮದಿಗೆ ಅವಕಾಶ ನೀಡಬೇಕಾಗಿಬಂತು. ಬಹುತೇಕ ದೇಶಗಳು ಅಮೆರಿಕದ ನಿಲುವಿಗೆ ಮಣಿಯಲೇಬೇಕಾಗಿ ಬಂದಾಗ ಭಾರತದ ಕ್ಷೀಣ ಧ್ವನಿ ಯಾರಿಗೂ ಕೇಳಿಸಲಿಲ್ಲ. ಆದರೆ ಒಂದು ಸಮಾಧಾನ. ಕೃಷಿಯ ಒಟ್ಟು ಉತ್ಪನ್ನದ ಶೇ. ೧೦ಕ್ಕಿಂತ ಸಬ್ಸಿಡಿ ಹೆಚ್ಚಾಗಿರಬಾರದು ಎಂಬ ನಿಯಮ ಇರುವುದರಿಂದ ಭಾರತಕ್ಕೆ ತೊಂದರೆಯಿಲ್ಲವೆಂದು ಭಾವಿಸಲಾಗಿದೆ. ಇದರ ಸಬ್ಸಿಡಿಯ ಮಟ್ಟ ಶೇ. ೪ಕ್ಕಿಂತ ಹೆಚ್ಚಿಲ್ಲ. ಸಾರ್ವಜನಿಕ ವಿತರಣೆ ವ್ಯವಸ್ಥೆಯ ಮೂಲಕ ಅಗ್ಗದ ಬೆಲೆಯಲ್ಲಿ ಆಹಾರ ಧಾನ್ಯ ಹಂಚಿಕೆಗೂ ಅಡ್ಡಿಯಿಲ್ಲವೆಂದು ಹೇಳಲಾಗಿದೆ. ಏಕೆಂದರೆ ಇದಕ್ಕಾಗಿ ನೀಡುವ ಸಹಾಯಧನ ಮುಖ್ಯವಾಗಿ ಬಡ ಬಳಕೆದಾರರಿಗೆ.

ಕೃಷಿ ವಸ್ತುಗಳ ಮಾರುಕಟ್ಟೆಯನ್ನು ಅನ್ಯದೇಶಗಳ ಕೃಷಿ ಉತ್ಪನ್ನಗಳಿಗೆ ತೆರೆಯಬೇಕೆಂದೂ ಒಪ್ಪಲಾಗಿದೆ. ದೇಶದ ಒಟ್ಟು ಕೃಷಿ ವಸ್ತು ಮಾರಾಟದ ಶೇ. ೩ ರಿಂದ ೫ರವರೆಗೆ ವಿದೇಶಿ ಕೃಷಿ ಸರಕುಗಳ ಆಗಮನಕ್ಕೆ ಅವಕಾಶ ಇರಬೇಕು. ಆದರೆ ಭಾರತದ ವಿಚಾರದಲ್ಲಿ ವಿನಾಯಿತಿಯುಂಟು. ಯಾವ ದೇಶದ ವಿದೇಶಿ ವಿನಿಮಯ ಪರಿಸ್ಥಿತಿ ಸಮರ್ಪಕವಾಗಿಲ್ಲವೋ, ವಿದೇಶಗಳಿಂದ ಆಮದು ಮಾಡಿಕೊಂಡ ಸರಕುಗಳಿಗೆ ಪಾವತಿಮಾಡಲು ಸಾಕಷ್ಟು ವಿದೇಶಿ ಹಣ ಇರುವುದಿಲ್ಲವೋ, ಆ ದೇಶ ಕಡ್ಡಾಯವಾಗಿ ವಿದೇಶಿ ಕೃಷಿ ವಸ್ತುಗಳ ಆಮದಿಗೆ ಅವಕಾಶ ನೀಡಬೇಕಾಗಿಲ್ಲ. ಭಾರತ ಸದ್ಯದಲ್ಲಿ ವಿದೇಶಿ ವಿನಿಮಯ ಸಮಸ್ಯೆ ಎದುರಿಸುತ್ತಿರುವುದರಿಂದ ಅಗ್ಗದ ಕೃಷಿ ವಸ್ತು ಆಮದಿನ ಹೆದರಿಕೆಯಿಲ್ಲ ಎನ್ನಲಾಗಿದೆ.

ಆದರೆ ಭಾರತ ಈಗ ವಿದೇಶಿ ವಿನಿಮಯ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುತ್ತಿದೆ. ಈಗಾಗಲೇ ನಮ್ಮ ವಿದೇಶಿ ವಿನಿಮಯ ಶಿಲ್ಕು ತುಂಬ ಸಮರ್ಪಕವಾದ ಮಟ್ಟವನ್ನು ತಲಪಿದೆ. ಈ ಅನುಕೂಲಕರ ಪರಿಸ್ಥಿತಿ ಮುಂದುವರಿದರೆ ಅಂತರರಾಷ್ಟ್ರೀಯ ಹಣ ನಿಧಿ ಸಂಸ್ಥೆ ನಮ್ಮ ದೇಶ ಬಿಕ್ಕಟ್ಟಿನಿಂದ ಪಾರಾಗಿದೆಯೆಂದು ಹೇಳಬಹುದು. ಆಗ ನಮ್ಮ ತಲೆಯ ಮೇಲೆ ಈ ಕಡ್ಡಾಯ ಕೃಷಿ ವಸ್ತು ಆಮದಿನ ನಿಯಮ ಹೇರಿಕೊಳ್ಳಬಹುದು. ಇದರಿಂದ ನಮ್ಮ ರೈತರ ಹಿತಕ್ಕೆ ಧಕ್ಕೆ ಉಂಟಾಗುವ ಅಪಾಯವುಂಟು. ಕಡಮೆ ಬೆಲೆಯ ವಿದೇಶಿ ಆಹಾರ ಧಾನ್ಯ ನಮ್ಮ ಮಾರುಕಟ್ಟೆಯನ್ನು ತುಂಬುತ್ತಿರುವಾಗ ನಮ್ಮ ರೈತರ ಫಸಲಿಗೆ ಹೆಚ್ಚಿನ ಬೆಂಬಲ ಬೆಲೆ ನೀಡಿ ಎಷ್ಟು ಕಾಲ ತಾನೇ ನಿಲ್ಲುವುದು ಸಾಧ್ಯ? ಇದು ಡಂಕೆಲ್

ಸೂತ್ರಗಳ ಆಶಯಕ್ಕೆ ವ್ಯತಿರಿಕ್ತವಾಗಿದೆಯೆಂದು ಅಮೆರಿಕವೇ ವಾದಿಸಬಹುದು. ತನ್ನ ವ್ಯಾಪಾರ ಕಾನೂನಿನ ೩೦೧ನೆಯ ವಿಶೇಷ ವಿಧಿಯನ್ನು ಉಚ್ಚರಿಸಿ ನಮ್ಮೊಂದಿಗೆ ವ್ಯಾಪಾರಕ್ಕೆ ಬಹಿಷ್ಕಾರ ಹಾಕಬಹುದು. ಸಾರ್ವತ್ರಿಕ ಒಪ್ಪಂದ ಇರುವುದರಿಂದ ಅಮೆರಿಕ ಏಕಪಕ್ಷೀಯವಾಗಿ ಭಾರತಕ್ಕೆ ಈ ಶಿಕ್ಷೆ ವಿಧಿಸಬಹುದೇ ಇಲ್ಲವೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಅಮದಾಗುವ ಪದಾರ್ಥದ ಪ್ರಮಾಣ ಬಹಳ ಕಡಮೆಯಾದ್ದರಿಂದ ಚಿಂತೆಗೆ ಕಾರಣವಿಲ್ಲ ಎಂಬುದು ಸರ್ಕಾರದ ಧೈರ್ಯ.

ಇತರ ದೇಶಗಳೂ ಕೃಷಿಯ ಸಬ್ಸಿಡಿಯನ್ನು ಇಳಿಸುವುದರಿಂದ ನಮ್ಮ ಕೃಷಿ ವಸ್ತುಗಳ ರಫ್ತಿಗೆ ಅವಕಾಶ ಇರುತ್ತದೆಂದು ಸರ್ಕಾರದ ಆಶಾವಾದ. ಕೃಷಿ ಆಧಾರಿತ ಉದ್ಯಮಗಳನ್ನು ಸ್ಥಾಪಿಸಿ ಬೆಳಸಲು ಇದರಿಂದ ಉತ್ತೇಜನ ದೊರಕುತ್ತದೆ. ನಮ್ಮ ಕೃಷಿ ವಸ್ತುಗಳ ಬೆಲೆಗಳು ಸ್ಪರ್ಧಾತ್ಮಕವಾಗಿರುತ್ತವೆಂದು ನಿರೀಕ್ಷಿಸಲಾಗಿದೆ. ಆದರೆ ಇದು ವಾಸ್ತವವಾಗಿ ಎಷ್ಟರ ಮಟ್ಟಿಗೆ ಸಾಧಿಸೀತು ಎಂಬುದು ಕೇವಲ ಊಹೆಗೆ ಬಿಟ್ಟ ವಿಚಾರ.

ಮಾರಕ ಪೇಟೆಂಟ್

ಬೌದ್ಧಿಕ ಆಸ್ತಿ ಹಕ್ಕುಗಳನ್ನು ಕುರಿತಂತೆ ಅನೇಕ ಸಮಸ್ಯೆಗಳು ನಮ್ಮನ್ನು ದುರುಗುಟ್ಟಿ ನೋಡುತ್ತಿವೆ. ಕಾಪಿರೈಟ್, ವ್ಯಾಪಾರ ಗುರುತುಗಳು, ಕೈಗಾರಿಕಾ ಆಲೇಖ್ಯಗಳು ಮುಂತಾದ ಅನೇಕ ಅಂಶಗಳು ಈ ವಿಷಯದ ಅಡಿಯಲ್ಲಿ ಬರುತ್ತವೆ. ಸ್ವಾಮ್ಯ ಹಕ್ಕು ಪಡೆದ ವಿದೇಶಿ ಉದ್ಯಮ ಸಂಸ್ಥೆಗಳು ಒದಗಿಸುವ ಬಿತ್ತನೆ ಬೀಜಗಳಿಂದ ಪಡೆದ ಬೀಜಗಳ ಮರುಬಳಕೆ, ವಿನಿಮಯ, ಬಿಕರಿ, ಸಂಶೋಧನೆ ಮುಂತಾದವಕ್ಕೆ ಅಡ್ಡಿ ಉಂಟಾಗುತ್ತದೆ. ಮಿಶ್ರತಳಿ ಬೀಜಗಳಿಗೆ ಸಂಬಂಧಿಸಿದಂತೆ ರೈತರಿಗೆ ರಕ್ಷಣೆ ನೀಡುವ ಕಾನೂನನ್ನು ತರಲು ನಮ್ಮ ಸರ್ಕಾರ ಕ್ರಮ ತೆಗೆದುಕೊಳ್ಳಲು ಯತ್ನಿಸುತ್ತಿದೆ. ಆದರೆ ಜಿನೀವಾ ಸಾರ್ವತ್ರಿಕ ನಿಯಮದ ಉಲ್ಲಂಘನೆಯಾಗದಂತೆ ಇದನ್ನು ಹೇಗೆ ಮಾಡಬಹುದೆಂಬುದು ಪ್ರಶ್ನೆ. ಪೇಟೆಂಟ್ ಬೀಜದಿಂದ ಪಡೆದ ಬೀಜದ ಬಳಕೆ ಹಾಗೂ ವಿನಿಮಯಕ್ಕೆ ಅವಕಾಶ ಇದೆಯೆಂದು ಹೇಳಲಾಗುತ್ತಿದೆ. ಪ್ರಪಂಚದ ಯಾವುದೇ ಭಾಗದಲ್ಲಿ ಉಪಜ್ಞಿಸಲಾದ ಅತ್ಯುತ್ತಮ ದರ್ಜೆಯ ಹೆಚ್ಚು ಇಳುವರಿ ನೀಡುವ ಬೀಜಗಳ ಬಳಕೆಗೆ ಈಗ ಅವಕಾಶ ಇದೆಯೆಂದು ಸರ್ಕಾರ ಹೇಳುತ್ತಿದೆ. 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಎನ್ನೋಣವೆ?

ಬೌದ್ಧಿಕ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದಂತೆ, ಹಿಂದೆಯೇ ಹೇಳಿದ ಹಾಗೆ, ಭಾರತ ಸರ್ಕಾರದ ಕಾನೂನಿನ ಪ್ರಕಾರ ಯಾವುದೇ ಪದಾರ್ಥದ ಉತ್ಪಾದನ ಪ್ರಕ್ರಿಯೆಗೆ ಮಾತ್ರ ಹಕ್ಕು ಅನ್ವಯವಾಗುತ್ತದೆ. ಇನ್ನು ಮೇಲೆ ಉತ್ಪನ್ನವಾದ ಪದಾರ್ಥದ ಮೇಲೂ ಪೇಟೆಂಟ್ ಹಕ್ಕು ಒಪ್ಪಿಕೊಳ್ಳಬೇಕಾಗುತ್ತದೆ. ಎಂದರೆ ಪ್ರತಿಸಾರಿ ಆ ಪದಾರ್ಥ ಉಪಯೋಗಿಸುವಾಗಲೂ ನಾವು ಮೂಲ ಪೇಟೆಂಟ್‌ದಾರರ ಒಪ್ಪಿಗೆ ಪಡೆಯಬೇಕಾಗುತ್ತದೆ. ನಾವೇ ಬೇರೆ ರೀತಿಯಿಂದ ಅವನ್ನು ಉತ್ಪಾದಿಸುವಂತಿಲ್ಲ. ಜನಸಾಮಾನ್ಯರಿಗೆ ಅಗತ್ಯವಾದ ಹಾಗೂ ಜೀವ ಉಳಿಸಲು ಅಗತ್ಯವಾದ ಔಷಧಗಳನ್ನು ಕಡಮೆ ಬೆಲೆಗಳಲ್ಲಿ ಉತ್ಪಾದಿಸಿ ವಿತರಿಸುವ ಪ್ರಶ್ನೆಯಿಲ್ಲ. ವಿದೇಶಿ ಸಂಸ್ಥೆಗಳು ವಿಧಿಸುವ ಬೆಲೆಗಳೇ ಅನ್ವಯಿಸುತ್ತವೆ. ವಿದೇಶಿ ಔಷಧ ಬೆಲೆಗಳು ನಮ್ಮಲ್ಲಿಯ ಬೆಲೆಗಳಿಗಿಂತ ಮುನ್ನೂರು ನಾನೂರು ಪಟ್ಟು ಅಧಿಕವಾಗಿವೆ ಎಂದು ಅನೇಕರು ಹೇಳುತ್ತಾರೆ. ಹಾಗಾದರೆ ಚಿಕಿತ್ಸೆ ಅತಿ ದುಬಾರಿಯಾಗಿ ಶ್ರೀಸಾಮಾನ್ಯರು ಭಾರಿ ಬವಣೆ ಅನುಭವಿಸಬೇಕಾಗುತ್ತದೆ.

ಆದರೆ ಪೇಟೆಂಟ್ ಔಷಧಗಳು ಒಟ್ಟು ಔಷಧಗಳಲ್ಲಿ ಕೇವಲ ಶೇ|| ೧೦ ರಷ್ಟು ಮಾತ್ರವೆಂದೂ, ಉಳಿದವು ಪೇಟೆಂಟ್ ಹೊರಗಿವೆಯಾದ್ದರಿಂದ ಬಾಧಕವಿಲ್ಲವೆಂದೂ, ಮುಖ್ಯ ಔಷಧಗಳೆಲ್ಲ ಇಂಥವೇ ಎಂದೂ, ಇವನ್ನು ತಯಾರಿಸಿ ಮಾರಾಟ ಮಾಡಲು ಅಭ್ಯಂತರವಿಲ್ಲವೆಂದೂ, ಒಟ್ಟಿನಲ್ಲಿ ಔಷಧ ಬೆಲೆಗಳು ಅಷ್ಟಾಗಿ ಏರುವುದಿಲ್ಲವೆಂದೂ ಸರ್ಕಾರ ಧೈರ್ಯ ಹೇಳುತ್ತಿದೆ. ವಿದೇಶಿ ಔಷಧ ತಯಾರಿಕಾ ಸಂಸ್ಥೆಗಳು ಅತಿಯಾಗಿ ಬೆಲೆ ಏರಿಸಿ ಲಾಭಬಡಕತನ ಪ್ರದರ್ಶಿಸಿದರೆ ಸರ್ಕಾರ ಲೈಸೆನ್ಸ್ ನೀಡಿಕೆಯ ಕ್ರಮದಿಂದ ಅವನ್ನು ಹದ್ದುಬಸ್ತಿಗೆ ತರಬಹುದೆಂದೂ ಹೇಳಲಾಗುತ್ತಿದೆ. ಇದೆಲ್ಲಾ 'ರೆ' ಸಾಮ್ರಾಜ್ಯದ ಮಾತು. ಪೇಟೆಂಟ್ ಕುರಿತ ನಿಯಮಗಳನ್ನು ಗ್ಯಾಟ್ ಒಪ್ಪಂದಕ್ಕೆ ತಕ್ಕಂತೆ ತಿದ್ದುಪಡಿ ಮಾಡಲು ಹತ್ತು ವರ್ಷಗಳ ಅವಧಿಯುಂಟು. ಅಷ್ಟರೊಳಗೆ ಎಷ್ಟೋ ಹಳೆಯ ಪೇಟೆಂಟುಗಳು ಕೆಲಸಕ್ಕೆ ಬಾರದವಾಗುತ್ತವೆ. ಹೊಸ ಹೊಸ ಉಪಜ್ಞೆಗಳು ಬರುತ್ತವೆ. ಈ ಶೀಘ್ರ ಬದಲಾವಣೆಯ ಪರಿಸ್ಥಿತಿಯಲ್ಲಿ ದೀರ್ಘ ಅವಧಿಯ (ಎಂದರೆ ಇಪ್ಪತ್ತು ವರ್ಷಗಳ) ಹಾಗೂ ಉತ್ಪನ್ನಗಳ (ಪ್ರಾಡಕ್ಟ್) ಪೇಟೆಂಟಿನಿಂದ ನಮಗೇನೂ ಹಾನಿ ತಟ್ಟದು ಎಂಬ ಸರ್ಕಾರದ ಧೈರ್ಯವನ್ನು ಮೆಚ್ಚಲೇಬೇಕು!

ಜವಳಿಯಲ್ಲಿ ಮೋಸ

ಭಾರತಕ್ಕೆ ಖಂಡಿತವಾಗಿಯೂ ಅನ್ಯಾಯವಾಗಿರುವ ಇನ್ನೊಂದು ಕ್ಷೇತ್ರವೆಂದರೆ ಜವಳಿಯನ್ನು ಕುರಿತದ್ದು. ಭಾರತದಲ್ಲಿ ತಯಾರಾದ ಜವಳಿ ಸರಕು

ಮತ್ತು ಸಿದ್ಧ ಉಡುಪುಗಳು ಪ್ರಪಂಚದ ಪೇಟೆಯಲ್ಲಿ ಬಹಳ ಜನಪ್ರಿಯವಾಗಿವೆ. ಈ ವಿಚಾರವಲ್ಲಿ ಭಾರತ ಇತರ ದೇಶಗಳೊಡನೆ ಸ್ಪರ್ಧಿಸಬಹುದಾಗಿದೆ. ಆದರೆ ಯೂರೋಪಿನ ದೇಶಗಳೂ ಅಮೆರಿಕವೂ ನಮ್ಮ ಜವಳಿ ಸರಕುಗಳ ಹಾಗೂ ಉಡುಪುಗಳ ಅಬಾಧಿತ ಆಮದಿಗೆ ಅವಕಾಶ ನೀಡುತ್ತಿಲ್ಲ. ವಿವಿಧ ಎಳೆ ಜವಳಿ ಒಪ್ಪಂದವೆಂಬ (ಮಲ್ಟಿ-ಫೈಬರ್ ಅರೇಂಜ್‌ಮೆಂಟ್) ಒಂದು ಒಪ್ಪಂದವಿದೆ. ಇದರ ಅಡಿಯಲ್ಲಿ ಈ ದೇಶಗಳಿಗೆ ಭಾರತ ಮತ್ತು ಇತರ ಜವಳಿ ರಫ್ತುದಾರ ದೇಶಗಳು ಎಷ್ಟೆಷ್ಟು ರಫ್ತು ಮಾಡಬಹುದೆಂಬುದು ನಿರ್ಧಾರವಾಗಿದೆ. ಈ ಕೋಟಾಗೆ ಒಳಪಟ್ಟೇ ಭಾರತ ರಫ್ತು ಮಾಡಬಹುದಾಗಿದೆ. ಮುಕ್ತವ್ಯಾಪಾರದ ಮಾತಾಡುವ ಈ ದೇಶಗಳು ಜವಳಿಯ ವಿಚಾರದಲ್ಲಿ ಮಾತ್ರ ಈ ದಿಗ್ಬಂಧನ ನೀತಿಯನ್ನೇಕೆ ಅನುಸರಿಸಬೇಕು ಎಂಬುದಕ್ಕೆ ಉತ್ತರವಿಲ್ಲ. ಅವು ಬಲಿಷ್ಠ ದೇಶಗಳು. ಡಂಕೆಲ್ ಪ್ರಸ್ತಾವವಲ್ಲಿ ಈ ಬಗ್ಗೆ ಒಂದು ರೀತಿಯ ರಾಜಿ ಸೂತ್ರ ಸೂಚಿಸಲಾಗಿತ್ತು. ಹತ್ತು ವರ್ಷಗಳಲ್ಲಿ ಕ್ರಮಕ್ರಮವಾಗಿ ಈ ಕೋಟಾ ನಿಯಮವನ್ನು ಸಡಿಲಿಸಬಹುದೆಂದೂ ಅಂತಿಮವಾಗಿ ಈ ಅವಧಿಯ ಅನಂತರ ಇದು ಸಂಪೂರ್ಣವಾಗಿ ಮುಕ್ತವಾಗಬೇಕೆಂದೂ ಸಲಹೆ ಮಾಡಲಾಗಿತ್ತು. ಹದಿನೈದು ವರ್ಷ ಈ ನೀತಿ ಮುಂದುವರಿಯಬೇಕೆಂದು ಅಮೆರಿಕಾ ಪಟ್ಟು ಹಿಡಿದಿತ್ತು. ಕೊನೆಗೆ ಹತ್ತು ವರ್ಷಗಳ ಗಡುವಿಗೆ ಅದು ಒಪ್ಪಬೇಕಾಯಿತು. ಆದರೆ ಮೊದಲ ಒಂಬತ್ತು ವರ್ಷಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಇದನ್ನು ಸಡಿಲಿಸಲಾಗುವುದು. ಒಂಬತ್ತು ವರ್ಷಗಳ ಕೊನೆಯಲ್ಲಿ ಶೇ|| ೫೧ ರಫ್ತು ಮುಕ್ತಸ್ಥಿತಿ ಏರ್ಪಡುತ್ತದೆ. ಹತ್ತು ವರ್ಷ ಆದಮೇಲೆ ಉಳಿದ ಶೇ|| ೪೯ ರಫ್ತನ್ನು ಮುಕ್ತಗೊಳಿಸಲಾಗುತ್ತದೆ. ಒಟ್ಟಿನಲ್ಲಿ ಇನ್ನೂ ಹತ್ತು ವರ್ಷ ಕೋಟಾ ಬಹುತೇಕ ಮುಂದುವರಿಯುತ್ತದೆ. ಅಷ್ಟರಲ್ಲಿ ಆ ದೇಶಗಳ ಜವಳಿ ಕೈಗಾರಿಕೆಗಳು ಬಲಿತುಕೊಳ್ಳುತ್ತವೆ. ನಾವು ವೇಗವಾಗಿ ನಮ್ಮ ಜವಳಿ ಉದ್ಯಮವನ್ನು ಆಧುನಿಕಗೊಳಿಸಿ, ಉತ್ಪಾದನೆಯ ವೆಚ್ಚ ಇಳಿಸಿ, ಗುಣಮಟ್ಟವನ್ನು ಸತತವಾಗಿ ಏರಿಸುವ ಪ್ರಯತ್ನ ಮಾಡದಿದ್ದರೆ ನಮ್ಮ ಕೈಯಿಂದ ಈ ಮಾರುಕಟ್ಟೆಯೂ ಜಾರಿಕೊಳ್ಳುತ್ತದೆ. ಪಾಶ್ಚಾತ್ಯ ದೇಶಗಳ ಕುಟಿಲ ತಂತ್ರದ ಮುಂದೆ ನಾವು ಅಸಹಾಯಕರಾಗಿದ್ದೇವೆ. ನಮ್ಮ ಸಂಧಾನಕಾರರು ಈ ಕ್ಷೇತ್ರದಲ್ಲೂ ಸೋತಿದ್ದಾರೆ.

ವಿದೇಶಿ ಮಾರ್ವಾಡಿ

ಇನ್ನು ವ್ಯಾಪಾರ ಸಂಬಂಧವಾದ ಹಣಕಾಸು ಹೂಡಿಕೆ ಅವಕಾಶದ ವಿಚಾರ, ಬ್ಯಾಂಕಿಂಗ್, ವಿಮೆ ಮುಂತಾದ ಸೇವೆಗಳಿಗೆ ಮುಕ್ತ ಅವಕಾಶ ಇರಬೇಕೆಂಬ

ವಿಷಯ. ಭಾರತದಲ್ಲಿ ವಿದೇಶಿ ವಿಮಾ ಸಂಸ್ಥೆಗಳಿಗೆ ಅವಕಾಶವಿಲ್ಲ, ಬ್ಯಾಂಕಿಂಗ್ ಸೇವಾ ವಿಸ್ತರಣೆಗೂ ನಿರ್ಬಂಧಗಳಿವೆ. ನರಸಿಂಹಂ ಮತ್ತು ಮಲ್ಹೋತ್ರಾ ಸಮಿತಿಗಳ ಶಿಫಾರಸಿನಂತೆ ಈ ಕ್ಷೇತ್ರಗಳಲ್ಲೂ ಈಗ ವಿದೇಶಿ ಸಂಸ್ಥೆಗಳಿಗೆ ಹೆಚ್ಚಿನ ಅವಕಾಶ ದೊರಕುವ ಸಾಧ್ಯತೆಯಿದೆ. ಈ ಬಗ್ಗೆ ವಿವಿಧ ದೇಶಗಳೊಡನೆ ಸಂಧಾನ ನಡೆಸಿ ಅವಕ್ಕೆ ಅವಕಾಶ ದೊರಕಿಸಿಕೊಡಬೇಕಾಗುತ್ತದೆ. ವಿದೇಶಿ ಉದ್ಯಮ ಸಂಸ್ಥೆಗಳಿಗೆ ಭಾರತದಲ್ಲಿ ಮುಕ್ತ ಅವಕಾಶ ಇರಬೇಕೆಂದು ಗ್ಯಾಟ್ ಒಪ್ಪಂದ ಹೇಳುವುದಿಲ್ಲ. ಆದರೆ ಅವುಗಳ ಸರಕುಗಳ ಆಮದಿಗೆ ಅಡ್ಡಿ ಉಂಟುಮಾಡು ವಂತಿಲ್ಲ. ನಮ್ಮ ಸರಕುಗಳೊಂದಿಗೆ ಸ್ಪರ್ಧಿಸಲು, ನಮ್ಮ ಸಂಸ್ಥೆಗಳೊಂದಿಗೆ ಸಹಯೋಗ ಸ್ಥಾಪಿಸಲು, ಹಣ ಹೂಡಲು ಯಂತ್ರ-ತಂತ್ರ ಇತ್ಯಾದಿ ತಂದು ಹೂಡಲು ಈಗಾಗಲೇ ಭಾರತ ಸರ್ಕಾರ ಅವಕ್ಕೆ ನಡೆಮಡಿ ಹಾಸಿದೆ. ಇನ್ನು ಳಿದಿರುವುದೇನು?

ನಮ್ಮ ಉದ್ಯಮಗಳ ವಿಶ್ವೀಕರಣದಿಂದ, ಎಂದರೆ ಇಡೀ ವಿಶ್ವದ ಮಾರು ಕಟ್ಟೆಯಲ್ಲಿ ನಮ್ಮದನ್ನೂ ಸಮಾವೇಶಗೊಳಿಸುವುದರಿಂದ, ಜಗದ್ವ್ಯಾಪಿ ಸ್ಪರ್ಧೆಯಲ್ಲಿ ನಮ್ಮ ಉದ್ಯಮಗಳು ಬಲವಾಗಿ ನಿಂತು ಸೆಣಸಾಟ ನಡಸ ಬೇಕಾಗಿದೆ. ಅಳಿವು-ಉಳಿವಿನ ಹೋರಾಟವಿದು. ಅತ್ಯಂತ ಬಲಿಷ್ಠವಾದ್ದು ಉಳಿಯುತ್ತದೆ, ಇಲ್ಲದ್ದು ಅಳಿಯುತ್ತದೆ. ಆ ಶಕ್ತಿಯನ್ನು ನಮ್ಮ ಉದ್ಯಮ ಗಳು ಪಡೆದುಕೊಳ್ಳುವುದೆ? ವಿಶ್ವಪೇಟೆಯಲ್ಲಿ ಗೆದ್ದು ನಿಲ್ಲುವುದೆ? ಎಂಬುದು ಭವಿಷ್ಯದ ಮಾತು.

ಆದರೆ ಉಳಿದೆಲ್ಲ ದೇಶಗಳೂ ಡಂಕೆಲ್ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ನಡೆದಾಗ ನಾವೂ ಹೆಜ್ಜೆ ಕೂಡಿಸದಿರುವುದು ಸಾಧ್ಯವಿರಲಿಲ್ಲ ಎಂದು ಭಾರತ ಸರ್ಕಾರ ತನ್ನ ತೀರ್ಮಾನವನ್ನು ಸಮರ್ಥಿಸಿಕೊಂಡಿದೆ. ಸಾರ್ವತ್ರಿಕ ಒಪ್ಪಂದಕ್ಕೆ ನಾವೂ ಅನುಮತಿ ನೀಡದಿದ್ದರೆ ಒಂದೊಂದೂ ದೇಶದೊಂದಿಗೆ ಬೇರೆ ಬೇರೆಯಾಗಿ, ನಾನಾ ಸರಕುಗಳ ವಿಚಾರದಲ್ಲಿ, ಸೇವೆಗಳ ಬಗ್ಗೆ, ಒಪ್ಪಂದ ಮಾಡಿಕೊಳ್ಳಬೇಕಾಗುತ್ತಿತ್ತು! ಈಗಿನ ಒಟ್ಟು ಇಪ್ಪತ್ತೆಂಟು ಒಪ್ಪಂದಗಳ ಬದಲು ಆಗ ನೂರ ಹದಿನಾರು ದೇಶಗಳೊಂದಿಗೆ ಒಟ್ಟು ೩,೨೪೮ ಒಪ್ಪಂದ ಮಾಡಿಕೊಳ್ಳಬೇಕಾಗುತ್ತಿತ್ತು. ಒಂದೊಂದು ದೇಶವೂ ನಮ್ಮ ದೌರ್ಬಲ್ಯದ ದುರ್ಲಾಭ ಪಡೆಯುತ್ತಿತ್ತು. ಎಲ್ಲರಿಗೂ ಆದದ್ದು ನನಗೂ ಆಗಲಿ ಎಂದು ಒಟ್ಟನಲ್ಲಿ ಮುಳುಗು ಹಾಕಿದ್ದೇ ಕ್ಷೇಮಕರ ಎಂದು ಭಾರತ ಸರ್ಕಾರ ವಾದಿಸಿದೆ. ಅಲ್ಲದೆ, ಈ ಒಪ್ಪಂದದ ಪ್ರಕಾರ ಬದಲಾವಣೆಗಳನ್ನು ಮಾಡಿಕೊಳ್ಳಲು ಹತ್ತು

ವರ್ಷಗಳ ಅವಧಿಯುಂಟು. ಈ ಪರಿವರ್ತನೆಯ ಕಾಲದಲ್ಲಿ ನಾವು ಆರ್ಥಿಕವಾಗಿ ಬಲಸಂವರ್ಧನೆ ಮಾಡಿಕೊಂಡಲ್ಲಿ, ಒಟ್ಟಿನಲ್ಲಿ ಈ ಒಪ್ಪಂದ ನಮಗೆ ಲಾಭವನ್ನೇ ತಂದುಕೊಡಬಹುದು. ಮುಂದಿನ ಹತ್ತು ವರ್ಷಗಳಲ್ಲಿ ಪ್ರಪಂಚದ ರಫ್ತು ವ್ಯಾಪಾರ ೨೫,೦೦೦ ಕೋಟಿ ಡಾಲರುಗಳಷ್ಟು ಹೆಚ್ಚುತ್ತದೆ. ಇದರಲ್ಲಿ ಭಾರತದ ಪಾಲು ಕೇವಲ ೦.೫% ಎಂದು ಇಟ್ಟುಕೊಂಡರೂ ನಮ್ಮ ರಫ್ತು ೧೨೫ ಕೋಟಿ ಡಾಲರುಗಳಷ್ಟು ಅಧಿಕವಾಗುತ್ತದೆ ಎಂದು ಆಶಿಸಲಾಗಿದೆ. ಈ ಕಾಮನಬಿಲ್ಲನ್ನು ಹಿಡಿದು ನಾವು ಯುದ್ಧಕ್ಕೆ ಹೊರಟು ಜಯಸಾಧಿಸ ಬಲ್ಲೆವೆ? ಈ ಶತಮಾನದ ಕೊನೆಯ ವೇಳೆಗೆ ಇದಕ್ಕೆ ಉತ್ತರ ಲಭ್ಯ.

ಎಚ್ಚೆಸ್ಕೆ



ನಮ್ಮ ನಡೆನುಡಿಗಳೇ ನಮ್ಮ ಧರ್ಮವನ್ನು ಹೇಳುತ್ತವೆ. ಅದನ್ನು ತಿಳಿದೇ ನಡೆಯಬೇಕು ಮತ್ತು ನುಡಿಯಬೇಕು. ಇಲ್ಲದಿದ್ದರೆ ನೀನು ಧರ್ಮ ಭ್ರಷ್ಟನಾಗುವೆ.

—ಭಗವಾನ್ ಬುದ್ಧ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಚಂದಾ ವಿವರಗಳು :

ಬಿಡಿ ಪತ್ರಿಕೆ	ರೂ. 3-00
ವಾರ್ಷಿಕ ಚಂದಾ	ರೂ. 30-00

ಆಜೀವ ಸದಸ್ಯತ್ವದ ಚಂದಾ :

ಸಂಸ್ಥೆಗೆ	ರೂ. 500-00
ವ್ಯಕ್ತಿಗೆ	ರೂ. 300-00

Reg. No. KRNN. 29 / WPP 6

LICENSE No. 21
LICENSED TO POST WITH PAYMENT

ನೀವು ಓದಲೇಬೇಕಾದ ಪುಸ್ತಕಗಳು....

ಯುದ್ಧ ಮತ್ತು ಶಾಂತಿ (3 ಸಂಪುಟಗಳಲ್ಲಿ)

ಶರಣಚರಿತಾಮೃತ

ಪ್ರಥಮ ಚಿಕಿತ್ಸೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನೈಟಿಂಗೇಲ್ ಮತ್ತು ಇತರ ಕಥೆಗಳು

ರಾಮಕೃಷ್ಣ ಪರಮಹಂಸ

ಬಸವಣ್ಣನವರ ಮಾತು

ಹಿಂದೂಧರ್ಮ ಭಾಗ ೧ ಮತ್ತು ೨

ನಾಗರಮರಿ

ಮಹಾಶ್ವೇತೆ

ಅಶೋಕನ ಶಿಲಾ ಶಾಸನಗಳು

ಶ್ರೀಶಂಕರಾಚಾರ್ಯ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

Edited by R. Boraiah, Printed by H. V. Sreenivasachar, Manager at Karnataka State Adult Education Council Press and Published by Karnataka State Adult Education Council Mysore city (India).